ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 8 ಮಂಗಳವಾರ 2025

ಸಂಪುಟ: 46 | ಸಂಚಿಕೆ: 82 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹಠಾತ್ ಸಾವು 'ಅಧಿಸೂಚಿತ ಕಾಯಿಲೆ'

ಮರಣೋತ್ತರ ಪರೀಕ್ಷೆ ಕಡ್ಡಾಯ



ಬೆಂಗಳೂರು, ಜು.7– ರಾಜ್ಯ ಸರ್ಕಾರ ಹಠಾತ್ ಸಾವುಗಳನ್ನು 'ಅಧಿಸೂಚಿತ ಕಾಯಿಲೆ' ಎಂದು ಸೋಮವಾರ ಘೋಷಿಸಿದ್ದು, ಅಂತಹ ಪ್ರಕರಣಗಳಲ್ಲಿ ಮರಣೋತ್ತರ ಪರೀಕ್ಷೆ ನಡೆಸಲು ನಿರ್ಧರಿಸಿದೆ.

ರಾಜ್ಯದಲ್ಲಿ 15 ವರ್ಷಕ್ಕಿಂತ ಮೇಲ್ಪಟ್ಟವರನ್ನು ಹೆಚ್ಚಿನ ತಪಾಸಣೆಗೆ ಒಳಪಡಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದ್ದಾರೆ. ರಾಜ್ಯದಲ್ಲಿ, ವಿಶೇಷವಾಗಿ ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ ಸರಣಿ ಸಾವು ಹಿನ್ನೆಲೆಯಲ್ಲಿ ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಹೃದಯಾಘಾತದಿಂದ ಮೃತಪಟ್ಟವರ ಮರಣೋತ್ತರ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗುವುದು ಎಂದು ಹೇಳಿದರು.

ಹಠಾತ್ ಸಾವುಗಳನ್ನು 'ಅಧಿಸೂಚಿತ ಕಾಯಿಲೆ' ಎಂದು ಘೋಷಿಸಲು ನಾವು ನಿರ್ಧರಿಸಿದ್ದೇವೆ ಆಸ್ಪತ್ರೆಗಳ ಹೊರಗೆ ಹಠಾತ್ ಸಾವು ಸಂಭವಿಸಿದರೆ ಅದನ್ನು ಸರ್ಕಾರಕ್ಕೆ ತಿಳಿಸಬೇಕು ಎಂದು ಸಚಿವರು ಹೇಳಿದರು. ಹುಟ್ಟಿನಿಂದಲೇ ರೋಗಗಳನ್ನು ಹೊಂದಿರುವ ಜನ ಇರುವುದರಿಂದ ಸುಮಾರು 15 ವರ್ಷ ವಯಸ್ಸಿನ ಮಕ್ಕಳು ಸೇರಿದಂತೆ ಹೆಚ್ಚಿನ ಜನರನ್ನು ವರ್ಷಕ್ಕೊಮ್ಮೆಯಾದರೂ ತಪಾಸಣೆ ಮಾಡುವ ಅಗತ್ಯವನ್ನು ಸಚಿವರು ಒತ್ತಿ ಹೇಳಿದರು. ಹೃದಯಾಘಾತ ಮತ್ತು ಹಠಾತ್ ಸಾವುಗಳಿಗೆ ಕಾರಣವಾಗುವ ರೋಗಗಳ ಕುರಿತು ಪಠ್ಯಪುಸ್ತಕಗಳಲ್ಲಿ ಪ್ರತ್ಯೇಕ ಪಠ್ಯ ಅಳವಡಿಸಲು ಶಿಕ್ಷಣ ಇಲಾಖೆಗೆ ಸೂಚಿಸಲಾಗುವುದು ಎಂದು ಅವರು ತಿಳಿಸಿದರು. ಸಿಪಿಆರ್ ಕುರಿತು ಜನರಿಗೆ ತರಬೇತಿ ನೀಡಲು ಸಹ ನಿರ್ಧರಿಸಲಾಗಿದೆ.

ಇದಲ್ಲದೆ ರಾಜ್ಯದ 86 ಆಸ್ಪತ್ರೆಗಳಲ್ಲಿ ನಡೆಯುತ್ತಿರುವ 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ' ಯೋಜನೆಯನ್ನು ಈ ವರ್ಷ ತಾಲೂಕು ಮಟ್ಟದ ಆಸ್ಪತ್ರೆಗಳಿಗೂ ವಿಸ್ತರಿಸಲಾಗುವುದು ಎಂದು ಅವರು ಹೇಳಿದರು. ಹಠಾತ್ ಹೃದಯಾಘಾತದಿಂದ ಬಳಲುತ್ತಿರುವ ಜನರಿಗೆ ಚಿಕಿತ್ಸೆ ನೀಡುವ ಗುರಿಯನ್ನು ಈ ಯೋಜನೆ ಹೊಂದಿದೆ. ಎಂದು ದಿನೇಶ್ ಗೂಂಡೂರಾವ್ ಹೇಳಿದರು.

ಕೊರೊನಾ ವೇಳೆ ಸೇವಿಸಿದ ನಾನಾ ಔಷಧಗಳ ಪರಿಣಾಮವೂ ಇರಬಹುದು!



- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶಂಕೆ
- ಆದರೆ ಜಯದೇವ ನಿರ್ದೇಶಕ ಡಾ.ರವೀಂದ್ರನಾಥ್ ಸಮಿತಿ ಕೋವಿಡ್ ಲಸಿಕೆ ಅಡ್ಡ ಪರಿಣಾಮ ತಳ್ಳಿ ಹಾಕಿದೆ

ಬೆಂಗಳೂರು, ಜು.7 (ಕೆಎಂಶಿ)– ಕೋವಿಡ್ ಸಂದರ್ಭದಲ್ಲಿ ವಿವಿಧ ಮಾದರಿ ಔಷಧಗಳನ್ನು ಸೇವಿಸಿದ್ದರಿಂದ ಹೃದಯಾಘಾತದ ಕಾರಣಗಳಲ್ಲಿ ಅದೂ ಒಂದಾಗಿರುಹುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಇಂದಿಲ್ಲಿ ತಿಳಿಸಿದ್ದಾರೆ.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೃದಯಾಘಾತಕ್ಕೆ ಕೊರೊನಾ ಲಸಿಕೆ ಕಾರಣವಲ್ಲ ಎಂಬುದಾಗಿ ಸ್ಪಷ್ಟಪಡಿಸಿದ ಅವರು, ಕೋವಿಡ್–19 ರೋಗ ತಗುಲಿದ ಕೆಲವರು ಹೃದಯಸ್ತಂಭನಕ್ಕೆ ಒಳಗಾಗಿದ್ದಾರೆ ಎಂದು. ಕೋವಿಡ್ ಸಮಯದಲ್ಲಿ ಸೇವಿಸಿದ ಬೇರೆ ಬೇರೆ ಔಷಧಗಳ ಪರಿಣಾಮ ಒಂದೆಡೆ ಯಾದರೆ, ಬೊಜ್ಜು, ಮಧುಮೇಹ ಮತ್ತಿತರ ಸಮಸ್ಯೆಗಳು ಹೃದಯಾಘಾತಕ್ಕೆ ಕಾರಣವಾಗಿವೆ ಎಂದರು.

ಹಠಾತ್ ಹೃದಯಾಘಾತ ಕುರಿತು ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದರು. ಡಾ.ರವೀಂದ್ರನಾಥ್ ನೇತೃತ್ವದ ಸಮಿತಿ ನೀಡಿರುವ ವರದಿಯಲ್ಲಿ ಕೋವಿಡ್ ಲಸಿಕೆಯಿಂದ ಅನುಕೂಲವಾಗಿದೆಯೇ ಹೊರತು ಯಾವುದೇ ರೀತಿಯ ಅಡ್ಡ ಪರಿಣಾಮ ಉಂಟಾಗಿಲ್ಲ ಎಂದು ತಿಳಿಸಲಾಗಿದೆ.

ಕೊರೊನಾ ಪೀಡಿತರಿಗೆ ಒಂದು ವರ್ಷದೊಳಗೆ ರಕ್ತ ಹೆಪ್ಪುಗಟ್ಟಿ ರಕ್ತನಾಳ ಬ್ಲಾಕೇಜ್ ಆಗುವ ಸಾಧ್ಯತೆ ಇದೆ. ಆದರೆ, ಮೂರು ವರ್ಷದ ನಂತರ ಅದರ ಪರಿಣಾಮ ಅಷ್ಟರ ಮಟ್ಟಿಗೆ ಇರುವುದಿಲ್ಲ. ಎಲ್ಲಾ ತಾಲೂಕು ಆಸ್ಪತ್ರೆಗಳಿಗೆ ಹೃದಯಜ್ಯೋತಿ ಯೋಜನೆ ವಿಸ್ತರಿಸಲಾಗುವುದು ಎಂದರು.

ಪ್ರವಾಸಿಗರ ಸೆಳೆಯಲು ರಾಜ್ಯ ಸರ್ಕಾರ ಪ್ಯಾಕೇಜ್

ಜಲಪಾತ, ಧಾರ್ಮಿಕ, ವನ್ಯಜೀವಿ ಪ್ರವಾಸ ಪ್ಯಾಕೇಜ್‌ಗೆ ಚಿಂತನೆ



ಬೆಂಗಳೂರು, ಜು.7– ರಾಜ್ಯದ ಎಲ್ಲಾ ಜಲಪಾತಗಳು, ಧಾರ್ಮಿಕ ಕ್ಷೇತ್ರ ಹಾಗೂ ವನ್ಯಜೀವಿ ತಾಣಗಳತ್ತ ಪ್ರವಾಸಿಗರ ಸೆಳೆಯಲು ಮುಂದಾಗಿರುವ ರಾಜ್ಯ ಸರ್ಕಾರ, ಸಂಯೋಜಿತ ಪ್ರವಾಸ ಪ್ಯಾಕೇಜ್ ಆರಂಭಿಸಲು ಚಿಂತನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ಪ್ರವಾಸೋದ್ಯಮ ಇಲಾಖೆಯು ಸರ್ಕಾರಿ ಮತ್ತು ಖಾಸಗಿ ಪಾಲುದಾರರನ್ನು ಒಳಗೊಂಡಂತೆ ಕ್ಯುರೇಟೆಡ್ ಪ್ರವಾಸ (ಸಂಯೋಜಿತ ಪ್ರವಾಸ) ಪ್ಯಾಕೇಜ್ ಆರಂಭಿಸಲು ಚಿಂತನೆ ನಡೆಸಿದೆ.

ಧಾರ್ಮಿಕ ದತ್ತಿ, ನೀರಾವರಿ, ಕಂದಾಯ ಮತ್ತು ಅರಣ್ಯ ಇಲಾಖೆಗಳನ್ನು ಒಳಗೊಂಡಂತೆ ಜಲಪಾತ, ಧಾರ್ಮಿಕ ಹಾಗೂ ವನ್ಯಜೀವಿ ಪ್ರವಾಸಗಳನ್ನು ಪ್ರಾರಂಭಿಸಲು ಮುಂದಾಗಿದೆ. ತನ್ನ ಈ ಚಿಂತನೆಯಲ್ಲಿ ಆತಿಥ್ಯ ವಲಯದ ಖಾಸಗಿ ಸಂಸ್ಥೆಗಳು ಮತ್ತು ಸಾಹಸ ಗುಂಪುಗಳನ್ನೂ ಸೇರ್ಪಡೆಗೊಳಿಸಲು ಮುಂದಾಗಿದೆ. ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಗೋಕಾಕ್, ಬೆಳಗಾವಿ, ಹಾಸನ, ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ■6ನೇ ಪುಟಕ್ಕೆ

ಸಿಎಂ, ಡಿಸಿಎಂ ದೆಹಲಿ ಪ್ರವಾಸ

ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಜ್ಯ ರಾಜಕೀಯ ಪಡಸಾಲೆಯಲ್ಲಿ ಭಾರಿ ಕುತೂಹಲ

- ಸಿಎಂ ದಸರಾದಲ್ಲಿ ವೈಮಾನಿಕ ಪ್ರದರ್ಶನ ಸಂಬಂಧ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭೇಟಿ ಮಾಡುವ ಕಾರ್ಯಕ್ರಮ
- ಇಲಾಖಾ ವಿಷಯಗಳ ಕಾರ್ಯನಿಮಿತ್ತ ದೆಹಲಿ ಪ್ರವಾಸ ಕೈಗೊಳ್ಳುತ್ತಿರುವುದಾಗಿ ಡಿಸಿಎಂ ಮಾಹಿತಿ



ಬೆಂಗಳೂರು, ಜು.7 (ಕೆಎಂಶಿ)– ಪ್ರಸಕ್ತ ರಾಜ್ಯ ರಾಜಕಾರಣದ ಬಗ್ಗೆ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸುದೀರ್ಘ ವಿದೇಶ ಪ್ರವಾಸದ ನಂತರ ಮಂಗಳವಾರ ಮುಂಜಾನೆ ದೆಹಲಿಗೆ ಆಗಮಿಸುತ್ತಿದ್ದು, ಅವರನ್ನು ಬುಧವಾರ ಇಲ್ಲವೆ, ಗುರುವಾರ ಈ ಇಬ್ಬರು ನಾಯಕರು ಪ್ರತ್ಯೇಕವಾಗಿ ಭೇಟಿ ಮಾಡಲಿದ್ದಾರೆ.

ದೆಹಲಿ ಪ್ರವಾಸವನ್ನು ಮುಖ್ಯಮಂತ್ರಿ ಸಚಿವಾಲಯ ದೃಢಪಡಿಸಿದೆ. ಆದರೆ, ರಾಹುಲ್ ಭೇಟಿ ಬಗ್ಗೆ ಯಾವುದೇ ಮಾಹಿತಿ ಇಲ್ಲ. ವಿಶ್ವವಿಖ್ಯಾತ ಮೈಸೂರು ದಸರಾವನ್ನು ಈ ಬಾರಿ ಅದ್ಧೂರಿ ಹಾಗೂ ವಿಶೇಷವಾಗಿ ಆಚರಿಸಲು ಮುಖ್ಯಮಂತ್ರಿ ಈಗಾಗಲೇ ತೀರ್ಮಾನ ಕೈಗೊಂಡಿದ್ದಾರೆ.

ಹಿಂದಿನಂತೆ ಈ ಬಾರಿಯೂ ದಸರಾ ಮಹೋತ್ಸವದಲ್ಲಿ ವೈಮಾನಿಕ ಪ್ರದರ್ಶನ ಆಯೋಜನೆ ಕುರಿತು ಚರ್ಚಿಸಲು ಮುಖ್ಯಮಂತ್ರಿ ಅವರು ಬುಧವಾರ ದೆಹಲಿಗೆ ತೆರಳುತ್ತಿದ್ದಾರೆಂದು ಸಚಿವಾಲಯ ತಿಳಿಸಿದೆ.

ಬುಧವಾರ ಸಂಜೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾಗಿ ವೈಮಾನಿಕ ಪ್ರದರ್ಶನಕ್ಕೆ ಅನುಮತಿ ನೀಡುವಂತೆ ಕೋರಲಿದ್ದಾರೆ. ಇದು ದೆಹಲಿ ಪ್ರವಾಸದ ಒಂದು ಭಾಗವಾದರೆ, ಮುಖ್ಯವಾಗಿ ರಾಜಕೀಯ ವಿಷಯ ಚರ್ಚೆ ಉದ್ದೇಶದಿಂದಲೇ ಪ್ರವಾಸ ಕೈಗೊಳ್ಳಲಾಗುತ್ತಿದೆ ಎಂಬುದಾಗಿ ಉನ್ನತ ಮೂಲಗಳು ತಿಳಿಸಿವೆ.

ರಾಷ್ಟ್ರದಲ್ಲಿ ಹಿಂದುಳಿದ ವರ್ಗಗಳ ಸಮುದಾಯಗಳನ್ನು ಪಕ್ಷಕ್ಕೆ ಸೆಳೆಯಲು ಸಿದ್ದರಾಮಯ್ಯ ನೇತೃತ್ವದಲ್ಲಿ ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಅದರಲ್ಲಿ ತಮಗೆ ಪ್ರಮುಖ ಪಾತ್ರ ■6ನೇ ಪುಟಕ್ಕೆ

ಕಾಂಗ್ರೆಸ್ ಹೈಕಮಾಂಡ್ ನಮಗೆ ದೇವಸ್ಥಾನ ಇದ್ದ ಹಾಗೆ: ಡಿಕೆಶಿ

ಬೆಂಗಳೂರು, ಜು.7– ಕಾಂಗ್ರೆಸ್ ಹೈಕಮಾಂಡ್ ನಮಗೆ ದೇವಸ್ಥಾನ ಇದ್ದ ಹಾಗೆ. ಸಮಯ ಸಿಕ್ಕರೆ ಹೈಕಮಾಂಡ್ ಭೇಟಿಯಾಗಿ ಅವರಿಗೆ ಕೈ ಮುಗಿದು ಬರುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಎರಡು ದಿನ ದೆಹಲಿ ಪ್ರವಾಸ ಕೈಗೊಳ್ಳುತ್ತಿರುವ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಅರಣ್ಯ ಸಚಿವರನ್ನು ಭೇಟಿಯಾಗಬೇಕು. ತುಮಕೂರು ಮತ್ತು ಹಾಸನ ವಿಚಾರದಲ್ಲಿ ಕೇಂದ್ರ ಅನುಮತಿ ಕೊಡಬೇಕಿದೆ. ಈ ವಿಷಯದ ಕುರಿತು ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ. ಅರಣ್ಯ ಸಚಿವರ ಜೊತೆ ಕೇಂದ್ರ ಜಲ ಸಂಪನ್ಮೂಲ ಸಚಿವರು ಸಮಯ ಕೊಟ್ಟಿದ್ದಾರೆ. ಅವರ ಜೊತೆಗೂ ಚರ್ಚೆ ಮಾಡುತ್ತೇನೆ ಎಂದು ತಿಳಿಸಿದರು. ಇದೇ ವೇಳೆ ಸಮಯ ಸಿಕ್ಕರೆ ಹೈಕಮಾಂಡ್ ನಾಯಕರನ್ನು ಭೇಟಿಯಾಗ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಹೈಕಮಾಂಡ್ ಅನ್ನೋದು ದೇವಸ್ಥಾನ ಇದ್ದ ಹಾಗೆ. ಅವಕಾಶ ಸಿಕ್ಕರೆ ಭೇಟಿ ಆಗಿ ಕೈ ಮುಗಿದು ಬರುತ್ತೇವೆ ಎಂದು ತಿಳಿಸಿದರು.

ರಂಭಾಪುರಿ ಶ್ರೀಗಳು ಹೇಳಿದ ಮಾತು ನಿಜ ಆಗುತ್ತೆ

ಭಗವಂತನೇ ಶ್ರೀಗಳ ಬಾಯಲ್ಲಿ ಇದನ್ನು ಹೇಳಿಸಿರಬಹುದು: ಡಿಕೆಶಿ ಆಪ್ತ ಶಾಸಕ ಇಕ್ಬಾಲ್ ಹುಸೇನ್

ರಾಮನಗರ, ಜು.7– ರಂಭಾಪುರಿ ಶ್ರೀಗಳು ಹೇಳಿದ ಮಾತು ನಿಜ ಆಗುತ್ತದೆ. ಪವಿತ್ರವಾದ ನಾಲಿಗೆಯಲ್ಲಿ ಈ ವಿಚಾರವನ್ನು ನುಡಿದಿದ್ದಾರೆ. ಭಕ್ತಿಯಿಂದ ದೇವರ ಧ್ಯಾನ ಮಾಡುವ ಶ್ರೀಗಳು ಇದನ್ನು ಹೇಳಿದ್ದಾರೆ. ಭಗವಂತನೇ ಶ್ರೀಗಳ ಬಾಯಲ್ಲಿ ಇದನ್ನ ಹೇಳಿಸಿರಬಹುದು ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ.



ಡಿಸಿಎಂ ಡಿಕೆಶಿಗೆ ಉನ್ನತ ಸ್ಥಾನ ಸಿಗಬೇಕು ಎಂಬ ರಂಭಾಪುರಿ ಶ್ರೀ ಹೇಳಿಕೆ ವಿಚಾರ ಕುರಿತು ರಾಮನಗರದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಸಾಕಷ್ಟು ಶ್ರೀಗಳು, ಕಾರ್ಯಕರ್ತರು ಇದನ್ನು ಹೇಳುತ್ತಿದ್ದಾರೆ. ನಾನು ಕೂಡಾ ಹೇಳಿದ್ದೆ, ಅದಕ್ಕೆ ಈಗಲೂ ಬದ್ಧ. ಶರಣರು ಭಕ್ತಿಯಿಂದ ಅವರ ಬಾಯಲ್ಲಿ ನುಡಿದಿರುವುದು ಫಲ ಕೊಡುತ್ತದೆ. ಕೋಟಿ ಜನ ಹೇಳೋದು ಒಂದೇ, ಶ್ರೀಗಳು ಹೇಳೋದು ಒಂದೇ. ಭಗವಂತ ಎಲ್ಲರ ಮಾತನ್ನೂ ಕೇಳಲು ಸಾಧ್ಯವಿಲ್ಲ, ಅವರಿಗೆ ಹತ್ತಿರವಿರುವವರ ಪ್ರಾರ್ಥನೆ ಕೇಳ್ತಾನೆ. ಹಾಗಾಗಿ ಅವರ ನಾಲಿಗೆಯಲ್ಲಿ ಈ ಮಾತು ಬಂದಿದೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಅವರಿಗೆ ಎಐಸಿಸಿ ಒಬಿಸಿ ಅಧ್ಯಕ್ಷ ಸ್ಥಾನ ನೀಡಿರುವ ವಿಚಾರ ಕುರಿತು ಮಾತನಾಡಿ, ಸಿದ್ದರಾಮಯ್ಯ ಅವರಿಗೆ ಹಿಂದುಳಿದ ವರ್ಗದ ಮೇಲೆ ಬಹಳ ಪ್ರೀತಿ. ಅಲ್ಪಸಂಖ್ಯಾತರ ಸಮುದಾಯ ಸೇರಿ ಸಣ್ಣಪುಟ್ಟ ಸಮುದಾಯಕ್ಕೆ ಸಾಕಷ್ಟು ಅನುಕೂಲ ಮಾಡಿದ್ದಾರೆ. ■6ನೇ ಪುಟಕ್ಕೆ

ರೈಲು ಹಳಿ ದುರಸ್ತಿ ಕಾಮಗಾರಿ ಹಿನ್ನೆಲೆ

ಕೆಆರ್‌ಎಸ್ ರಸ್ತೆಯಲ್ಲಿ ಸಂಚಾರ ವ್ಯತ್ಯಯ

ವಿವಿಪುರಂ ಸಂಚಾರಿ ಪೋಲೀಸರಿಂದ ಬದಲಿ ಮಾರ್ಗದ ವ್ಯವಸ್ಥೆ



ಮೈಸೂರಿನ ಕೆಆರ್‌ಎಸ್ ರಸ್ತೆಯ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ ಹಳಿ ದುರಸ್ಥಿ ಕಾರ್ಯ ನಡೆಸುತ್ತಿರುವುದು.

ಮೈಸೂರು,ಜು.7(ಆರ್‌ಕೆ)– ರೈಲು ಹಳಿ ದುರಸ್ತಿ ಕಾಮಗಾರಿ ಹಿನ್ನೆಲೆಯಲ್ಲಿ ಕೆಆರ್‌ಎಸ್ ರಸ್ತೆ ವಾಹನ ಸಂಚಾರದಲ್ಲಿ ಮೂರು ದಿನ ವ್ಯತ್ಯಯವಾಗಲಿದೆ. ಮೈಸೂರಿನ ರಾಯಲ್ ಇನ್ ಸಿಗ್ನಲ್ ಲೈಟ್ ರಿಂಗ್ ರೋಡ್ ಜಂಕ್ಷನ್ ಸಮೀಪ ಕೆಆರ್‌ಎಸ್ ರಸ್ತೆ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ ಹಳಿ ಬದಲಿಸುವ ಕೆಲಸ ಇಂದು ಬೆಳಗ್ಗೆಯಿಂದ ಆರಂಭವಾಗಿದ್ದು, ಇಂದಿನಿಂದ ಬುಧವಾರದ ವರೆಗೆ (ಜು.7ರಿಂದ 9ರವರೆಗೆ) ಇಲ್ಲಿ ಕೆಆರ್‌ಎಸ್ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ನೈರುತ್ಯ ರೈಲ್ವೆ ಮೈಸೂರು ವಿಭಾಗವು ರೈಲು ಹಳಿ ಮಾರ್ಗ ನವೀಕರಿಸುತ್ತಿದ್ದು, ಪ್ಲೇಸರ್ ಕ್ವಿಕ್ ರಿಲೇಯಿಂಗ್ ಸಿಸ್ಟಂ (ಪಿಕ್ಯೂಆರ್‌ಎಸ್) ಯಂತ್ರ ಬಳಸಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಅದಕ್ಕಾಗಿ ರೈಲ್ವೆ ಇಲಾಖೆ ಮನವಿಯಂತೆ ಮೈಸೂರಿನ ವಿವಿಪುರಂ ಸಂಚಾರ ಠಾಣೆ ಪೊಲೀಸರು ಈ ರಸ್ತೆಯಲ್ಲಿ ಮೂರು ದಿನಗಳ ಕಾಲ ಸಂಚಾರ ನಿರ್ಬಂಧಿಸಿದ್ದಾರೆ.

ಬದಲಿ ಮಾರ್ಗ: ರೈಲ್ವೆ ಲೆವೆಲ್ ಕ್ರಾಸ್ ಬಳಿ ಸಂಚಾರ ಬಂದ್ ಮಾಡಿರುವುದರಿಂದ ಕೆಆರ್‌ಎಸ್ ರಸ್ತೆಗೆ ಬದಲಿ ಸಂಚಾರ ಮಾರ್ಗ ವ್ಯವಸ್ಥೆ ಮಾಡಲಾಗಿದೆ. ಮೈಸೂರಿನಿಂದ ಪಂಪ್‌ಹೌಸ್ ಕಡೆಗೆ ಹೋಗುವ ವಾಹನಗಳು ಕೆಆರ್‌ಎಸ್ ರಸ್ತೆಯ ರಾಯಲ್ ಇನ್ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ರಿಂಗ್ ರಸ್ತೆಯಲ್ಲಿ ಮುಂದೆ ಹೋಗಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಮುಂದೆ ಹೋಗಿ ಫಾಲ್ಕನ್ ಫ್ಯಾಕ್ಟರಿ ಬಳಿ ಕೆಆರ್‌ಎಸ್ ರಸ್ತೆಗೆ ಬಲಕ್ಕೆ ■6ನೇ ಪುಟಕ್ಕೆ

ಅನ್ನಭಾಗ್ಯ ಅಕ್ಕಿ ಸಾಗಿಸುವ ಲಾರಿಗಳ 260 ಕೋಟಿ ಬಾಡಿಗೆ ಬಾಕಿ

ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ ಲಾರಿ ಮಾಲೀಕರು



ಬೆಂಗಳೂರು, ಜು.7– ಸರ್ಕಾರದ ಅನ್ನಭಾಗ್ಯ ಗ್ಯಾರಂಟಿ ಯೋಜನೆಗೆ ಮತ್ತೊಂದು ವಿಘ್ನ ಎದುರಾಗಿದೆ. ಬಾಡಿಗೆ ನೀಡದ ಸರ್ಕಾರದ ವಿರುದ್ಧ ಲಾರಿ ಚಾಲಕರು ಮತ್ತು ಮಾಲೀಕರು ಆಕ್ರೋಶ ಹೊರಹಾಕಿ ಆಹಾರ ಧಾನ್ಯ ಸಾಗಾಣಿಕೆಯನ್ನು ಇಂದಿನಿಂದ ಬಂದ್ ಮಾಡಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ.

ಫೆಬ್ರವರಿಯಿಂದ ಮೇ ತಿಂಗಳವರೆಗೆ ಸರ್ಕಾರ ಬಾಕಿ ಮೊತ್ತ ಪಾವತಿಸಿಲ್ಲ. ಬಾಕಿ ಹಣ ಪಾವತಿಯಾಗುವವರೆಗೆ ಅನ್ನಭಾಗ್ಯದ ಅಕ್ಕಿ ಸರಬರಾಜು ಮಾಡುವುದಿಲ್ಲ. ಹಣ ಪಾವತಿಯಾಗದ ಕಾರಣ ಮೂರರಿಂದ ನಾಲ್ಕು ಸಾವಿರ ಲಾರಿ ಮಾಲೀಕರು ಕಂ ಚಾಲಕರು ಸಂಕಷ್ಟದಲ್ಲಿದ್ದಾರೆ. ಮುಷ್ಕರದಿಂದ ಯಶವಂತಪುರ ಎಂಪಿಎಂಸಿ, ಚಾಮರಾಜಪೇಟೆ ಲಾರಿ ಸ್ಟ್ಯಾಂಡ್ ಬಳಿ ಲಾರಿಗಳು ನಿಂತಲ್ಲೇ ನಿಂತಿವೆ.

ಸರ್ಕಾರ ಅನ್ನಭಾಗ್ಯ ಅಕ್ಕಿ ಸಾಗಣೆಯ ಸುಮಾರು 260 ಕೋಟಿ ರೂ. ಬಾಡಿಗೆಯನ್ನು ಬಾಕಿ ಉಳಿಸಿಕೊಂಡಿದೆ. ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪಡಿತರ ಆಹಾರ ಧಾನ್ಯಗಳ ಸಗಟು ಹಾಗೂ ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರ ■6ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಆರೇ ತಿಂಗಳಲ್ಲಿ 9,428 ಮಂದಿಗೆ ನಾಯಿ ಕಡಿತ

ಅದೃಷ್ಟವಶಾತ್ ಸೂಕ್ತ ಚಿಕಿತ್ಸೆ ಮೂಲಕ ಈ ಎಲ್ಲರೂ ಪ್ರಾಣಾಪಾಯದಿಂದ ಪಾರು



ಮೈಸೂರು,ಜು.7(ಪಿಎಂ)– ಹುಚ್ಚು ನಾಯಿ ಕಡಿತದಿಂದ ಮಾರಣಾಂತಿಕ ರೇಬಿಸ್ ಸೋಂಕಿಗೆ ತುತ್ತಾಗಬೇಕಾಗುತ್ತದೆ. ಒಮ್ಮೆ ರೇಬಿಸ್ ಸೋಂಕು ತಗುಲಿದರೆ, ಮಾನವರೇ ಆಗಲಿ, ಪ್ರಾಣಿಗಳೇ ಆಗಲಿ ಮರಣ ಖಚಿತ. ಹಾಗಾಗಿ ಶೀಘ್ರವೇ ಸೂಕ್ತ ಚಿಕಿತ್ಸೆ ಪಡೆಯುವುದು ಅತ್ಯವಶ್ಯ. 2025ರ ಜನವರಿಯಿಂದ ಜೂನ್‌ವರೆಗೆ ಮೈಸೂರು ಜಿಲ್ಲೆಯಲ್ಲಿ 9,428 ಮಂದಿ ನಾಯಿಗಳ ಕಡಿತಕ್ಕೆ ಒಳಗಾಗಿದ್ದು, ಈ ಎಲ್ಲರೂ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆರೋಗ್ಯ ಇಲಾಖೆಯ ಮಾಹಿತಿಯಂತೆ 1ರಿಂದ 12 ವರ್ಷದೊಳಗಿನ 1,763 ಮಕ್ಕಳು, 13ರಿಂದ 18 ವರ್ಷದೊಳಗಿನ 840 ಮಕ್ಕಳು ಹಾಗೂ 18 ವರ್ಷ ಮೇಲ್ಪಟ್ಟ 6,825 ಮಂದಿ ಸೇರಿದಂತೆ 9,428 ಮಂದಿ ಕಳೆದ ಆರು ತಿಂಗಳಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಾಯಿಗಳ ಕಡಿತಕ್ಕೆ ಒಳಗಾಗಿದ್ದಾರೆ. ಇವರು ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು, ಅಪಾಯದಿಂದ ಪಾರಾಗಿದ್ದು, ಈ ಒಟ್ಟು ಪ್ರಕರಣಗಳಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ 114 ಮಂದಿಯೂ ಇದ್ದಾರೆ.

ರೇಬಿಸ್ ಸೋಂಕು ಹೊಂದಿರುವ ಪ್ರಾಣಿಗಳ ಜೊಲ್ಲಿನ ಸಂಪರ್ಕದಿಂದ, ತೆರೆದ ಚರ್ಮದ ಮೇಲೆ ಅವುಗಳು ನೆಕ್ಕುವುದರಿಂದ, ಪರಚುವಿಕೆಯಿಂದ ಹಾಗೂ ಕಚ್ಚುವಿಕೆಯಿಂದ ಈ ಸೋಂಕು ಹರಡುತ್ತದೆ. ಹುಚ್ಚುನಾಯಿ ಕಡಿತದಿಂದ ಮಾರಣಾಂತಿಕ ರೇಬಿಸ್ ಸೋಂಕು ಹರಡುವ ಪ್ರಮಾಣ ಶೇ.97ರಷ್ಟಿದೆ.

> ರೇಬಿಸ್ ತಡೆಗಟ್ಟುವ ಚಟುವಟಿಕೆಗಳನ್ನು ಸಮರೋಪಾದಿಯಲ್ಲಿ ನಡೆಸಲು ಇಲಾಖೆ ಆದ್ಯತೆ ನೀಡಿದೆ. ಅಗತ್ಯವಾದ ಲಸಿಕೆಗಳು ಲಭ್ಯವಿವೆ. ಒಂದು ವೇಳೆ ಕೊರತೆಯಾದಲ್ಲಿ ಖರೀದಿಸಿ ದಾಸ್ತಾನು ಮಾಡುವಂತೆಯೂ ಸರ್ಕಾರ ಸೂಚನೆ ನೀಡಿದ್ದು, ಅದರಂತೆ ಕ್ರಮ ವಹಿಸಲಾಗುವುದು. ರೇಬಿಸ್ ವಿರುದ್ಧದ ಲಸಿಕೆಯು ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಪೂರ್ಣ ಉಚಿತ. ನಾಯಿ ಕಡಿತದ ಅಪಾಯಗಳು ಹಾಗೂ ಸೂಕ್ತ ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಲು ಇಲಾಖೆಯಿಂದ ಮನೆ ಮನೆಗೆ ಕರಪತ್ರ ಸಹ ವಿತರಣೆ ಮಾಡಲಾಗುತ್ತಿದೆ. ವರ್ಷದಿಂದಲೇ ಈ ರೀತಿಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.
>
> -ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿಗಳು,



ಜಾಗೃತಿಗಾಗಿ ವಿಶ್ವ ಪ್ರಾಣಿಜನ್ಯ ರೋಗ ದಿನ



ರೇಬಿಸ್ ಮಾರಣಾಂತಿಕ ವೈರಸ್‌ನಿಂದ ಬರುವ ಪ್ರಾಣಿಜನ್ಯ ರೋಗ. ಪ್ರಾಣಿಗಳಿಂದ ಮನುಷ್ಯರಿಗೆ ಹಾಗೂ ಮನುಷ್ಯರಿಂದ ಪ್ರಾಣಿಗಳಿಗೆ ಹರಡುವ ರೋಗಗಳನ್ನು ಪ್ರಾಣಿಜನ್ಯ ರೋಗ ಎಂದು ಕರೆಯಲಾಗುತ್ತದೆ. ರೇಬಿಸ್ ಪ್ರಾಣಿಜನ್ಯ ರೋಗಗಳ ಪೈಕಿ ಅತ್ಯಂತ ಮಾರಕ ಎಂದು ಪರಿಗಣಿಸಲಾಗಿದೆ. ಪ್ರಾಣಿ ಮತ್ತು ಮನುಷ್ಯರ ನಡುವೆ ಹರಡುವ ರೇಬಿಸ್ ಸೇರಿದಂತೆ ಇನ್ನಿತರ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ 'ಜುಲೈ 6'ರಂದು ವಿಶ್ವ ಪ್ರಾಣಿಜನ್ಯ ರೋಗ ದಿನ ಆಚರಿಸಲಾಗುತ್ತದೆ. ಜೊತೆಗೆ ವಿಶ್ವ ರೇಬಿಸ್ ದಿನವನ್ನು ಪ್ರತಿವರ್ಷ 'ಸೆಪ್ಟೆಂಬರ್ 28'ರಂದು ಆಚರಿಸಲಾಗುತ್ತದೆ. ಇದು ರೇಬಿಸ್ ರೋಗದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ದಿನದ ಆಚರಣೆ ನಡೆಯುತ್ತದೆ.

ಕಡಿತದ ಕೂಡಲೇ ಏನು ಮಾಡಬೇಕು: ಯಾವುದೇ ನಾಯಿ ಕಚ್ಚಿದ ಕೂಡಲೇ ಗಾಯವನ್ನು 10 ನಿಮಿಷಗಳವರೆಗೆ ಸಾಬೂನು, ಇಲ್ಲವೆ ಡಿಟರ್ಜೆಂಟ್ ಸೋಪು ಬಳಸಿ ಹರಿಯುವ ನೀರಿಯಲ್ಲಿ ತೊಳೆಯಬೇಕು. ಕಚ್ಚಿದ ಗಾಯವನ್ನು ತೊಳೆದು ಒಣಗಿಸಿದ ನಂತರ ಸ್ಪಿರಿಟ್ ಅಥವಾ ಅಯೋಡಿನ್‌ನಂತಹ ನಂಜು ನಿರೋಧಕಗಳನ್ನು ಹಚ್ಚಬೇಕು. ತಕ್ಷಣವೇ ಹತ್ತಿರದ ಆ್ಯಂಟಿ ರೇಬಿಸ್ ಕ್ಲಿನಿಕ್‌ಗೆ ಭೇಟಿ ನೀಡಿ ಲಸಿಕೆ ಪಡೆಯಬೇಕು. ವೈದ್ಯರ ಸಲಹೆಯಂತೆ ನಿಗದಿತ ದಿನ ಗಳಲ್ಲಿ ಲಸಿಕೆ ಪಡೆಯಬೇಕಿದ್ದು, ಕೇವಲ ಒಂದು ಲಸಿಕೆಯಿಂದ ■6ನೇ ಪುಟಕ್ಕೆ

ಮೈಸೂರು ಮಿತ್ರ ಮಂಗಳವಾರ 8 ಜುಲೈ 2025

ಜು.10, ಬೆಳದಿಂಗಳ ಸಂಗೀತದಲ್ಲಿ ಪ್ರಭುಸ್ವಾಮಿ ಚ.ಮಳಿಮಠ ಉಪನ್ಯಾಸ

ವಿದ್ವಾನ್ ಸಂಪಗೋಡು ಎಸ್.ವಿಘ್ನರಾಜರಿಂದ ಗಾಯನ







ಮೈಸೂರು, ಜು.7–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜು.10ರಂದು ಗುರುವಾರ ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಗುರುಪೂರ್ಣಿಮೆ ಹಾಗೂ ಬೆಳದಿಂಗಳ ಸಂಗೀತ–281ರ ಅಂಗವಾಗಿ ಪ್ರಭುಸ್ವಾಮಿ ಚ. ಮಳಿಮಠ ಅವರಿಂದ ಉಪನ್ಯಾಸ ಮತ್ತು ವಿದ್ವಾನ್ ಸಂಪಗೋಡು ಎಸ್.ವಿಘ್ನರಾಜ ಅವರಿಂದ ಗಾಯನ ಏರ್ಪಡಿಸಲಾಗಿದೆ.

ಪ್ರಭುಸ್ವಾಮಿ ಚ.ಮಳಿಮಠರವರು ಹೊಸಪೇಟೆ ಆಕಾಶವಾಣಿಯಲ್ಲಿ 1991ರಲ್ಲಿ ಕೆಲಸಕ್ಕೆ ಸೇರಿ ಅನಂತರ ಧಾರವಾಡ, ಮೈಸೂರು ಕೇಂದ್ರಗಳಲ್ಲಿ ಸುಮಾರು 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಹಿರಿಯ ಉದ್ಘೋಷಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಬಿ.ಎ., ಎಲ್‌ಎಲ್‌ಬಿ., ಪದವೀಧರರು. ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರಾಗಿರುವ ಇವರು ನಟನೆ, ನಿರ್ದೇಶನಗಳಲ್ಲಿ ಪರಿಣತರು. ಮಕ್ಕಳಿಗಾಗಿ ಮತ್ತು ಯುವಜನರಿಗಾಗಿ 35ಕ್ಕೂ ಹೆಚ್ಚು ರಂಗಶಿಬಿರಗಳನ್ನು ಏರ್ಪಡಿಸಿದ ಹೆಗ್ಗಳಿಕೆ ಇವರದು.

ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜರು ಗಾಯನ, ಕೊಳಲು, ಸುಮಧುವೀಣೆ (ಸ್ಲೈಡ್ ಗಿಟಾರಿನ ರೂಪಾಂತರ) ಇವುಗಳಲ್ಲಿ ನಿಷ್ಣಾತರು. ತಾಯಿ ಶ್ರೀಮತಿ ನಾಗಲಕ್ಷ್ಮಿಯವರು. ತಂದೆ ಮತ್ತು ಮೊದಲನೆಯ ಗುರುಗಳು ಸಂಗೀತವಾರಿಧಿ ಗಾನಕಲಾ ಸುವರ್ಣ ವಿದ್ವಾನ್ ಡಿ.ಎಸ್. ಸೂರ್ಯನಾರಾಯಣ ಭಟ್ಟರು. ಬಳಿಕ, ವಿದ್ವಾನ್ ಡಿ.ಎನ್.ಸುಬ್ರಹ್ಮಣ್ಯ ಭಟ್ಟರಲ್ಲಿ ಶಿಕ್ಷಣ ಮುಂದುವರಿಕೆ. ಕೊಳಲು ಮತ್ತು ಸುಮಧುವೀಣೆಗಳನ್ನು ಅವರು ಕಲಿತದ್ದು ಸ್ವಯಮಾಚಾರ್ಯರಾಗಿಯೇ. ಮಲೇಷಿಯಾದ ಕೌಲಾಲಂಪುರದ ಟೆಂಪಲ್ ಆಫ್ ಫೈನ್ ಆರ್ಟ್ಸ್ ಸಂಸ್ಥೆಯಲ್ಲಿ ವಾದ್ಯ ಸಂಗೀತ ವಿಭಾಗ ಮುಖ್ಯಸ್ಥರಾಗಿ 2007ರಿಂದ 2012ರವರೆಗೆ ಸೇವೆ.

ವಯೊಲಿನ್ ಸಹಕಾರ ನೀಡಲಿರುವ ವಿದ್ವಾನ್ ಎಸ್.ಜನಾರ್ಧನ್, ಏಳನೆಯ ವರ್ಷದಲ್ಲಿಯೇ ಸಂಗೀತಾಭ್ಯಾಸ ಮಾಡಿದರು. ವಯೊಲಿನ್ ವಾದನದ ಪ್ರಾರಂಭಿಕ ಶಿಕ್ಷಣವನ್ನು ವಿದುಷಿ ಅನುಸೂಯಾ ಮುರಳಿಯವರ ಬಳಿ ಪಡೆದರು. ಪ್ರಸ್ತುತ ಪದ್ಮಶ್ರೀ ಶ್ರೀಮತಿ ಎ.ಕನ್ಯಾಕುಮಾರಿ ಅವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಬಿ–ಹೈ ಶ್ರೇಣಿಯ ಕಲಾವಿದರು.

ಮೃದಂಗ ಸಹಕಾರ ನೀಡಲಿರುವ ವಿದ್ವಾನ್ ಅನಿರುದ್ಧ್ ಎಸ್.ಭಟ್, ವಿದ್ವಾನ್ ಎಂ.ವಿ.ಮೋಹನ್ ಅವರಲ್ಲಿ ಬಳಿಕ ವಿದ್ವಾನ್ ಕೆ.ಯಜ್ಞಯೋಜಚಂದ್ರನ್ ಅವರಲ್ಲಿ ಮೃದಂಗ ವಾದನದ ಶಿಕ್ಷಣ ಪಡೆದರು. 'ಅನನ್ಯ ಯುವ ಪ್ರತಿಭೆ' ಪುರಸ್ಕಾರ ಪಡೆದಿದ್ದಾರೆ.

ಘಟಂ ಸಹಕಾರ ನೀಡಲಿರುವ ವಿದ್ವಾನ್ ಎಂ.ಆರ್.ಮಂಜುನಾಥ್, ತಾಳವಾದ್ಯ ವಿದ್ಯಾವಾರಿಧಿ ಎಂ.ಆರ್. ರಾಜಪ್ಪನವರ ಸುಪುತ್ರರು ಹಾಗೂ ಶಿಷ್ಯರು. ಪಿ.ಜಿ. ಲಕ್ಷ್ಮೀನಾರಾಯಣ, ಎಂ.ಎ.ಕೃಷ್ಣಮೂರ್ತಿ, ಟಿ.ವಿ. ಭದ್ರಾಚಾರ್ ಮತ್ತು ಎಂ.ಆರ್. ಸಾಯಿನಾಥ್ ಇತರೆ ವಿದ್ವಾಂಸರ ಬಳಿ ಮೃದಂಗ ವಾದನದ ಉನ್ನತ ಶಿಕ್ಷಣ. ಆಕಾಶವಾಣಿಯ ಬಿ–ಹೈ ಗ್ರೇಡ್ ಕಲಾವಿದರಾಗಿದ್ದಾರೆ.

ಹಾಸ್ಟೆಲ್‌ನಿಂದ ಇಬ್ಬರು ವಿದ್ಯಾರ್ಥಿನಿಯರು ನಾಪತ್ತೆ

ಮೈಸೂರು, ಜು. 7(ಆರ್‌ಕೆ)– ಮೈಸೂರಿನ ವಿವಿ ಮೊಹಲ್ಲಾ 10ನೇ ಕ್ರಾಸ್‌ನಲ್ಲಿರುವ ಮಹಾಜನ ಲೇಡೀಸ್ ಹಾಸ್ಟೆಲ್‌ನಿಂದ ಇಬ್ಬರು ವಿದ್ಯಾರ್ಥಿನಿಯರು ಜು.5ರಿಂದ ಕಣ್ಮರೆಯಾಗಿದ್ದಾರೆ ಎಂದು ಹಾಸ್ಟೆಲ್ ಇನ್‌ಚಾರ್ಜ್ ಮಹೇಶ್ ರೆಡ್ಡಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.


ಶರಣಮ್ಮ


ಸಾಯಿ ವೈಷ್ಣವಿ

ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ರಾಯಚೂರು ಜಿಲ್ಲೆ ಹೊಸೂರಿನ ಶಂಕರಪ್ಪ ಅವರ ಪುತ್ರಿ ಶರಣಮ್ಮ(18) ಹಾಗೂ ಕೋಲಾರ ಜಿಲ್ಲೆ ಮುಳಬಾಗಿಲಿನ ಮಾರುತಿನಗರ ನಿವಾಸಿ ಎಸ್.ಸುರೇಶ್ ಅವರ ಪುತ್ರಿ ಎಸ್.ಸಾಯಿ ವೈಷ್ಣವಿ(17) ಎಂಬ ಪಿಯುಸಿ ವಿದ್ಯಾರ್ಥಿನಿಯರು ಕಣ್ಮರೆಯಾಗಿದ್ದಾರೆ ಎಂದು ತಿಳಿಸಿದ್ದಾರೆ. ಜು.5ರಂದು ಬೆಳಗ್ಗೆ 7.45 ಗಂಟೆ ವೇಳೆಗೆ ಕಾಲೇಜಿಗೆ ಹೋಗುತ್ತೇವೆಂದು ಹಾಸ್ಟೆಲ್‌ನಿಂದ ಹೋದವರು ಮರಳಿ ಬಂದಿಲ್ಲ ಎಂದು ನೀಡಿದ ದೂರಿನನ್ವಯ ವಿವಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ವಿದ್ಯಾರ್ಥಿನಿಯರ ಬಗ್ಗೆ ಸುಳಿವು ದೊರೆತಲ್ಲಿ ವಿವಿಪುರಂ ಪೊಲೀಸ್ ಠಾಣೆ (0821–2418314), ನಗರ ಪೊಲೀಸ್ ಕಂಟ್ರೋಲ್ ರೂಂ (0821–2418339) ಅಥವಾ ಪೊಲೀಸ್ ಇನ್‌ಸ್ಪೆಕ್ಟರ್ 94808 02238 ಅವರಿಗೆ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರತ್ಯೇಕ ಪ್ರಕರಣಗಳಲ್ಲಿ ಹಲವರು ನಾಪತ್ತೆ

ಮೈಸೂರು, ಜು.7–ಮೈಸೂರಿನ ವಿವಿಧ ಠಾಣಾ ವ್ಯಾಪ್ತಿಯಲ್ಲಿ ನಾಲ್ವರು ಕಾಣೆಯಾಗಿರುವ ಬಗ್ಗೆ ವರದಿಯಾಗಿದೆ.


ಅಬ್ದುಲ್ ತೌಸಿಫ್

ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ಮುಖ್ಯರಸ್ತೆ ನಿವಾಸಿ ಅಬ್ದುಲ್ ತೌಸಿಫ್ (38) ದಿನಾಂಕ 23.3.2023 ರಿಂದ ಕಾಣೆಯಾಗಿದ್ದಾನೆ ಎಂದು ಆತನ ತಂದೆ ಅಬ್ದುಲ್ ರಶೀದ್ ಎನ್.ಆರ್.ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.


ಫೈರೋಜ್

ಮೈಸೂರಿನ ಕೆಸರೆ, ಅಜ್ಜನಗರದ ನಿವಾಸಿ ಫೈರೋಜ್ (52) ದಿನಾಂಕ 17.7.2024 ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವನು ಇದುವರೆಗೂ ವಾಪಸ್ ಬಂದಿಲ್ಲ ಎಂದು ಎನ್.ಆರ್. ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.


ಮುರಳಿ

ಕೆ.ಆರ್.ಮಿಲ್ ಕಾಲೋನಿಯ ಸಿ ಬ್ಲಾಕ್ ನಿವಾಸಿ ಮುರಳಿ (30) 4.9.2023ರಿಂದ ಕಾಣೆಯಾಗಿದ್ದಾರೆ ಎಂದು ಎನ್.ಆರ್. ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಎನ್.ಆರ್. ಪೊಲೀಸ್ ಠಾಣೆ ದೂ. 2418312, 2418100, 2418339, 2418340 ಸಂಪರ್ಕಿಸಲು ಕೋರಲಾಗಿದೆ.


ರಾಜೇಶ್

ಮೈಸೂರಿನ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿ ನಿವಾಸಿ ಜೆ.ರಾಜೇಶ್ (43) ದಿನಾಂಕ ಮೇ 5ರಿಂದ ಕಾಣೆಯಾಗಿರುವ ಬಗ್ಗೆ ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ವಿಜಯನಗರ ಠಾಣೆ ದೂ.0821–2418317, ಮೊ.9480802241 ಸಂಪರ್ಕಿಸಲು ಕೋರಲಾಗಿದೆ.

ನಿಧನ

ಅಬ್ದುಲ್ ರಶೀದ್



ಮೈಸೂರು, ಜು.7–ಮೈಸೂರಿನ ಶಾಂತಿನಗರ, ಮಕ್ಕಾ ಮಸೀದಿ ಸಮೀಪದ ನಿವಾಸಿ ಅಬ್ದುಲ್ ರಶೀದ್ (71) ಸೋಮವಾರ ಕೆ.ಆರ್. ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರು–ಬೆಂಗಳೂರು ರಸ್ತೆ, ಟಿಪ್ಪು ಸರ್ಕಲ್ ಸಮೀಪದ ಮುಸ್ಲಿಮ್ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಜಿ.ಭಾಗ್ಯ



ಹಿರಿಯ ವಕೀಲರಾದ ದಿವಂಗತ ಎನ್.ಜಿ.ರಾಮಸ್ವಾಮಿ ಅವರ ಮೂರನೇ ಸಹೋದರಿ ಎನ್.ಜಿ.ಭಾಗ್ಯ(69) ಸೋಮವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಲಲಿತಕಲಾ ಶಿಕ್ಷಕಿಯಾಗಿ ನಿವೃತ್ತರಾಗಿದ್ದ ದಿವಂಗತರು ಚಾವಡಿ ಅಗ್ರಹಾರದಲ್ಲಿ ವಾಸವಾಗಿದ್ದರು. ಮೃತರು ಸಹೋದರಿ ಎನ್.ಜಿ.ರಾಧಾ ಹಾಗೂ ಅಣ್ಣನ ಮಕ್ಕಳು, ಅವರ ಅಳಿಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸೋಮವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕತಾಯಮ್ಮ



ಮೈಸೂರಿನ ಪಡುವಾರಳ್ಳಿ ಗ್ರಾಮ ಅಭಿವೃದ್ಧಿ ಸಂಘದ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವಸ್ವಾಮಿ ಅವರ ತಾಯಿ ಚಿಕ್ಕತಾಯಮ್ಮ(80) ಅವರು ಭಾನುವಾರ ನಿಧನರಾದರು. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಮೈಸೂರಿನ ಗೋಕುಲಂ ರುದ್ರಭೂಮಿಯಲ್ಲಿ ಭಾನುವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಶಿಲಾನ್ಯಾಸ

ಮೈಸೂರು, ಜು. 7– ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಸಮಿತಿ ಟ್ರಸ್ಟ್ ವತಿಯಿಂದ ಜೆ.ಪಿ.ನಗರದ ಪೊಲೀಸ್ ಠಾಣೆ ಹಿಂಭಾಗ ನಿರ್ಮಿಸಲಿರುವ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ದೇವಾಲಯದ ನೂತನ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ಭಾನುವಾರ ನೆರವೇರಿತು.



ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಸಮಿತಿ ಟ್ರಸ್ಟ್ ವತಿಯಿಂದ ಮೈಸೂರಿನ ಜೆ.ಪಿ.ನಗರದ ಪೊಲೀಸ್ ಠಾಣೆ ಹಿಂಭಾಗ ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ದೇವಾಲಯ ನಿರ್ಮಾಣಕ್ಕೆ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಾಗೂ ಬೇಬಿಮಠದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸಮ್ಮುಖದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಶಿಲಾನ್ಯಾಸ ನೆರವೇರಿಸಿದರು.

ಈ ವೇಳೆ ಬಿ.ವೈ.ವಿಜಯೇಂದ್ರ ಮಾತನಾಡಿ, ನಮ್ಮ ದೇಶಕ್ಕೆ ಮಠ–ಮಾನ್ಯಗಳ ಕೊಡುಗೆ ಅಪಾರವಾದುದು. ನಮ್ಮ ಮಠ ಮಾನ್ಯಗಳು ಅನ್ನ, ಅಕ್ಷರ ದಾಸೋಹ ಸೇರಿದಂತೆ ಸಮಾಜಕ್ಕೆ ಅಪಾರ ಕೊಡುಗೆ ನೀಡುತ್ತಿವೆ. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ರಾಜ್ಯದ ಎಲ್ಲ ಮಠಗಳಿಗೂ ಸರ್ಕಾರದಿಂದ ಅನುಕೂಲ ಕಲ್ಪಿಸಿದ್ದಾರೆ ಎಂದರು.

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಸಮಿತಿ ಟ್ರಸ್ಟ್ ಪದಾಧಿಕಾರಿಗಳು ಇಲ್ಲಿ ದೇವಾಲಯ ನಿರ್ಮಿಸುತ್ತಿರುವ ಮೂಲಕ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ದೇವಾಲಯ ನಿರ್ಮಾಣಕ್ಕೆ ಈ ಜಾಗ ಪಡೆದಿದ್ದರು. ಈಗ ನಾನು ಈ ಜಾಗದಲ್ಲಿ ದೇವಸ್ಥಾನದ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಿರುವುದಕ್ಕೆ ಖುಷಿಯಾಗಿದೆ ಎಂದರು. ಒಗ್ಗಟ್ಟು ಪ್ರದರ್ಶಿಸುವ ಜೊತೆಗೆ ಸಮುದಾಯವನ್ನು ಮುಂದೆ ತರುವ ಕೆಲಸವನ್ನು ಮಾಡಬೇಕಿದೆ. ಇಂದು ಎಲ್ಲ ಕ್ಷೇತ್ರದಲ್ಲೂ ಕಾಲು ಎಳೆಯುವವರನ್ನು ನೋಡುತ್ತೇವೆ. ಅಂತಹವರನ್ನು ಮೀರಿ ನಾವು ಬೆಳೆಯಬೇಕು. ಎಲ್ಲರಿಗೂ ನಮ್ಮ ಕೆಲಸ ಮೂಲಕ ಉತ್ತರ ನೀಡಬೇಕು ಎಂದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗೆ ವರ್ಷ ಪೂರ್ತಿ ಶುಭ ದಿನವೇ. ಹಾಗಾಗಿ, ಆಷಾಢ ಮಾಸವಾದರೂ ಸಿದ್ಧಲಿಂಗೇಶ್ವರ ಸ್ವಾಮಿ ದೇವಾಲಯದ ಶಿಲಾನ್ಯಾಸ ಕಾರ್ಯಕ್ರಮ ನಡೆಯುತ್ತಿದೆ. ಈ ವೇಳೆ ಇಂತಹ ಕೆಲಸ ನಡೆಯುತ್ತಿರುವುದನ್ನು ಮೆಚ್ಚಬೇಕು ಎಂದರು.


ಸಿದ್ಧಲಿಂಗೇಶ್ವರರು ತಾತ್ವಿಕ ತಳಹದಿಯ ಮೇಲೆ ಧರ್ಮವನ್ನು ಕಟ್ಟಿದವರು. ಎಲ್ಲಾ ಸವಾಲುಗಳನ್ನು ಎದುರಿಸಿ ಜನಮನ್ನಣೆ ಪಡೆಯುವ ಮೂಲಕ ಶ್ರೇಷ್ಠ ಸಂತ ಎನಿಸಿಕೊಂಡರು. ಹೀಗಾಗಿ ಇಲ್ಲಿ ದೇವಾಲಯ ನಿರ್ಮಿಸುತ್ತಿರುವುದು ಸಂತಸ ತಂದಿದೆ ಎಂದರು.

ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ನನ್ನ ವಿದ್ಯಾಭ್ಯಾಸ ನಡೆದಿದ್ದು ಯಡಿಯೂರು ಕ್ಷೇತ್ರದಲ್ಲಿ. ಹಾಗಾಗಿ, ಮೈಸೂರಿನಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ದೇವಸ್ಥಾನ ನಿರ್ಮಾಣ ಆಗುತ್ತಿರುವುದು ಖುಷಿ ನೀಡಿದೆ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಶ್ರೀ ಸಿದ್ಧಲಿಂಗೇಶ್ವರ ದೇವಾಲಯ ನನ್ನ ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿರುವುದಕ್ಕೆ ಸಂತಸವಾಗುತ್ತಿದೆ. ಕಟ್ಟಡ ನಿರ್ಮಾಣಕ್ಕೆ 10 ಲಕ್ಷ ರೂ. ಅನುದಾನ ನೀಡುತ್ತೇನೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ನನಗೆ ಈ ಹಿಂದೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಲು ಬಿ.ಎಸ್.ಯಡಿಯೂರಪ್ಪ ಬಿಜೆಪಿ ಟಿಕೆಟ್ ನೀಡಿದರು. ನಂತರ ನಿಗಮ–ಮಂಡಳಿಯಲ್ಲಿ ಸ್ಥಾನ ಕಲ್ಪಿಸಿದರು. ಹೀಗಾಗಿ ಅವರ ಮೇಲೆ ನನಗೆ ವಿಶೇಷ ಅಭಿಮಾನವಿದೆ. ನಾನು ಇಂದು ಎಂಎಲ್‌ಸಿ ಆಗಲು ಅನೇಕರು ಕಾರಣ. ಅದರಲ್ಲಿ ಯಡಿಯೂರಪ್ಪ ಅವರೂ ಒಬ್ಬರು ಎಂದರು. ದೇವಾಲಯ ನಿರ್ಮಾಣಕ್ಕೆ ನನ್ನ ಅನುದಾನದಲ್ಲಿ 25 ಲಕ್ಷ ರೂ. ನೀಡುತ್ತೇನೆ ಎಂದರು. ಶಾಸಕರಾದ ಜಿ.ಟಿ.ದೇವೇಗೌಡ, ಎಚ್.ಎಂ.ಗಣೇಶ್‌ಪ್ರಸಾದ್, ಕೆ.ಹರೀಶ್‌ಗೌಡ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ನಿರಂಜನ್, ಟ್ರಸ್ಟ್‌ನ ಗೌರವಾಧ್ಯಕ್ಷ ಎಸ್.ಸಿ.ಅಶೋಕ್, ಅಧ್ಯಕ್ಷ ಚಂದ್ರಶೇಖರಶೆಟ್ಟಿ, ನಗರಪಾಲಿಕೆ ಮಾಜಿ ಸದಸ್ಯ ಪ್ರದೀಪ್‌ಕುಮಾರ್, ಈಶ್ವರ್, ಸಿದ್ದೇಶ್, ನಾಗೇಂದ್ರ ಇತರರಿದ್ದರು.

ಹಿಮಾಚಲ ಪ್ರದೇಶದಲ್ಲಿ ಪ್ರವಾಹ; 78 ಜನರ ಸಾವು



ಶಿಮ್ಲಾ: ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ನಿರಂತರವಾಗಿ ಸುರಿಯುತ್ತಿರುವ ಭಾರಿ ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ಸುಮಾರು 78 ಜನರು ಸಾವನ್ನಪ್ಪಿದ್ದಾರೆ. 30 ಮಂದಿ ನಾಪತ್ತೆಯಾಗಿದ್ದು, ಡ್ರೋನ್ ಮತ್ತು ಸ್ನಿಫರ್ ಡಾಗ್‌ಗಳೊಂದಿಗೆ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೂ.20ರಂದು ಮಾನ್ಸೂನ್ ಪ್ರಾರಂಭವಾದಾಗಿನಿಂದ ರಾಜ್ಯದಲ್ಲಿ 78 ಮಂದಿ ಸಾವನ್ನಪ್ಪಿದ್ದಾರೆ. ಅದರಲ್ಲಿ 50 ಜನರು ಮೇಘಸ್ಫೋಟ, ಹಠಾತ್ ಪ್ರವಾಹ ಮತ್ತು ಭೂಕುಸಿತದಿಂದ ಮೃತಪಟ್ಟಿದ್ದಾರೆ. ಇದುವರೆಗೆ 121 ಮಂದಿ ಗಾಯಗೊಂಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ, ಸೇನೆ, ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲಿಸ್ ಮತ್ತು ಗೃಹ ರಕ್ಷಕ ದಳದ ಸುಮಾರು 250 ಸಿಬ್ಬಂದಿ, ಸ್ಥಳೀಯ ಆಡಳಿತ ಮತ್ತು ಸ್ಥಳೀಯ ಜನರೊಂದಿಗೆ ಸೇರಿ ಶೋಧ ಮತ್ತು ರಕ್ಷಣಾ ಕಾರ್ಯ ಕೈಗೊಂಡಿದ್ದಾರೆ. ದುರ್ಗಮ ಪ್ರದೇಶಗಳಲ್ಲಿ 20 ತಂಡಗಳು ಮಾಹಿತಿ ಸಂಗ್ರಹಿಸಿ ಪಡಿತರ ಮತ್ತು ವೈದ್ಯಕೀಯ ಕಿಟ್ ವಿತರಿಸುತ್ತಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶನಿ ಮಹಾಶಾಂತಿ, ಗುರುಪೂಜೆ

ಮೈಸೂರು,ಜು.7–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಜು.10ರಂದು ಗುರುವಾರ ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾ ನಿವಾರಕ ಸುದರ್ಶನ ಹೋಮ, ಕುಜದೋಷ ನಿವೃತ್ತಿ ಶಾಂತಿ ರಾಹುಶಾಂತಿ, ಮಹಾ ಮೃತ್ಯುಂಜಯ ಹೋಮ ಮತ್ತು ಗುರುಪೂಜೆ ಏರ್ಪಡಿಸಲಾಗಿದೆ. ಬೆಳಿಗ್ಗೆ 9 ಗಂಟೆಗೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ. ನಂತರ ಪ್ರಸಾದ ವಿನಿಯೋಗ.

ಜು.13, ಸುಗಂಧ ಲಹರಿ ಗಜಲ್ ಸಂಕಲನ ಲೋಕಾರ್ಪಣೆ, ಕವಿಗೋಷ್ಠಿ, ಪ್ರಶಸ್ತಿ ಪ್ರದಾನ

ಮೈಸೂರು,ಜು.7–ಸೌಗಂಧಿಕಾ ಪ್ರಕಾಶನ ವತಿಯಿಂದ ಜು.13ರಂದು ಬೆಳಗ್ಗೆ 10 ಗಂಟೆಗೆ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಡಾ.ಸೌಗಂಧಿಕಾ ವಿ. ಜೋಯಿಸ್ ಅವರ ಸುಗಂಧ ಲಹರಿ ಗಜಲ್ ಸಂಕಲನ ಲೋಕಾರ್ಪಣೆ, ಕವಿಗೋಷ್ಠಿ, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ.ಸಂತೋಷ್ ಉದ್ಘಾಟಿಸಲಿದ್ದಾರೆ. ಡಾ.ಮಲ್ಲಿನಾಥ ಎಸ್.ತಳವಾರ ಗಜಲ್ ಸಂಕಲನ ಲೋಕಾರ್ಪಣೆ ಮಾಡುವರು. ಮುಖ್ಯ ಅತಿಥಿಗಳಾಗಿ ಗಣೇಶ್ ಪ್ರಸಾದ್ ಪಾಂಡೇಲು, ಶ್ರೀಮತಿ ಎ. ಹೇಮಗಂಗಾ, ಡಾ.ಸೌಗಂಧಿಕಾ ವಿ.ಜೋಯಿಸ್ ಭಾಗವಹಿಸಲಿದ್ದಾರೆ. ಸಾಹಿತ್ಯ ಸುಗಂಧ ಪ್ರಶಸ್ತಿಯನ್ನು ಎಂ.ಬಿ.ಸಂತೋಷ್, ಡಾ.ಎಸ್. ಪುಟ್ಟಪ್ಪ ಮುಡೊಗೊಂಡ, ಶ್ರೀಮತಿ ಎ. ಹೇಮಗಂಗಾ, ಶ್ರೀಮತಿ ಎನ್.ಆರ್. ರೂಪಶ್ರೀ ಮತ್ತು ಶ್ರೀಮತಿ ಜೆ. ಪ್ರಭಾಶಾಸ್ತ್ರಿ ಜೋಶ್ಯಲ ಅವರಿಗೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 78291 74806, 97313 42742 ಸಂಪರ್ಕಿಸಬಹುದು.

ಶುಭಾಂಶು ಶುಕ್ಲಾ ಕರೆ: ಐಎಸ್‌ಎಸ್‌ಗೆ ಸುರಕ್ಷಿತ ಪ್ರಯಾಣದಲ್ಲಿ ಇಸ್ರೊ ಪಾತ್ರ ಶ್ಲಾಘನೆ

ಬೆಂಗಳೂರು, ಜು.7– ಆಕ್ಸಿಯಂ–4 ಕಾರ್ಯಾಚರಣೆಯ ಭಾಗವಾಗಿ ಪ್ರಸ್ತುತ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ(ಐಎಸ್‌ಎಸ್) ಭಾರತೀಯ ಗಗನಯಾನಿ ಶುಭಾಂಶು ಶುಕ್ಲಾ ಅವರು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷ ವಿ.ನಾರಾಯಣನ್ ಅವರಿಗೆ ಕರೆ ಮಾಡಿ, ಐಎಸ್‌ಎಸ್‌ಗೆ ಸುರಕ್ಷಿತ ಪ್ರಯಾಣವನ್ನು ಖಾತ್ರಿಪಡಿಸುವಲ್ಲಿ ಇಸ್ರೊ ತಂಡದ ಪಾತ್ರವನ್ನು ಶ್ಲಾಘಿಸಿದ್ದಾರೆ.


ಶುಭಾಂಶು ಶುಕ್ಲಾ

ಜು.6 ರಂದು ಮಧ್ಯಾಹ್ನ ಶುಕ್ಲಾ ಕರೆ ಮಾಡಿದ್ದರು ಎಂದು ಇಸ್ರೊ ತಿಳಿಸಿದೆ. ಕರೆಯ ಸಮಯದಲ್ಲಿ ಇಸ್ರೊ ಅಧ್ಯಕ್ಷರು. ಶುಕ್ಲಾ ಅವರ ಯೋಗಕ್ಷೇಮದ ಬಗ್ಗೆ ತಮ್ಮ ತೀವ್ರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಐಎಸ್‌ಎಸ್‌ನಲ್ಲಿ ನಡೆಸಲಾಗುತ್ತಿರುವ ವಿವಿಧ ವೈಜ್ಞಾನಿಕ ಪ್ರಯೋಗಗಳು ಮತ್ತು ಚಟುವಟಿಕೆಗಳ ಬಗ್ಗೆ ವಿಚಾರಿಸಿದ್ದಾರೆ.


ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯೂ ಆಗಿರುವ ನಾರಾಯಣನ್, ಶುಕ್ಲಾ ಅವರು ಭೂಮಿಗೆ ಹಿಂದಿರುಗಿದ ನಂತರ ಎಲ್ಲಾ ಪ್ರಯೋಗಗಳು ಮತ್ತು ಚಟುವಟಿಕೆಗಳನ್ನು ಸೂಕ್ಷ್ಮವಾಗಿ ದಾಖಲಿಸುವ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಏಕೆಂದರೆ ಇದು ಭಾರತದ ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮವಾದ ಗಗನಯಾನ ಯೋಜನೆಯ ಅಭಿವೃದ್ಧಿಗೆ ಅಗತ್ಯ ಇನ್‌ಪುಟ್‌ಗಳನ್ನು ಒದಗಿಸುತ್ತದೆ.

ಇಸ್ರೊ ಪ್ರಕಾರ ಗಗನಯಾನ ಕಾರ್ಯಕ್ರಮವು ಮಾನವ ಸಹಿತ ಬಾಹ್ಯಾಕಾಶ ನೌಕೆಯನ್ನು ಭೂಮಿಯ ಕೆಳ ಕಕ್ಷೆಗೆ ಉಡಾಯಿಸುವ ಭಾರತದ ಸಾಮರ್ಥ್ಯವನ್ನು ಪ್ರದರ್ಶಿಸುವ ಗುರಿಯನ್ನು ಹೊಂದಿದೆ. ಈ ಕಾರ್ಯಾಚರಣೆಯಿಂದ ಪಡೆದ ಅನುಭವಗಳು ಮತ್ತು ಜ್ಞಾನವು ಅದರ ಯಶಸ್ಸಿಗೆ ನಿರ್ಣಾಯಕವಾಗಿರುತ್ತದೆ ಎಂದು ಇಸ್ರೊ ತಿಳಿಸಿದೆ.

ಶುಭಾಂಶು ಶುಕ್ಲಾ ಅವರ ಐಎಸ್‌ಎಸ್ ಕಾರ್ಯಾಚರಣೆಯನ್ನು ಇಸ್ರೊ–ಆಕ್ಸಿಯಂ ಸ್ಪೇಸ್ ಫ್ಲೈಟ್ ಒಪ್ಪಂದದಡಿಯಲ್ಲಿ ಕಾರ್ಯಗತಗೊಳಿಸಲಾಗಿದೆ. ಈ ಚರ್ಚೆಯಲ್ಲಿ ವಿಕ್ರಮ್ ಸಾರಾಭಾಯ್ ಸ್ಪೇಸ್ ಸೆಂಟರ್ (ವಿಎಸ್‌ಎಸ್‌ಸಿ) ನಿರ್ದೇಶಕ ಮತ್ತು ಮಾನವ ಬಾಹ್ಯಾಕಾಶ ಕಾರ್ಯಕ್ರಮದ ಪ್ರೋಗ್ರಾಂ ನಿರ್ವಹಣಾ ಮಂಡಳಿಯ ಅಧ್ಯಕ್ಷ ಡಾ. ಉನ್ನಿಕೃಷ್ಣನ್ ನಾಯರ್; ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್ (ಎಲ್‌ಪಿಎಸ್‌ಸಿ) ನಿರ್ದೇಶಕ ಎಂ. ಮೋಹನ್, ಇಸ್ರೊ ಇನರ್ಶಿಯಲ್ ಸಿಸ್ಟಮ್ಸ್ ಯೂನಿಟ್ (ಐಐಎಸ್‌ಯು) ನಿರ್ದೇಶಕ ಪದ್ಮಕುಮಾರ್ ಇ.ಎಸ್; ಇಸ್ರೊನ ವೈಜ್ಞಾನಿಕ ಕಾರ್ಯದರ್ಶಿ ಎಂ. ಗಣೇಶ್ ಪಿಳ್ಳೈ; ಮತ್ತು ಎಲ್‌ಪಿಎಸ್‌ಸಿಯ ಮಾಜಿ ನಿರ್ದೇಶಕ ಎನ್. ವೇದಾಚಲಂ ಸೇರಿದಂತೆ ಇಸ್ರೊದ ಹಲವಾರು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಬಾಹ್ಯಾಕಾಶ ನಿಲ್ದಾಣದಲ್ಲಿ ನಡೆಸಲಾಗುತ್ತಿರುವ ಪ್ರಯೋಗಗಳು ಮತ್ತು ಚಟುವಟಿಕೆಗಳ ಪ್ರಗತಿಯ ಕುರಿತು ಶುಕ್ಲಾ ಅವರು ಮಾಹಿತಿ ಹಂಚಿಕೊಂಡರು. ವೈಜ್ಞಾನಿಕ ಉದ್ದೇಶಗಳು ಮತ್ತು ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಿದರು ಎಂದು ಇಸ್ರೊ ಹೇಳಿದೆ.

ಡಾ.ಕೆ.ಎಸ್.ಸದಾನಂದರಿಗೆ ಸನ್ಮಾನ...



ವೈದ್ಯರ ದಿನಾಚರಣೆ ಅಂಗವಾಗಿ ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್ ವತಿಯಿಂದ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸಂಘಟನೆ ಅಧ್ಯಕ್ಷ ರಾಜನ್ ಬಾಗ್‌ಮಾರ್, ಖಜಾಂಚಿ ಮನೋಹರ್ ಸಂಕ್ಲಾ, ಗೌತಮ್ ಗಾಂಧಿ, ಪ್ರಕಾಶ್ ಗಾಂಧಿ ಮತ್ತಿತರರನ್ನು ಕಾಣಬಹುದು.

ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು,ಜು.7–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.10ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.07.2025 ಮಂಗಳವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 8.30ಕ್ಕೆ ಶತಕಲಶಾಭಿಷೇಕ, ಶ್ರೀ ಆಂಜನೇಯ ಹೋಮ, ಶ್ರೀ ದತ್ತಾತ್ರೇಯ ಹೋಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಟೆಂಪಲ್ ರಸ್ತೆ, ವಿವಿ ಮೊಹಲ್ಲಾ.
- **ಶ್ರೀ ಸತ್ಯ ಸಾಯಿ ಸೇವಾ ಸಂಘ:** ವಾಹಿನಿ ಮಹೋತ್ಸವ, ಭಗವದ್ ಗೀತಾ ಎಕ್ಸಿಬಿಷನ್, ಸ್ಥಳ: ಶ್ರೀ ಸತ್ಯ ಸಾಯಿಬಾಬಾ ಶಾಲೆ, ಜಯಲಕ್ಷ್ಮಿಪುರಂ, ಬೆಳಗ್ಗೆ 10ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಪೊರೆ, ದೃಷ್ಟಿದೋಷ, ಮಧುಮೇಹದಿಂದ ಉಂಟಾಗುವ ಕಣ್ಣಿನ ಕಾಯಿಲೆ, ರಾತ್ರಿ ಕುರುಡುತನ ಉಚಿತ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ಕುಮಾರಸ್ವಾಮಿ, ಜಿ.ಪುಷ್ಪಲತಾ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ– ಡಾ.ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಸಹಕಾರ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಟಿ. ನರಸೀಪುರ ತಾಲೂಕು ರಂಗಸಮುದ್ರ ಗ್ರಾಮದ ಪಿ. ರಮೇಶ್ ಅವರೊಂದಿಗೆ ಸಂವಾದ ಇವರೊಂದಿಗೆ ಭಾಗವಹಿಸುತ್ತಾರೆ–ಎನ್.ಕೇಶವ ಮೂರ್ತಿ, 9.00 ಪ್ರಾಯೋಜಿತ ಕಾರ್ಯಕ್ರಮ ಆರೋಗ್ಯ ಧಾರೆ, 9.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.30 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ರಮೇಶ್ ಚಂದ್ರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಚಾರುಮತಿ ರಾಮಚಂದ್ರನ್ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ – ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಗೆಂಡೆ ಜಾತಿಯ ಮೀನು ಮರಿಗಳ ಉತ್ಪಾದನಾ ಕ್ರಮಗಳು ಈ ಕುರಿತು ಕಬಿನಿ ಮೀನುಮರಿ ಉತ್ಪಾದನಾ ಕೇಂದ್ರದ ಉಪನಿರ್ದೇಶಕರಾದ ಕೆ.ಎನ್. ಶ್ರೀನಿವಾಸ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಬಿ.ದಿಗ್ವಿಜಯ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಕಾರ್ತಿಕ್ ಕುಮಾರ್–ಸಿತಾರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು –ಹಳೆಯ ಕನ್ನಡ ಚಿತ್ರಗೀತೆಗಳು

ರೈತರ ಕಲ್ಯಾಣಕ್ಕಿಲ್ಲದ ಗಂಗಾ ಕಲ್ಯಾಣ!

●ಗಂಗೇ ಬಾರೆ... ತುಂಗೇ ಬಾರೆ... ಬಾರೇ ನೀರೆ... ಅನ್ನದಾತರ ಪ್ರಲಾಪ ●ಕೊಳವೆಬಾವಿ ಕೊರೆದರೆ ಆಯ್ತು: ಮೋಟಾರಿಲ್ಲ, ಕರೆಂಟ್ ಇಲ್ಲ, ಪೈಪ್‌ಗಳೂ ಇಲ್ಲ ●ಕೊಳವೆಬಾವಿ ಕೊರೆಸಿದ್ದಕ್ಕೆ ಸಾಲಮಾಡಿ ಪರಿಕರ ಖರೀದಿಸಿ ನೀರು ಹರಿಸಿಕೊಳ್ಳುವ ರೈತರ ದಯನೀಯ ಪರಿಸ್ಥಿತಿ



ಚಾಮರಾಜನಗರ, ಜು.7(ಎಂಕೆ)– ರೈತ ಪರ ಎಂದು ಹೇಳಿಕೊಳ್ಳುವ ಈ ಸರ್ಕಾರ, ವಾಸ್ತವವಾಗಿ ಹಲವು ವಿಚಾರದಲ್ಲಿ ರೈತ ವಿರೋಧಿಯಂತೆ ವರ್ತಿಸುತ್ತಿದೆ. ರೈತರ ಕಲ್ಯಾಣಕ್ಕಾಗಿ ನಾನಾ ಕಾರ್ಯಕ್ರಮ, ಯೋಜನೆಗಳನ್ನೇನೋ ಘೋಷಿಸಿದೆ. ಆದರೆ ಅದರ ಅನುಷ್ಠಾನ ಮಾತ್ರ ಅರೆ–ಬರೆ. ಅಂತಹ ಒಂದು ಯೋಜನೆಯಲ್ಲಿ ಗಂಗಾ ಕಲ್ಯಾಣ ಯೋಜನೆಯೂ ಒಂದು.

ಬಡ ರೈತರಿಗೆ ಸಬ್ಸಿಡಿಯಡಿ ಕೊಳವೆ ಬಾವಿ ಕೊರೆಸಿ, ಮೋಟಾರ್, ವಿದ್ಯುತ್ ಕಲ್ಪಿಸಿ, ನೀರು ಹರಿಸುವುದು ಈ ಯೋಜನೆ ಉದ್ದೇಶ. ಆದರೆ ಅದೆಷ್ಟೋ ಕಡೆ ಕೊಳವೆ ಬಾವಿಯನ್ನೇನೋ ಕೊರೆಸಲಾಗಿದೆ. ಆದರೆ, ವರ್ಷವಾದರೂ ಮೋಟಾರ್ ಹಾಗೂ ಇನ್ನಿತರೆ ಪೂರಕ ಸಾಮಗ್ರಿಗಳ ಪೂರೈಕೆ ಮಾಡದೆ ಸತಾಯಿಸುತ್ತಿದೆ. ಇದೊಂದು ರೀತಿ ರೈತರಿಗೆ ಆಸೆ ತೋರಿಸಿ ಮೋಸ ಮಾಡುವ ಪರಿ ಅಲ್ಲದೆ ಮತ್ತೇನು ಹೇಳಿ!

ಹೌದು! ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದ ಸಣ್ಣ ಮತ್ತು ಅತೀ ಸಣ್ಣ ರೈತರು, ಸರ್ಕಾರದ ಈ ಯೋಜನೆ ನಂಬಿ ಈಗ ಕಂಗಾಲಾಗಿದ್ದಾರೆ.

ಜಿಲ್ಲೆಯ ಯಳಂದೂರು ತಾಲೂಕಿನ ಗೌಡಹಳ್ಳಿ ಗ್ರಾಮದ ರೈತ ಗೋವಿಂದ ಶೆಟ್ಟಿ, ಮಾದೇಗೌಡ, ಹಾಗೂ ಗುರುಸಿದ್ದಪ್ಪ ಸೇರಿದಂತೆ ಹಲವು ರೈತರು ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿ ಸಲ್ಲಿಸಿದ್ದರು. ಕೆಲ ತಿಂಗಳ ಬಳಿಕ ಎಲ್ಲರಿಗೂ ಕೊಳವೆ ಬಾವಿ ಕೊರೆಸಿಕೊಡಲಾಗಿದೆ. ಆದರೆ, ಈ ಕೊಳವೆ ಬಾವಿಗೆ ನೀರೆತ್ತಲು ಮೋಟಾರ್, ವಿದ್ಯುತ್ ಇನ್ನಿತರೆ ಪರಿಕರಗಳನ್ನೇ ನೀಡಿಲ್ಲ. ಅಧಿಕಾರಿಗಳು ಒಂದು ವೇಳೆ ಆ ಪರಿಕರಗಳನ್ನು ದುರುಪಯೋಗ ಪಡಿಸಿಕೊಂಡಿರಬಹುದೇ? ಎಂಬ ಅನುಮಾನ ವ್ಯಕ್ತಪಡಿಸಿರುವ ರೈತರು, ಕೊಳವೆಬಾವಿ ಕಣ್ಣೆದುರೇ ಇದ್ದರೂ ನೀರೆತ್ತಲು ಮೋಟಾರ್ ಇಲ್ಲದೆ ಪೇಚಿಗೆ ಸಿಲುಕಿದ್ದೇವು ಎಂದಿದ್ದಾರೆ.

ಬೋರ್‌ವೆಲ್ ಕೊರೆದು ವರ್ಷವಾದರೂ ಮೋಟರ್, ವಿದ್ಯುತ್, ಪೈಪ್‌ಗಳು, ಇನ್ನಿತರೆ ಸಾಮಗ್ರಿಗಳನ್ನು ನೀಡದ ನಿಗಮದ ಅಧಿಕಾರಿಗಳ ವರ್ತನೆಗೆ ಬೇಸತ್ತು ಕಡೆಗೆ ಬಡ್ಡಿ ಸಾಲ ಮಾಡಿ, ಸ್ವಂತ ಖರ್ಚಿನಲ್ಲಿ ಮೋಟಾರ್, ಪೈಪ್ ಖರೀದಿಸಿ, ವಿದ್ಯುತ್ ಕಲ್ಪಿಸಿಕೊಂಡು ಜಮೀನಿಗೆ ನೀರು ಹಾಯಿಸಿಕೊಳ್ಳುತ್ತಿದ್ದೇವೆ. ಇದಕ್ಕೆ ಮಾಡಿದ ಸಾಲ ತೀರಿಸಲು ಬೇರೆ ದಾರಿ ಇಲ್ಲದೆ ಮತ್ತೆ ಸಾಲ ಮಾಡಬೇಕಾದ ಅನಿವಾರ್ಯತೆಯನ್ನು ತಂದೊಡ್ಡಿದ್ದಾರೆ ಎಂದು ತಮ್ಮ ಅಸಹಾಯಕ ಪರಿಸ್ಥಿತಿಯನ್ನು 'ಮೈಸೂರು ಮಿತ್ರ'ನಲ್ಲಿ ತೋಡಿಕೊಂಡಿದ್ದಾರೆ.

ರೈತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದಕ್ಕಾಗಿಯೇ ಇರುವ ಗಂಗಾ ಕಲ್ಯಾಣ ಯೋಜನೆ, ಕೈಗೆ ಬಂದದ್ದು, ಬಾಯಿಗೆ ಬರದಂತಾಗಿದೆ. ಸುಮಾರು 3.75 ಲಕ್ಷ ರೂ.ಗಳಲ್ಲಿ 3.25 ಲಕ್ಷ ರೂ. ಸಹಾಯಧನ(ಸಬ್ಸಿಡಿ)ವಾಗಿದೆ. ಕೊಳವೆ ಬಾವಿ ಕೊರೆಯುವ ವೆಚ್ಚ, ಮೋಟರ್ ಅಳವಡಿಕೆ, ವಿದ್ಯುತ್ ಸಂಪರ್ಕ ಹಾಗೂ ಪೂರಕ ಸಾಮಗ್ರಿಗಳ ಸರಬರಾಜು ಎಲ್ಲವೂ ಅವರದ್ದೇ. ಆದರೆ, ಕೊಳವೆ ಬಾವಿ ಮಾತ್ರ ಕೊರೆಸಿ ಅಷ್ಟಕ್ಕೆ ಕೈಬಿಡಲಾಗಿದೆ ಎಂದು ದೂರಿದ್ದಾರೆ.

ರೈತರ ಆತ್ಮಹತ್ಯೆಗೆ ದಾರಿ: ಈಗಾಗಲೇ ಸಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ಅನುಕೂಲ ಮಾಡಿಕೊಡುವ ನೆಪದಲ್ಲಿ ಈ ಮೂಲಕ ಮತ್ತೆ ಸಾಲದ ಸುಳಿಗೆ ನೂಕಲಾಗುತ್ತಿದೆ. ಬೆಳೆ ಸಾಲ ಮಾಡುವುದಲ್ಲದೆ ಮೋಟಾರ್ ಹಾಗೂ ಪೈಪ್ ಲೈನ್‌ಗೂ ಸಾಲ ಮಾಡಬೇಕಾದ ಅನಿವಾರ್ಯತೆ ಬಂದಿದೆ. ಇದರಿಂದ ಸಾಲ ಹೆಚ್ಚಾಗಿ, ಮರುಪಾವತಿ ಮಾಡಲಾಗದೆ ಆತ್ಮಹತ್ಯೆ ಹಾದಿ ಹಿಡಿಯುವ ಪರಿಸ್ಥಿತಿ ತಂದೊಡ್ಡಿದ್ದಾರೆ ಎಂದು ರೈತರೊಬ್ಬರು ತಮ್ಮ ಕಷ್ಟ ಹಂಚಿಕೊಂಡಿದ್ದಾರೆ.

ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ: ವರ್ಷ ಪೂರ್ತಿ ಕೃಷಿ ಚಟುವಟಿಕೆಗಳಲ್ಲಿ ರೈತರನ್ನು ತೊಡಗಿಸಲು ಇರುವಂತಹ ಗಂಗಾ ಕಲ್ಯಾಣ ಯೋಜನೆ ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಅಧಿಕಾರಿಗಳ ಅಸಡ್ಡೆಯಿಂದಾಗಿ ಸಾಕಷ್ಟು ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ರಾಜ್ಯ ಸರ್ಕಾರ ಕೂಡಲೇ ಗಮನಹರಿಸಬೇಕು ಎಂದು ಕೆಲ ರೈತ ಮುಖಂಡರು ಆಗ್ರಹಿಸಿದ್ದಾರೆ.

ವಿಜಯೇಂದ್ರ ಭೇಟಿ



ಮೈಸೂರಿನ ಹಿರಿಯ ವಕೀಲರೂ ಆದ ಬಿಜೆಪಿ ಮುಖಂಡ ಎಸ್.ಅರುಣ್‌ಕುಮಾರ್ ಅವರ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿದ್ದರು. ಈ ವೇಳೆ ಅವರಿಗೆ ಅರುಣ್‌ಕುಮಾರ್ ಕುಟುಂಬ ಹೂಗುಚ್ಛ ನೀಡಿ, ಅಭಿನಂದಿಸಿತು. ಇದೇ ಸಂದರ್ಭದಲ್ಲಿ ವಿಜಯೇಂದ್ರ, ಪಕ್ಷದ ಹಲವು ಮುಖಂಡರು ಹಾಗೂ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಪದಾಧಿಕಾರಿಗಳೊಂದಿಗೆ ಸಂಘಟನೆ ಬಗ್ಗೆ ಚರ್ಚಿಸಿದರು.

ಶಿವಾನುಭವ ದಾಸೋಹ : ಬಸವ ಬಳಗ ಪೂರ್ವ ವಲಯ ಟ್ರಸ್ಟ್ ಸಿದ್ಧತೆ



ಮೈಸೂರು, ಜು. 7 – ಮೈಸೂರಿನ ಬಸವ ಬಳಗ ಪೂರ್ವ ವಲಯ ಟ್ರಸ್ಟ್ ವತಿಯಿಂದ ಶ್ರೀ ಕ್ಷೇತ್ರ ಸುತ್ತೂರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮೀಜಿಯವರ ಸಾರಥ್ಯದಲ್ಲಿ ಜೆಎಸ್‌ಎಸ್ ಧಾರ್ಮಿಕ ದತ್ತಿ ವತಿಯಿಂದ ಪ್ರತಿ ತಿಂಗಳು ಕೊನೆ ಶನಿವಾರದಂದು ಶಿವಾನುಭವ ದಾಸೋಹದಲ್ಲಿ ನಡೆಯುವ ಪ್ರವಚನ, ಭಜನೆ ಹಾಗೂ ದಾಸೋಹ ಕಾರ್ಯಕ್ರಮವನ್ನು 25ಕ್ಕೂ ಹೆಚ್ಚು ಬಡಾವಣೆಗಳಲ್ಲಿ ಏರ್ಪಡಿಸುವ ವಿಚಾರದ ಬಗ್ಗೆ ಇತ್ತೀಚೆಗೆ ಚರ್ಚಿಸಲಾಯಿತು.

ಅಧ್ಯಕ್ಷ ಎಸ್.ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ಲೋಹಿತ್ ದೊರೆಸ್ವಾಮಿ, ಉಪಾಧ್ಯಕ್ಷ ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಜಯಶಂಕರ್, ನಿರ್ದೇಶಕರಾದ ಮಾದಪ್ಪ ಶ್ರೀಶೈಲ ಕುಂಬಾರ, ನಂದೀಶ್, ಗಜೇಂದ್ರ ಚೇತನ್, ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಆನ್‌ಲೈನ್ ಬೆಟ್ಟಿಂಗ್‌ಗೆ ಕಡಿವಾಣಕ್ಕೆ ಶೀಘ್ರವೇ ಮಸೂದೆ



ಬೆಂಗಳೂರು, ಜು.7– ರಾಜ್ಯದಲ್ಲಿ ಆನ್‌ಲೈನ್ ಬೆಟ್ಟಿಂಗ್ (ಜೂಜಾಟ) ಮತ್ತು ಗೇಮಿಂಗ್‌ಗಳಿಗೆ ಅಂಕುಶ ಹಾಕಲು ಸರ್ಕಾರ ನಿರ್ಧರಿಸಿದೆ. ಈ ಉದ್ದೇಶದಿಂದ 'ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ–2025'ರ ಕರಡು ಸಿದ್ಧಗೊಂಡಿದೆ. ವಿಧಾನಮಂಡಲದ ಮುಂಬರುವ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲು ಸರ್ಕಾರ ಮುಂದಾಗಿದೆ.

'ಕರ್ನಾಟಕ ಪೊಲೀಸ್ ಕಾಯ್ದೆ–1963'ಕ್ಕೆ ತಿದ್ದುಪಡಿ ಮಾಡುವ ಮೂಲಕ ಆನ್‌ಲೈನ್ ಬೆಟ್ಟಿಂಗ್ ಮೇಲೆ ಸಂಪೂರ್ಣವಾಗಿ ನಿಯಂತ್ರಣ ಹೇರಲು ಈ ಮಸೂದೆಯನ್ನು ಸರ್ಕಾರ ರೂಪಿಸಿದೆ. ಜೊತೆಗೆ ರಾಜ್ಯ ಸರ್ಕಾರ 'ಕರ್ನಾಟಕ ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ನಿಯಂತ್ರಣ ಪ್ರಾಧಿಕಾರ' ರಚಿಸಲು ಕೂಡಾ ಈ ಮಸೂದೆ ಅವಕಾಶ ಕಲ್ಪಿಸಲಿದೆ. ಈ ಪ್ರಾಧಿಕಾರದಿಂದ ಪರವಾನಗಿ ಪಡೆದು ನಡೆಸುವ 'ಕೌಶಲ ಆಟ'ಗಳಿಗೆ ನಿಷೇಧದಿಂದ ವಿನಾಯಿತಿ ಸಿಗಲಿದೆ.

ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ತೊಡಗಿರುವ ಮತ್ತು ಪ್ರಾಧಿಕಾರದಿಂದ ಪರವಾನಗಿ ಪಡೆಯದೆ 'ಕೌಶಲ ಆಟ'ಗಳ ಆನ್‌ಲೈನ್ ವೇದಿಕೆ ನಡೆಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯವರಿಗೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ರೂ 1 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಜಾಹೀರಾತು ಅಥವಾ ಪ್ರಚಾರದ ಮೂಲಕ ಆನ್‌ಲೈನ್ ಬೆಟ್ಟಿಂಗ್‌ಗೆ ಕುಮ್ಮಕ್ಕು, ಪ್ರೋತ್ಸಾಹ ನೀಡುವವರಿಗೆ, ಸಹಾಯ ಮಾಡುವವರಿಗೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ರೂ. 10 ಸಾವಿರವರೆಗೆ ವಿಸ್ತರಿಸಬಹುದಾದ ದಂಡ ವಿಧಿಸುವ ಪ್ರಸ್ತಾಪವೂ ಕರಡು ಮಸೂದೆಯಲ್ಲಿದೆ.

ಕರಡು ಮಸೂದೆಯಲ್ಲಿ ಏನಿದೆ?: ಉದ್ದೇಶಿತ ತಿದ್ದುಪಡಿ ಮಸೂದೆಯಲ್ಲಿ, ನಗದು, ಟೋಕನ್‌ಗಳು, ವರ್ಚುವಲ್ ಕರೆನ್ಸಿ ಅಥವಾ ಡಿಜಿಟಲ್ ಸ್ವರೂಪದ ಹಣ ಬಳಕೆಯ ಅದೃಷ್ಟ ಆಟಗಳನ್ನು ಒಳಗೊಂಡ ಎಲ್ಲ ರೀತಿಯ ಆನ್‌ಲೈನ್ ಬೆಟ್ಟಿಂಗ್ ಅಥವಾ ಜೂಜಾಟವನ್ನು ನಿಷೇಧಿಸುವ ಪ್ರಸ್ತಾಪವಿದೆ. ರಾಜ್ಯ ಸರ್ಕಾರ ಅಥವಾ ಗೊತ್ತುಪಡಿಸಿದ ಪ್ರಾಧಿಕಾರವು ನಿರ್ಧರಿಸಿದಂತೆ ಪರವಾನಗಿ ಪಡೆಯುವ ಮತ್ತು ಅಂತಹ ಪ್ರಾಧಿಕಾರದ ನಿಯಂತ್ರಣಕ್ಕೆ ಒಳಪಡುವ ಷರತ್ತಿನ 'ಕೌಶಲ ಆಟ'ಗಳು ಈ ನಿಷೇಧದಿಂದ ವಿನಾಯಿತಿ ಪಡೆಯಲಿವೆ.

ಇಂಟರ್‌ನೆಟ್, ಮೊಬೈಲ್ ಆ್ಯಪ್‌ಗಳು ಅಥವಾ ಇತರ ಡಿಜಿಟಲ್ ವೇದಿಕೆಗಳ ಮೂಲಕ ನಡೆಸುವ ಆಟ, ಕಾರ್ಯಕ್ರಮ ಅಥವಾ ಚಟುವಟಿಕೆಯ ಫಲಿತಾಂಶದ ಮೇಲೆ ಹಣ, ಟೋಕನ್‌ಗಳು, ವರ್ಚುವಲ್ ಕರೆನ್ಸಿ ಅಥವಾ ಡಿಜಿಟಲ್ ಸ್ವರೂಪದ ಹಣವನ್ನು ಪಣಕ್ಕಿಟ್ಟು ಆಡುವುದು 'ಆನ್‌ಲೈನ್ ಬೆಟ್ಟಿಂಗ್' ಆಗಿದ್ದು, ಇಲ್ಲಿ ಫಲಿತಾಂಶವು ಆಕಸ್ಮಿಕವಾಗಿ ನಿರ್ಧಾರವಾಗುತ್ತದೆ ಎಂದು ಈ ಕರಡು ಮಸೂದೆಯಲ್ಲಿ ವಿವರಿಸಲಾಗಿದೆ.

ಪ್ರಾಧಿಕಾರದಲ್ಲಿ ಯಾರೆಲ್ಲ ಇರುತ್ತಾರೆ?: ಕಾನೂನು, ಸಾರ್ವಜನಿಕ ಆಡಳಿತ ಅಥವಾ ತಂತ್ರಜ್ಞಾನದಲ್ಲಿ ಅನುಭವ ಹೊಂದಿರುವವರನ್ನು ಈ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಬೇಕು. ಮಾಹಿತಿ ತಂತ್ರಜ್ಞಾನ, ಹಣಕಾಸು ಮತ್ತು ಸಮಾಜ ಕಲ್ಯಾಣ ಈ ಮೂರು ಕ್ಷೇತ್ರಗಳಲ್ಲಿ ಅನುಭವ ಇರುವ ತಲಾ ಒಬ್ಬರು (ಒಟ್ಟು ಮೂವರು) ಪ್ರಾಧಿಕಾರದ ಸದಸ್ಯರಾಗಿರುತ್ತಾರೆ ಎಂದೂ ಮಸೂದೆಯಲ್ಲಿದೆ.

ರೂ. 5 ಲಕ್ಷದವರೆಗೆ ದಂಡ: ಅಕ್ರಮ ಬೆಟ್ಟಿಂಗ್‌ನಲ್ಲಿ ತೊಡಗಿರುವ ನೋಂದಾಯಿಸದ ಆನ್‌ಲೈನ್ ವೇದಿಕೆಗಳು ಮತ್ತು ವ್ಯಕ್ತಿಗಳಿಗೆ ಚಟುವಟಿಕೆ ಸ್ಥಗಿತಗೊಳಿಸುವಂತೆ ಪ್ರಾಧಿಕಾರವು ಆದೇಶ ಹೊರಡಿಸಬೇಕು. ಈ ಅಪರಾಧವನ್ನು ಪುನರಾವರ್ತನೆ ಮಾಡಿದರೆ ರೂ. 5 ಲಕ್ಷದವರೆಗೆ ದಂಡ ವಿಧಿಸಲಾಗುವುದು. ಪ್ರಾಧಿಕಾರವು ನ್ಯಾಯಾಲಯದಿಂದ ವಾರಂಟ್ ಪಡೆದು ಶಂಕಿತ ಅಕ್ರಮ ಬೆಟ್ಟಿಂಗ್ ನಿರ್ವಾಹಕರ ಸ್ಥಳಗಳು, ಸರ್ವರ್‌ಗಳು ಮತ್ತು ದಾಖಲೆಗಳ ಶೋಧ, ವಶಪಡಿಸಿಕೊಳ್ಳುವಿಕೆ ಮತ್ತು ಲೆಕ್ಕಪರಿಶೋಧನೆ ನಡೆಸಬಹುದು. ಪ್ರಾಧಿಕಾರದ ಆದೇಶಗಳ ವಿರುದ್ಧ ಶಂಕಿತ ಅಕ್ರಮ ಬೆಟ್ಟಿಂಗ್ ನಿರ್ವಾಹಕರು 30 ದಿನಗಳ ಒಳಗೆ ಮೇಲ್ಮನವಿಯನ್ನು ಮೇಲ್ಮನವಿ ನ್ಯಾಯಮಂಡಳಿಯ ಮುಂದೆ ಸಲ್ಲಿಸಬಹುದು. ರಾಜ್ಯ ಸರ್ಕಾರ ಇಂತಹ ಅಪರಾಧಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಲು ಕೂಡಾ ಈ ಮಸೂದೆ ಅವಕಾಶ ನೀಡಲಿದೆ.

ಪ್ರಾಧಿಕಾರದ ಕೆಲಸವೇನು

- ●ಕೋರ್ಟ್ ತೀರ್ಪುಗಳು ಮತ್ತು ಉದ್ಯಮ ಮಾನದಂಡಗಳ ಆಧಾರದಲ್ಲಿ 'ಕೌಶಲ ಆಟ'ಗಳು ಮತ್ತು 'ಅದೃಷ್ಟದ ಆಟ'ಗಳ ವ್ಯತ್ಯಾಸ ಗುರುತಿಸಬೇಕು
- ●ನೋಂದಾಯಿಸದ ಆನ್‌ಲೈನ್ ವೇದಿಕೆಗಳು ಮತ್ತು ಅಕ್ರಮ ಬೆಟ್ಟಿಂಗ್ ಚಟುವಟಿಕೆ ಮೇಲೆ ನಿಗಾ
- ●ಆನ್‌ಲೈನ್ ಬೆಟ್ಟಿಂಗ್‌ನ ಅಪಾಯಗಳ ಬಗ್ಗೆ ಅರಿವು ಮೂಡಿಸಲು ಕ್ರಮ
- ●ಕೌಶಲ ಆಧಾರಿತ ಗೇಮಿಂಗ್ ವೇದಿಕೆಗಳನ್ನು ನಿರ್ವಹಿಸುವವರಿಗೆ ಪರವಾನಗಿ
- ●ಮಾಹಿತಿ ತಂತ್ರಜ್ಞಾನ ಇಲಾಖೆ ಮತ್ತು ರಾಜ್ಯ ಪೊಲೀಸ್ ಸೈಬರ್ ಅಪರಾಧ ವಿಭಾಗದ ಜೊತೆ ಸೇರಿ ವೆಬ್‌ಸೈಟ್‌ಗಳು, ಮೊಬೈಲ್ ಆ್ಯಪ್‌ಗಳು, ಡಿಜಿಟಲ್ ಸೇವೆಗಳನ್ನು ಒಳಗೊಂಡಂತೆ ನೋಂದಾಯಿಸದ ಆನ್‌ಲೈನ್ ಬೆಟ್ಟಿಂಗ್ ವೇದಿಕೆಗಳನ್ನು ನಿರ್ಬಂಧಿಸಲು ತಂತ್ರಜ್ಞಾನ ಅಭಿವೃದ್ಧಿಪಡಿಸಬೇಕು
- ●ಪ್ರಾಧಿಕಾರದ ಅಧಿಸೂಚನೆಯ ನಂತರ ನೋಂದಾಯಿಸದ ಆನ್‌ಲೈನ್ ವೇದಿಕೆಗಳನ್ನು ನಿರ್ಬಂಧಿಸಬೇಕು
- ●ಅಕ್ರಮ ಬೆಟ್ಟಿಂಗ್ ವೇದಿಕೆಗಳ ಹಣಕಾಸು ವಹಿವಾಟು ನಿಷೇಧಿಸಬೇಕು
- ●ಅಕ್ರಮ ಬೆಟ್ಟಿಂಗ್ ವೇದಿಕೆಗಳಿಗೆ ಪ್ರವೇಶ ನಿರ್ಬಂಧಿಸಲು ಜಿಯೋ ಫೆನ್ಸಿಂಗ್ ಮತ್ತು ಐಪಿ ಬ್ಲಾಕಿಂಗ್ ತಂತ್ರಜ್ಞಾನಗಳ ಬಳಕೆ ಕಡ್ಡಾಯಗೊಳಿಸಬೇಕು
- ●ಬೆಟ್ಟಿಂಗ್‌ಗೆ ಸಂಬಂಧಿಸಿದ ವ್ಯಸನ ಅಥವಾ ಆರ್ಥಿಕ ತೊಂದರೆಗೆ ಒಳಗಾದವರಿಗೆ ಸಹಾಯವಾಣಿ ಮತ್ತು ಬೆಂಬಲ ಕಾರ್ಯವಿಧಾನ ಆರಂಭಿಸಬೇಕು
- ●ಅಕ್ರಮ ಆನ್‌ಲೈನ್ ಬೆಟ್ಟಿಂಗ್ ನಡೆಸುವವರ ಬಗ್ಗೆ ಮಾಹಿತಿ ನೀಡುವ ವ್ಯಕ್ತಿ ಅಥವಾ ಘಟಕಕ್ಕೆ ರಕ್ಷಣೆ ಮತ್ತು ಸೂಕ್ತ ಬಹುಮಾನ

ಮೈಸೂರು ಅಮ್ಮ ಕೊಡವ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ





ಮೈಸೂರು, ಜು.7–ಮೈಸೂರು ಅಮ್ಮ ಕೊಡವ ಸಮಾಜದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಮಾಜದ ವಾರ್ಷಿಕ ಮಹಾಸಭೆ ಯಾದವಗಿರಿಯ ಹೋಟೆಲ್ ದಾಸ್‌ಪ್ರಕಾಶ್ ಪ್ಯಾರಡೈಸ್‌ನಲ್ಲಿ ಭಾನುವಾರ ಎನ್.ಯು. ಸಂತೋಷ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಹೆಚ್.ಎಂ.ಸುಬ್ಬಮ್ಮಯ್ಯ, ಉಪಾಧ್ಯಕ್ಷರಾಗಿ ಪಿ.ಎಂ.ರವೀಂದ್ರ, ಕಾರ್ಯದರ್ಶಿಯಾಗಿ ಎನ್.ಕೆ. ಶಂಭು, ಕೋಶಾಧಿಕಾರಿಯಾಗಿ ಸಿ.ಕೆ. ಉಮೇಶ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎನ್.ಕೆ.ರಾಮಚಂದ್ರ, ಶ್ರೀಮತಿ ಎನ್.ಆರ್.ಶಕುಂತಲಾ, ಶ್ರೀಮತಿ ಪಿ.ಎಸ್. ಕಾವೇರಿ, ಶ್ರೀಮತಿ ಪಿ.ಎಸ್.ಶೋಭಾ, ಅಚ್ಚಿಯಂಡ ಮಂಜುನಾಥ್, ಬಿ.ಎ.ಗಣೇಶ್, ಶ್ರೀಮತಿ ಬಿಂದು ಅರುಣಾ, ಶ್ರೀಮತಿ ರಾಧಾ, ಶ್ರೀಮತಿ ಸ್ಮಿತಾ, ಶ್ರೀಮತಿ ಸೋನಿ ದಿನು, ಶ್ರೀಮತಿ ಶಿಲ್ಪಾ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಿ. ಆರ್. ಟುವಿಶ್ ಪ್ರಾರ್ಥಿಸಿದರೆ, ಎನ್.ಕೆ.ರಾಮಕೃಷ್ಣ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀಮತಿ ರಾಧಾ ಕಾರ್ಯಕಲಾಪಗಳ ವರದಿ ಸಲ್ಲಿಸಿದರೆ, ಖಜಾಂಚಿ ಸಿ.ಕೆ.ಉಮೇಶ್ ಆಡಿಟ್ ವರದಿ ಮಂಡಿಸಿದರು. ಸಿ.ಬಿ.ಗಿರೀಶ್ ವಂದಿಸಿದರು. ಶ್ರೀಮತಿ ರೂಪಾ ಉಮೇಶ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಎ.ರಚನ್, ಕೆ. ಕೆ.ಅಪ್ಪಣ್ಣ, ಶ್ರೀಮತಿ ರೀಟಾ, ಶ್ರೀಮತಿ ಸ್ಮಿತಾ, ಶ್ರೀಮತಿ ಹರಿಣಿ, ಶ್ರೀಮತಿ ಜಯಂತಿ ಉಪಸ್ಥಿತರಿದ್ದರು.

ಸುಬ್ರತೊ ದಾಸ್ ಪತ್ನಿಗೆ ಚುಚ್ಚುಮದ್ದು ನೀಡಲು ನಿರಾಕರಣೆ: ವೈದ್ಯೆ ಅಮಾನತು

ಮಧ್ಯಪ್ರದೇಶ: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸುಬ್ರತೊ ದಾಸ್ ಅವರ ಪತ್ನಿಗೆ ರೇಬಿಸ್ ನಿರೋಧಕ ಚುಚ್ಚುಮದ್ದು ನೀಡಲು ನಿರಾಕರಿಸಿದ ಆರೋಪದಡಿ ಮಧ್ಯಪ್ರದೇಶ ಧಾರ್ ಜಿಲ್ಲೆಯ ಸಮುದಾಯ ಆರೋಗ್ಯ ಕೇಂದ್ರದ ವೈದ್ಯೆಯನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುಬ್ರತೊ ದಾಸ್–ಸುಶ್ಮಿತಾ ದಾಸ್ ದಂಪತಿ ಧಾರ್ ಜಿಲ್ಲಾ ಕೇಂದ್ರದಿಂದ ಸುಮಾರು 38 ಕಿ.ಮೀ ದೂರದಲ್ಲಿರುವ ಪ್ರವಾಸಿತಾಣ ಮಾಂಡುವಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಬೀದಿ ನಾಯಿಯೊಂದು ಸುಶ್ಮಿತಾ ಅವರ ಕಾಲಿಗೆ ಕಚ್ಚಿತ್ತು. ಕೂಡಲೇ ಸುಬ್ರತೊ ದಾಸ್–ಸುಶ್ಮಿತಾ ದಂಪತಿ ರೇಬಿಸ್ ನಿರೋಧಕ ಚುಚ್ಚುಮದ್ದು ಪಡೆಯಲು ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ಹೋಗಿದ್ದರು. ಈ ವೇಳೆ ಅಲ್ಲಿನ ವೈದ್ಯರು ಲಭ್ಯವಿಲ್ಲ ಎಂಬ ಕಾರಣ ನೀಡಿ ಅವರಿಗೆ ಚುಚ್ಚುಮದ್ದು ನೀಡಲು ನಿರಾಕರಿಸಿದ್ದರು. ಅಲ್ಲದೆ ಅವರನ್ನು ದೂರದ ಆರೋಗ್ಯ ಕೇಂದ್ರಕ್ಕೆ ತೆರಳಲು ಸಲಹೆ ನೀಡಿದ್ದರು ಎನ್ನಲಾಗಿದೆ.

ಕೆಟ್ಟ ವಿಚಾರವೆಂದರೆ ವೈದ್ಯೆ ನನ್ನ ಪತ್ನಿಯನ್ನು ಪರೀಕ್ಷೆ ಕೂಡಾ ನಡೆಸಿಲ್ಲ. ಒಬ್ಬ ವೈದ್ಯೆಯಾದ ಅವರು ಅದನ್ನು ಮಾಡಬೇಕಿತ್ತು. ಅಂತಿಮವಾಗಿ ಸುಶ್ಮಿತಾ ಅವರು ಮಾಂಡು ಆರೋಗ್ಯ ಕೇಂದ್ರದಲ್ಲಿ ಚುಚ್ಚುಮದ್ದು ಪಡೆದಿದ್ದಾರೆ ಎಂದು ಸುಬ್ರತೊ ಅವರು ಮಾಧ್ಯಮಕ್ಕೆ ತಿಳಿಸಿದ್ದಾರೆ.

ವೃಕ್ಷರಕ್ಷಾ ಅಭಿಯಾನ



ಮೈಸೂರಿನಲ್ಲಿ 'ವೃಕ್ಷರಕ್ಷಾ ಅಭಿಯಾನ' ಕೈಗೊಂಡಿರುವ ಪರಿಸರ ಪ್ರೇಮಿಗಳು ಭಾನುವಾರ ಶ್ರೀಮತಿ ಅಕ್ಕಮ್ಮಣ್ಣಿ ಉದ್ಯಾನವನ ಸಮಾನಮನಸ್ಕರೊಂದಿಗೆ ಉದ್ಯಾನದ ಸುತ್ತಮುತ್ತ ಟ್ರೀ ಗಾರ್ಡ್‌ಗಳನ್ನು ತೆರವುಗೊಳಿಸಿದರು. ಮೈಗ್ರಾಪ ಸಂಚಾಲಕ ಭಾನುಪ್ರಶಾಂತ್, ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಮುಖಂಡರಾದ ಬಾಬು, ಗೋಕುಲ್, ರಮಾಮಣಿ, ಪುಟ್ಟಸ್ವಾಮಿ, ಭುವನ್, ಅಣ್ಣಯ್ಯ, ಬಂಗಾರಪ್ಪ, ಲೋಕೇಶ್, ಮಹೇಶ್, ಕೃಷ್ಣಮೂರ್ತಿ, ಆದರ್ಶ್, ರಮೇಶ್, ಚಂದ್ರಶೇಖರ್, ಶೋಭಾ, ವಿಶ್ವನಾಥ್, ಅರುಣ್, ಕ್ಲೀನ್ ಮೈಸೂರು ಫೌಂಡೇಶನ್‌ನ ಲೀಲಾ ವೆಂಕಟೇಶ್, ಪ್ರಭಾಕರ್ ಪುಟ್ಟಪ್ಪ ಮತ್ತಿತರರು ಅಭಿಯಾನದಲ್ಲಿ ಭಾಗವಹಿಸಿದ್ದರು.

ಮೈಸೂರು ರಸ್ತೆಗಳೆಲ್ಲವೂ ಈಗ ಹೊಂಡಮಯ!

ಆಯತಪ್ಪಿದರೆ ವಾಹನ ಚಾಲಕರು, ಸವಾರರ ಸ್ಥಿತಿ ಅಪಾಯಕಾರಿ



ಹುಣಸೂರು ರಸ್ತೆಯ ಕಲಾಮಂದಿರ ವಸತಿ ಗೃಹದ ಬಳಿ ಇರುವ ಅಪಾಯಕಾರಿ ಗುಂಡಿ.



ವಾಲ್ಮೀಕಿ ರಸ್ತೆಯಿಂದ ಹುಣಸೂರು ರಸ್ತೆಗೆ ಸಂಪರ್ಕಿಸುವ ಪರ್ಯಾಯ ರಸ್ತೆ ದುಃಸ್ಥಿತಿ.

ಮೈಸೂರು, ಜು.7– ಮೈಸೂರಿನ ಎರಡು ಪ್ರಮುಖ ರಸ್ತೆಗಳಲ್ಲಿ ಅಪಾಯಕಾರಿ ಹೊಂಡಗಳು ನಿರ್ಮಾಣವಾಗಿದ್ದು, ವಾಹನ ಸವಾರರು ಆತಂಕದಲ್ಲೇ ಸಂಚರಿಸುವಂತಾಗಿದೆ.

ಕೆಆರ್‌ಎಸ್ ರಸ್ತೆ: ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿ ಹಲವು ಹೊಂಡಗಳಿವೆ. ಗೋಕುಲಂನ ಕಾಂಟೂರ್ ರಸ್ತೆ ಸಂದಿಸುವ ಸ್ಥಳದಲ್ಲಿ ಕೆಲ ತಿಂಗಳ ಹಿಂದೆ ಪೈಪ್‌ಲೈನ್ ಕಾಮಗಾರಿ ನಡೆಸಲಾಗಿತ್ತು. ಆ ವೇಳೆ ಮೋರಿ ಬಳಿ ಸಮರ್ಪಕವಾಗಿ ಹೊಂಡ ಮುಚ್ಚಿಲ್ಲ. ನಿರಂತರ ವಾಹನ ಸಂಚಾರದಿಂದಾಗಿ ಇಲ್ಲಿ ದೊಡ್ಡ ಹೊಂಡ ನಿರ್ಮಾಣವಾಗಿದೆ. ಗೋಕುಲಂ ಡಾಕ್ಟರ್ಸ್ ಕಾರ್ನರ್ ಸಂಪರ್ಕಿಸುವ ರಸ್ತೆ ಸಂದಿಸುವ ಸ್ಥಳದಲ್ಲೂ ಅಪಾಯಕಾರಿ ಹೊಂಡ ಸೃಷ್ಟಿಯಾಗಿದೆ. ಬಿಡಬ್ಲ್ಯೂಸಿ ಕಚೇರಿ ರಸ್ತೆ ಬಳಿಯೂ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ.

ಕೆಆರ್‌ಎಸ್ ರಸ್ತೆಯಲ್ಲಿ ನಿರಂತರ ವಾಹನ ಸಂಚಾರವಿರುತ್ತದೆ. ಹೆಚ್ಚಿನ ಸಂಖ್ಯೆಯ ಪ್ರವಾಸಿ ವಾಹನಗಳೂ ಓಡಾಡುತ್ತವೆ. ಶಾಲಾ ವಾಹನಗಳು, ಆಂಬುಲೆನ್ಸ್‌ಗಳ ಸಂಚಾರವೂ ಹೆಚ್ಚಾಗಿರುತ್ತದೆ. ಆದರೆ ಅಲ್ಲಲ್ಲಿ ದೊಡ್ಡ ದೊಡ್ಡ ಹೊಂಡಗಳಿರುವುದರಿಂದ ಅಪಘಾತದ ಆತಂಕ ನಿರ್ಮಾಣವಾಗಿದೆ. ದ್ವಿಚಕ್ರ ವಾಹನ ಸವಾರರಂತೂ ಜೀವ ಭಯದಲ್ಲೇ ಓಡಾಡುವಂತಾಗಿದೆ.

ಹುಣಸೂರು ರಸ್ತೆ: ನಗರದ ಹುಣಸೂರು ರಸ್ತೆಯಲ್ಲಿ ವಾಲ್ಮೀಕಿ ರಸ್ತೆ ಜಂಕ್ಷನ್ ಕಡೆಯಿಂದ ಕಲಾಮಂದಿರ ಸಿಗ್ನಲ್ ಕಡೆಗೆ ಸಾಗುವ ಮಾರ್ಗದ ವಸತಿ ಗೃಹದ ಬಳಿ ಬೃಹತ್ ಗುಂಡಿ ಸೃಷ್ಟಿಯಾಗಿದೆ. ದ್ವಿಚಕ್ರ ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಅಪಘಾತಕ್ಕೀಡಾಗುವುದು ನಿಶ್ಚಿತ. ಗುಂಡಿಯಿಂದ ಆಯತಪ್ಪಿ ಬಿದ್ದಾಗ ಹಿಂದಿನಿಂದ ದೊಡ್ಡ ವಾಹನಗಳು ಬಂದರೆ ಸಾವು–ನೋವು ಸಂಭವಿಸಬಹುದು.

ಹಾಗೆಯೇ ವಾಲ್ಮೀಕಿ ರಸ್ತೆಯಿಂದ ಕಲಾಮಂದಿರದ ಕಡೆಗೆ ತಿರುವು ಪಡೆಯಲು ಇತ್ತೀಚೆಗೆ ನಿರ್ಮಿಸಿದ ಹೊಸ ರಸ್ತೆಯೂ ಗುಂಡಿಮಯವಾಗಿ ಸಂಪೂರ್ಣ ಹಾಳಾಗಿದೆ. ಆಗಾಗ್ಗೆ ಎಲ್ಲಿಂದಲೋ ನೀರು ರಸ್ತೆಗೆ ಹರಿಯುತ್ತಿರುತ್ತದೆ. ವಾಹನ ಸವಾರರು ತುಂಬಾ ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಬೇಕು. ಇಲ್ಲವಾದರೆ ಅಪಘಾತವಾಗಬಹುದು.

ಸದಾ ವಾಹನ ಸಂಚಾರವಿರುವ ಈ ಪ್ರಮುಖ ರಸ್ತೆಗಳ ದುಸ್ಥಿತಿ ಬಗ್ಗೆ ನಗರ ಪಾಲಿಕೆ ಅಧಿಕಾರಿಗಳಾಗಲೀ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಾಗಲೀ ಗಮನಹರಿಸಿಲ್ಲ. ಅಪಾಯಕಾರಿ ಹೊಂಡಗಳ ನಡುವೆಯೇ ವಾಹನ ಸವಾರರು ಸಾಹಸಪಡುತ್ತಿದ್ದರೂ ಕಣ್ಮುಚ್ಚಿ ಕುಳಿತಿದ್ದಾರೆ. ಸಾವು–ನೋವು ಸಂಭವಿಸುವವರೆಗೂ ಅವರು ಕ್ರಮಕ್ಕೆ ಮನಸ್ಸು ಮಾಡುವುದಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ ಉಂಟಾಗಿರುವ ದೊಡ್ಡದಾದ ಹೊಂಡ.

ಗಾಳಿಪಟ ಸ್ಪರ್ಧೆಯಲ್ಲಿ ಬಹುಮಾನ...



ಮೈಸೂರಿನಲ್ಲಿ ವೀರಶೈವ ಸಂಘದ ವತಿಯಿಂದ ಆಯೋಜಿಸಿದ್ದ ಗಾಳಿಪಟ ಉತ್ಸವದಲ್ಲಿ ರೋಲಿಂಗ್ ಕಪ್ ಗೆದ್ದ ನಾಗರಾಜ್ ಅವರಿಗೆ ಸಾಗರ್‌ಕುಮಾರ್ (ಕಪ್‌ನ ಪ್ರಾಯೋಜಕರು) ಅವರ ಪುತ್ರ ಎಂ.ಎಸ್.ಸಾತ್ವಿಕ್ ಕಪ್ ಅನ್ನು ವಿತರಣೆ ಮಾಡಿದರು.

ನಕ್ಕರೆ ಅದೇ ಸ್ವರ್ಗ

ತಿಮ್ಮ : ಸಮಾನತೆ ಎಲ್ಲಿ ಇದೆ?
ಗುಂಡ : ಬಾರಿನಲ್ಲಿ ಇದೆ!
ತಿಮ್ಮ : ಅದು ಹೇಗೆ?
ಗುಂಡ : ಅಲ್ಲಿ ಕುಡಿದ ಮೇಲೆ ಎಲ್ಲರಿಗೂ ಒಂದೇ ಹೆಸರು 'ಕುಡುಕ'

ಮೈಸೂರು ಮಿತ್ರ

ಮಂಗಳವಾರ, 8 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ತಾನು ಯಾರಿಗೂ ಅನಿವಾರ್ಯವಲ್ಲವೆಂದು ಗೊತ್ತಾದಾಗ ಮನುಷ್ಯನ ಅಹಂಕಾರ ತಾನಾಗಿಯೇ ಕಡಿಮೆಯಾಗುತ್ತದೆ.

– ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಲ್ಲಿದ್ದಾಗ ಕಡಲೆ ತಿನ್ನಬೇಕು
ಹರೆಯವಿದ್ದಾಗ ಹಣ ಗಳಿಸಬೇಕು.

ನಿಮ್ಮ ಪತ್ರಗಳು

ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆ; ಸರ್ಕಾರ ರದ್ದುಗೊಳಿಸಲಿ

ಮಾನ್ಯರೆ,

ಪ್ರಸ್ತುತ ರಾಜ್ಯ ಸರ್ಕಾರವು ಸರ್ಕಾರಿ ಶಾಲೆಯ ಶಿಕ್ಷಕರ ವರ್ಗಾವಣೆಗೂ ಮೊದಲು ಮಾಡಲಿಚ್ಛಿಸಿರುವ ಸರ್ಕಾರಿ ಶಾಲಾ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯು ಗೊಂದಲದ ಗೂಡಾಗಿದ್ದು, ಇದರಿಂದ ಹೆಚ್ಚುವರಿಗೊಳ್ಳಲಿರುವ ಶಿಕ್ಷಕರಿಗೆ ಹಲವಾರು ತೊಂದರೆ ಹಾಗೂ ಸಮಸ್ಯೆಗಳಾಗುತ್ತಿದೆ.

ಸರ್ಕಾರಿ ಶಾಲೆಯಲ್ಲಿರುವ ಹೆಚ್ಚುವರಿ ಶಿಕ್ಷಕರನ್ನು ಸರ್ಕಾರ ಗುರುತಿಸುವಾಗ ಆಯಾ ಶಾಲೆಯಲ್ಲಿ ಕಳೆದ ವರ್ಷದ 2024 ಡಿಸೆಂಬರ್ ಅಂತ್ಯಕ್ಕೆ ಇದ್ದ ಮಕ್ಕಳ ದಾಖಲಾತಿಯನ್ನು ಮಾನದಂಡವನ್ನಾಗಿ ಇಟ್ಟುಕೊಂಡಿದೆ. ಆದರೆ ಪ್ರಸ್ತುತ 2025 ಜೂನ್ ತಿಂಗಳಲ್ಲಿ ಮಕ್ಕಳ ದಾಖಲಾತಿ ಸಮಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು, ಈಗ ಮಕ್ಕಳು ಹೆಚ್ಚಿದ್ದರೂ ಆಯಾ ಶಾಲೆಯ ಶಿಕ್ಷಕರು ಹೆಚ್ಚುವರಿ ಪ್ರಕ್ರಿಯೆಗೆ ಒಳಪಡುತ್ತಾರೆ! ಅಲ್ಲದೆ ಈಗಾಗಲೇ ಶೈಕ್ಷಣಿಕ ಪ್ರಕ್ರಿಯೆಗಳು ನಿಯಮಿತವಾಗಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಕರನ್ನು ಹೆಚ್ಚುವರಿ ಮಾಡಿದರೆ ಈ ಬಾರಿಯ ಶೈಕ್ಷಣಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಲಿದೆ.

ಅಲ್ಲದೆ 2017ರ ಸಿ ಅಂಡ್ ಆರ್ ನಿಯಮದಂತೆ ರಾಜ್ಯ ಪ್ರಾಥಮಿಕ ಶಾಲೆಗಳ ಪಿಎಸ್‌ಟಿ ಶಿಕ್ಷಕರ ಹಿಂಬಡ್ತಿಯಾಗಿದ್ದು ಇದು ಪ್ರಸ್ತುತ ನ್ಯಾಯಾಲಯದ ಹಂತದಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ಈ ಸಮಯದಲ್ಲಿ ಪಿಎಸ್‌ಟಿ ಶಿಕ್ಷಕರನ್ನು ಹೆಚ್ಚುವರಿ ಮಾಡಿದರೆ, ಶಿಕ್ಷಕರಿಗೆ ತಾಲೂಕಿನ ಒಳಗೆ ಸೂಕ್ತ ಹುದ್ದೆಗಳು ಲಭ್ಯವಾಗದೆ ಅಂತರ ತಾಲೂಕು ಅಥವಾ ಅಂತರ್ ಜಿಲ್ಲೆಗೆ ವರ್ಗಾವಣೆಯಾಗಬೇಕಾದ ಪರಿಸ್ಥಿತಿ ತಲೆದೋರಲಿದೆ.

ಹೀಗಾಗಿ ಈ ಹಿಂದೆ ಕಡ್ಡಾಯ ವರ್ಗಾವಣೆಯನ್ನು ರದ್ದು ಮಾಡಿದಂತೆ 2017ರ ಸಿ ಅಂಡ್ ಆರ್ ನಿಯಮ ತಿದ್ದುಪಡಿಯಾಗುವವರೆಗೂ ಹಾಗೂ ಈ ಸಂಬಂಧ ನ್ಯಾಯಾಲಯದ ತೀರ್ಪು ಬರುವವರೆಗೂ ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ರದ್ದು ಮಾಡಿ, ಈ ಬಗ್ಗೆ ಸರ್ಕಾರ ಗಮನ ಹರಿಸಿ ಹೆಚ್ಚುವರಿ ಶಿಕ್ಷಕರ ಹಿತ ಕಾಪಾಡುವ ಕೆಲಸವನ್ನು ರಾಜ್ಯ ಶಿಕ್ಷಕರ ಸಂಘ ಹಾಗೂ ಸರ್ಕಾರ ತುರ್ತಾಗಿ ಮಾಡಬೇಕಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**

ಬೈಕ್ ಸವಾರರ ಪುಂಡಾಟಿಕೆಗೆ ಕಡಿವಾಣ ಹಾಕಿ



ಮಾನ್ಯರೆ,

ಇತ್ತೀಚೆಗೆ ಬೈಕ್ ಸವಾರನೊಬ್ಬನ ಅತೀ ವೇಗ ಮತ್ತು ಅಜಾಕರೂಕತೆಯಿಂದ ತನ್ನ ಪ್ರಾಣವನ್ನಷ್ಟೇ ಅಲ್ಲದೆ ಮತ್ತೊಬ್ಬ ಅಮಾಯಕನ ಸಾವಿಗೆ ಕಾರಣವಾಗಿದ್ದು ಅತ್ಯಂತ ವಿಷಾದನೀಯ. ಈ ಕುರಿತು ಮೈಸೂರಿನ ಡಿಸಿಪಿಯವರು ನಾಗರಿಕರಲ್ಲಿ ಅತೀ ವೇಗ ಮತ್ತು ವ್ಹೀಲಿಂಗ್ ನಡೆಸುವವರ ಮಾಹಿತಿ ಕೋರಿರುವುದು ಸರಿಯಷ್ಟೆ. ನಾನು ಕಳೆದ ನವೆಂಬರ್ 10ನೇ ತಾರೀಖಿನಂದು ಹುಣಸೂರಿನಿಂದ ಮೈಸೂರಿನ ಕಡೆಗೆ ನನ್ನ ಕಾರಿನಲ್ಲಿ ಬರುವಾಗ, ಇಲವಾಲದ ಬಳಿ ಮೂರು ಬೈಕ್ ಸವಾರರು ರಾಜ್ಯ ಹೆದ್ದಾರಿಯುದ್ದಕ್ಕೂ ವೀಲಿಂಗ್ ಮಾಡಿಕೊಂಡು ಪುಂಡಾಟಿಕೆ ಮೆರೆದು ಇತರ ವಾಹನ ಸವಾರರಿಗೆ ತೊಂದರೆಯನ್ನು ಉಂಟು ಮಾಡಿದ್ದರು. ಅವರ ನಡವಳಿಕೆ ಇತರ ವಾಹನ ಸವಾರರಿಗೆ ಅಪಾಯವನ್ನು ತಂದೊಡ್ಡುವಂತಿತ್ತು. ನಾನು ಒಬ್ಬ ಪ್ರಜ್ಞಾವಂತ ನಾಗರಿಕನಾಗಿ ಆ ಪುಂಡಾಟಿಕೆಯ ಫೋಟೋಗಳನ್ನು ತೆಗೆದು ಮೈಸೂರು ಪೊಲೀಸ್ ಕಮಿಷನರ್ ಅವರ X ಖಾತೆಗೆ ಕಳುಹಿಸಿದ್ದೆ. ಆದರೆ ಅವರಿಂದ ಈ ಪ್ರದೇಶ ನಮ್ಮ ಕಾರ್ಯವ್ಯಾಪ್ತಿಗೆ ಬರುವುದಿಲ್ಲ ಎಂಬ ಹಾರಿಕೆಯ ಉತ್ತರ ಬಂತು. ನಂತರ ನಾನು ಅದೇ ಫೋಟೋಗಳನ್ನು ಮೈಸೂರು ಪೊಲೀಸ್ ವರಿಷ್ಠಾಧಿಕಾರಿಯವರ X ಖಾತೆಗೂ ರವಾನಿಸಿದ್ದೆ. ಆದರೆ ಅವರಿಂದ ಯಾವುದೇ ಉತ್ತರ ಬರಲಿಲ್ಲ ಮತ್ತು ಯಾವುದೇ ಕ್ರಮ ಕೈಗೊಂಡಿದ್ದೂ ಕಂಡು ಬರಲಿಲ್ಲ. ಒಬ್ಬ ಪ್ರಜ್ಞಾವಂತ ನಾಗರಿಕನಾಗಿ ನಾನು ನನ್ನ ಕರ್ತವ್ಯವೆಂಬಂತೆ ಘಟನೆಯ ಬಗ್ಗೆ ಸಾಕ್ಷಿ ಸಮೇತ ಪೊಲೀಸರ ಗಮನಕ್ಕೆ ತಂದಿದ್ದೆ. ಆದರೆ ಅವರು ಕಾರ್ಯವ್ಯಾಪ್ತಿ ಎಂಬ ನೆಪವೊಡ್ಡಿ ತಮ್ಮ ಜವಾಬ್ದಾರಿಯಿಂದ ವಿಮುಖರಾದಂತೆ ಕಂಡುಬಂತು. ಈ ಘಟನೆಯು ನನಗೆ ಅವರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವಂತೆ ಮಾಡಿತು ಮತ್ತು ಇಂದಿನ ಪತ್ರಿಕೆಯಲ್ಲಿ ಡಿಸಿಪಿಯವರು ನಾಗರಿಕರಲ್ಲಿ ಮಾಡಿದ ಮನವಿಯು ಹಾಸ್ಯಾಸ್ಪದವೆನಿಸಿತು. **–ಎಲ್. ರಾಕೇಶ್, ಮೈಸೂರು.**

ಬಾಡಿಗೆ ಹೆಸರಲ್ಲಿ 'ದರೋಡೆ' ನಡೆಸುವುದು ನ್ಯಾಯವೇ?

ಮಾನ್ಯರೆ,



ಹಲವು ದಿನಗಳಿಂದ ಮೈಸೂರಿನ ರೈಲ್ವೆ ನಿಲ್ದಾಣದ ಆಟೋ ಚಾಲಕರ 'ದರೋಡೆ' ಪದ್ಧತಿ ಮಿತಿ ಮೀರುತ್ತಿದ್ದು, ರಾತ್ರಿ ಹೊತ್ತಿನಲ್ಲಿ ಆಗಮಿಸುವ ಪ್ರಯಾಣಿಕರಿಗೆ ಸಂಚಕಾರ ತಂದೊಡ್ಡಿದೆ. ರಾತ್ರಿ 10 ಗಂಟೆಯ ನಂತರ 100–150 ರೂಪಾಯಿ ಮೇಲೆ ಆಟೋ ಚಾಲಕರು ಕೇಳುವುದು ಸರ್ವೇಸಾಮಾನ್ಯ ಆದರೆ, ಒಂದು ಕಡೆ ನಿಲ್ದಾಣದ ಹಿಂಭಾಗದ ಗೇಟ್‌ನಲ್ಲಿರುವವರು 250–300 ನಷ್ಟು ಹಾಗೂ ದೂರವಿದ್ದಲ್ಲಿ 500–600 ರವರೆಗೂ ಹೇಳಿ ಸುಲಿಗೆ ಮಾಡಿದರೆ, ಮತ್ತೊಂದು ಕಡೆ ಮುಂಭಾಗ ಗೇಟ್ ಬಳಿಯಿರುವ ಪ್ರಿಪೇಯ್ಡ್ ಆಟೋ ಸೇವೆಯಲ್ಲಿಯೂ ಈ ದರೋಡೆ ಮುಂದುವರೆದಿದೆ. ಚಾಲಕರು ಪ್ರಯಾಣಿಕರಿಗೆ ನೀಡುವ ಚೀಟಿಯಲ್ಲಿ ಒಮ್ಮೆ ಹತ್ತಿಸಿಕೊಂಡು ನಿಗದಿತ ಸ್ಥಳಕ್ಕೆ ತಲುಪಿದ ಮೇಲೆ ಚೀಟಿಯಲ್ಲಿರುವ ಹಣಕ್ಕಿಂತ 30 ರಿಂದ 50 ರೂಪಾಯಿ ಹೆಚ್ಚು ಕೇಳುತ್ತಿದ್ದು ಇದೀಗ ಪ್ರಿಪೇಯ್ಡ್ ಸೇವೆಗೂ ದರೋಡೆಯ ಗ್ರಹಣ ಹಿಡಿದಂತಾಗಿದೆ. ಮತ್ತೊಂದು ಕಡೆ ಓಲಾ, ಊಬರ್ ಆಟೋ ಚಾಲಕರು 9 ಗಂಟೆಯ ನಂತರ ಎಷ್ಟೇ ಸಲ ಬುಕಿಂಗ್ ಮಾಡಿದರೂ ರೈಲ್ವೆ ನಿಲ್ದಾಣದತ್ತ ಮುಖ ಮಾಡದಿರುವುದು ಪ್ರಯಾಣಿಕರಿಗೆ ತಲೆನೋವಾಗಿ ಕೊನೆಗೆ ಈ ದರೋಡೆಗೆ ಬಲಿಪಶುಗಳಾಗುತ್ತಿದ್ದಾರೆ. ಇದರ ಬಗ್ಗೆ ನಗರದ ಪೊಲೀಸರು ಬೆಂಗಳೂರಿನಲ್ಲಿ ಅನಗತ್ಯ ಸುಲಿಗೆಗೆ ಬ್ರೇಕ್ ಹಾಕಿರುವ ಹಾಗೆ ಕಠಿಣ ಕ್ರಮ ತೆಗೆದುಕೊಂಡು, ಪ್ರಯಾಣಿಕರನ್ನು ಈ 'ವಸೂಲಿ' ಪದ್ಧತಿಯಿಂದ ಕಾಪಾಡಬೇಕೆಂದು ಮನವಿ.

–ಯಶಸ್. ಆರ್, ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.

ಸೌಖ್ಯ ಬೇಕಾದರೆ ಚಿಂತೆ ಬಿಡಿ... ಚಿಂತನೆ ಮಾಡಿ...!



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654



ಚಿಂತನೆಗಳು, ಸಹಜವಾಗಿ ನಮ್ಮ ದೈನಂದಿನ ಬದುಕಿನಲ್ಲಿ ಪ್ರತೀ ಕ್ಷಣವು ಮೂಡುವಂತಹವು. ಅವು ಧನಾತ್ಮಕವಾಗಿದ್ದರೆ ಮಾತ್ರ ಮಾಡುವ ಕೆಲಸದಲ್ಲಿ ಮತ್ತು ಇಟ್ಟ ಗುರಿಯನ್ನು ಮುಟ್ಟುವುದು ಸಾಧ್ಯವಾಗಬಹುದು. ಮನುಷ್ಯ ಸಾಮಾನ್ಯವಾಗಿ ಹೆಚ್ಚಿನ ಪಾಲು ಯೋಚಿಸುವುದು ಋಣಾತ್ಮಕವಾದ ವಿಷಯ ಕುರಿತಾಗಿ, ಇದರಿಂದ ಅನುಕೂಲಕ್ಕಿಂತ ಹಾನಿಯೇ ಜಾಸ್ತಿ. ಕೆಲವು ದಿನಗಳಿಂದ ಮಾಧ್ಯಮಗಳಲ್ಲಿ ಚಿಕ್ಕ ವಯಸ್ಸಿನವರಿಗೂ ಹೃದಯಾಘಾತ ಉಂಟಾಗುತ್ತಿರುವ, ಅದು ದಿನೇ ದಿನೇ ಹೆಚ್ಚಾಗುತ್ತಿರುವುದು, ಕಾಣುತ್ತಿದ್ದೇವೆ. ಇದಕ್ಕೆ ಕಾರಣಗಳು ಹಲವು. ಅವುಗಳಲ್ಲಿ ಒತ್ತಡ ಮತ್ತು ಯೋಚನೆ ಮಾಡುವುದು ಇತರೆಲ್ಲವುಗಳಿಗಿಂತ ಹೆಚ್ಚು ತೀವ್ರ ಪರಿಣಾಮ ಬೀರುತ್ತದೆ.

ನಾವು ಯೋಚಿಸುವ ಅನವಶ್ಯಕ ವಿಷಯಗಳ ಕಾರಣ ದೈಹಿಕ ಆರೋಗ್ಯದಲ್ಲಿ ವ್ಯತ್ಯಯವಾಗುವುದು. ಚಿಂತೆಯು ಜೀವಂತ ದೇಹವನ್ನು ಸುಡುವುದು. ಈ ಚಿಂತೆ ಯಶಸ್ವಿ ಜೀವನಕ್ಕೂ ಸಂಚಕಾರ ತರುವುದು. ಇದು ಒಂದು ರೀತಿಯ ದ್ವೇಷ ಮತ್ತು ಪ್ರೀತಿಯ ವ್ಯತ್ಯಾಸವಿದ್ದಂತೆ. ಶಾಂತಿ ಮತ್ತು ಯುದ್ಧದ ವಿರುದ್ಧಾರ್ಥದಂತೆ. ಅನವಶ್ಯಕ ಹಾಗೂ ಅನಗತ್ಯ ವಿಷಯಗಳಿಗೂ ಚಿಂತಿಸುವುದು ಮನುಷ್ಯನಿಗೆ ಔಷಧಿ ಇಲ್ಲದ ಮಹಾರೋಗ. ಇಂತಹ ಚಿಂತೆ–ಚಿಂತನೆಗಳ ಚರ್ಚೆ ಮತ್ತು ಪರಿಹಾರದ ಪ್ರಯತ್ನ ಇದು.

ಕೆಲವು ರೋಗಗಳಿಗೆ ವೈದ್ಯಕೀಯವಾಗಿ ಔಷಧಿ ಇಲ್ಲದಿದ್ದರೂ ಚಿಕಿತ್ಸೆಗೆ ನೂರಾರು ಮಾರ್ಗಗಳುಂಟು. ಅವುಗಳಲ್ಲಿ ಕೆಲವನ್ನು ನಮ್ಮ ನಡವಳಿಕೆಯಲ್ಲಿ ಅಳವಡಿಸಿಕೊಂಡರೆ ಸುಂದರಮಯ ಬದುಕು ಕಾಣಬಹುದು. ದೇಹ ಸದೃಢವಾಗಿ ಆರೋಗ್ಯವಾಗಿದ್ದರು ಇಲ್ಲಸಲ್ಲದ ವಿಚಾರಗಳನ್ನು ಮನದೊಳಗೆ ತುಂಬಿಕೊಂಡರೆ ಅದಕ್ಕಿಂತ ದೊಡ್ಡ ಕಾಯಿಲೆ ಇನ್ನೊಂದು ಇರಲಾರದು. ಕ್ರಮೇಣ ಇದು ಸದೃಢ ದೇಹವನ್ನು ಕೂಡ ಬಡಕಲನ್ನಾಗಿಸುವುದು.

ನಮ್ಮ ವಿಚಾರದಲ್ಲಿ ಬೇರೆಯವರು ಏನು ತಿಳಿದುಕೊಂಡಾರು, ನಾನು ನೋಡಲು ಸುಂದರವಾಗಿಲ್ಲ. ಸಭೆ–ಸಮಾರಂಭಗಳಲ್ಲಿ ಹತ್ತಾರು ಜನರ ಮುಂದೆ ಹೇಗೆ ಕಾಣಿಸಿಕೊಳ್ಳುವುದು?, ಹೆಚ್ಚು ಓದಿಲ್ಲ, ನಾಲ್ಕು ಜನರ ಮುಂದೆ ಹೇಗೆ ವ್ಯವಹರಿಸುವುದು?, ಸ್ನೇಹಿತರಂತೆ ನಾನು ಆಸ್ತಿ ಸಂಪಾದಿಸಿಲ್ಲ, ಅವರೆದುರು ಸರಿಸಮನಾಗಿ ನಿಲ್ಲುವುದು ಹೇಗೆ?, ಹೀಗೆ ನೂರೆಂಟು ಯೋಚನೆಗಳನ್ನು ನಮ್ಮ ಮನಸ್ಸಿನಿಂದ ಮೊದಲು ಕಿತ್ತು ಒಗೆಯಬೇಕು.

ಮರಕ್ಕಿಂತ ಮರ ದೊಡ್ಡದು ಎನ್ನುವಂತೆ ಒಬ್ಬರಿಗಿಂತ ಒಬ್ಬರು ದೊಡ್ಡವರು ಇದ್ದೇ ಇರುತ್ತಾರೆ. ನಮಗೆ ದಕ್ಕಿದ್ದರಲ್ಲಿ ನಾವು ತೃಪ್ತಿ ಪಟ್ಟುಕೊಳ್ಳಬೇಕಿದೆ. ಬೇರೆಯವರ ನಿಂದನೆ, ತೆಗಳಿಕೆಗಳಿಗೆ ಕುಂದದೆ, ಸಾಧನೆಯ ಕಡೆ ನಮ್ಮ ಒಲವು ಇದ್ದರೆ ಅಂದುಕೊಂಡಂತೆ ಸಂಪಾದನೆಯು ತಾನಾಗಿ ಒಲಿಯುವುದು. ಇಷ್ಟಾಗಿಯೂ ನಾವು ನಮ್ಮ ಸುತ್ತಲಿನ ಪ್ರತಿಕ್ರಿಯೆಗಳಿಗೆ ಅನುಸಾರವಾಗಿ ನಮ್ಮಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣ. ಇಲ್ಲಿ ಮಂಕುತಿಮ್ಮನ ಕಗ್ಗದ ನುಡಿಯನ್ನು ಉದಾಹರಿಸುವುದಾದರೆ

ಸತ್ತನೆಂದೆನಬೇಡ: ಸೋತನೆಂದೆನಬೇಡ।
ಬತ್ತಿತೆನ್ನೊಳು ಸತ್ತ್ವದೂಟೆಯೆನಬೆಡ॥
ಮೃತ್ಯುವೆನ್ನುವುದೊಂದು ತೆರೆಯಿಳಿತ: ತೆರೆಯೇರ।
ಮತ್ತೆ ತೋರ್ಪುದು ನಾಳೆ –ಮಂಕುತಿಮ್ಮ॥

ನಾನು ಜೀವನದಲ್ಲಿ ಸತ್ತೆನು, ನಾನು ಸೋತೆನು. ನನ್ನ ಅಂತರಂಗದಲ್ಲಿ ಉತ್ಸಾಹದ ಚಿಲುಮೆ ಬತ್ತಿತು ಎನ್ನಬೇಡ. ಸಾವು ಎನ್ನುವುದು ಅಲೆಯ ಏರಿಳಿತದಂತೆ. ಏರಿಕೆ–ಇಳಿಕೆ ಸಹಜ. ಇಂದು ಅಲೆಗಳು ಇಳಿದರೆ ನಾಳೆ ಏಳುವುದು. ಸೋಲು–ಗೆಲುವು ಕೂಡ ಹೀಗೆಯೇ. ಕೆಲವರಂತೂ ಸೋತಾಗ ಜೀವನವೇ ಮುಗಿಯಿತೆಂದು ಕೆಟ್ಟ ಯೋಚನೆಗಳನ್ನು ತಲೆಯಲ್ಲಿ ತುಂಬಿಕೊಂಡು ಆತ್ಮಹತ್ಯೆಯಂತಹ ಅನಾಹುತಕ್ಕೆ ಮುಂದಾಗುವರು. ಸಾವನ್ನು ಅಪ್ಪುವಂತಹ ಸಾಹಸಕ್ಕೆ ಮನಸ್ಸು ಮಾಡುವ ಇವರು ಮನುಷ್ಯನಿಗೆ ಬರುವ ಸಾಮಾನ್ಯ ಕಷ್ಟಗಳನ್ನು ಎದು ರಿಸಲು ಬಲಹೀನರಾಗಿರುವುದಕ್ಕೆ ಕಾರಣ ಮನಸ್ಸಿನಲ್ಲಿ ಯೋಚಿಸುವ ನಕಾರಾತ್ಮಕವಾದ ವಿಷಯಗಳು: ಮುಂದೇನಾಗಬಹುದು?, ನೆರೆ–ಹೊರೆಯವರು ಏನೆಂದು ಕೊಂಡಾರೋ?, ಮತ್ತೇ ಚೇತರಿಸಿಕೊಳ್ಳಲು ನನಗೆ ಸಾಧ್ಯವೇ?, ಅಯ್ಯೋ ಮಹಾರಾಯ ಗೆದ್ದವರೆಲ್ಲ ಯಾವಾಗಲೂ ಗೆಲ್ಲುತ್ತಿದ್ದವರಲ್ಲ; ಹಾಗೆಯೇ ಸೋತವರೂ ಸಹ ಯಾವಾಗಲೂ ಸೋಲುತ್ತಿದ್ದವರಲ್ಲ. ಯಾರಿಗಾದರೂ ಸರಿ ಸತತ ಪ್ರಯತ್ನವು ಗ್ಯಾರಂಟಿಯಾಗಿ ಗೆಲುವನ್ನು ಕೊಟ್ಟೇ ಕೊಡುವುದು.

ಸೋಲು–ಗೆಲುವುಗಳ ವಿಚಾರದಲ್ಲಿ ಸಾಮಾನ್ಯರಾದ ನಾವು ಇಂದಿನ ರಾಜಕಾರಣಿಗಳನ್ನು ನೋಡಿ ಕಲಿಯಬೇಕಿದೆ. ಚುನಾವಣೆಯಲ್ಲಿ ಸೋತರೆ ಆತ ಮುಂದಿನ ಚುನಾವಣೆಗೆ ಸಿದ್ಧನಾಗುತ್ತಾನೆ. ಎಷ್ಟು ಸಾರಿ ಸೋತರೂ, ಆತ ಸೋತೆನೆಂದು ಯೋಚಿಸಿ ಸಾವಿಗೆ ಶರಣಾಗುವುದಿಲ್ಲ. ವಿದ್ಯಾರ್ಥಿಗಳಾದವರು ಪರೀಕ್ಷೆಗಳನ್ನು ಎದುರಿಸಲಾಗದೆ ಅಥವಾ ಫೇಲ್ ಆದನೆಂದು ಆತ್ಮಹತ್ಯೆ ಮಾಡಿಕೊಳ್ಳುವುದು ದುರ್ಬಲ ಮನಸ್ಸುಗಳಲ್ಲಿ ನಡೆಯುವ ಋಣಾತ್ಮಕ ಯೋಚನೆಗಳ ಪರಿಣಾಮ. ಪ್ರಪಂಚದಲ್ಲಿ ಎಲ್ಲರಿಗೂ ಸಮನಾದ ಅವಕಾಶವಿದೆ. ರ್‍ಯಾಂಕ್ ಪಡೆದವನಿಗೊಂದು ತೃತೀಯ ದರ್ಜೆಯಲ್ಲಿ ಪಾಸು ಆದವನಿಗೊಂದು ಎಂಬುದಿಲ್ಲ. ಜೀವನದ ಪರೀಕ್ಷೆಗಳಲ್ಲಿ ಯಶಸ್ವಿ ಆದವರಲ್ಲಿ ಹೆಚ್ಚಿನವರು ಲಾಸ್ಟ್ ಬೆಂಚಿನ ಮಕ್ಕಳೇ ಅಲ್ಲವೇ?. ಶೇ. 40ಕ್ಕಿಂತ ಕಡಿಮೆ ಅಂಕ ತೆಗೆದವರು ಅಧಿಕಾರದ ಸೂತ್ರ ಹಿಡಿಯುವ ಚಾಣಾಕ್ಷತೆ ಬಲ್ಲವರಾಗಿರುತ್ತಾರೆ.

ಜೀವನದ ಯಶಸ್ಸಿಗೆ ನಮ್ಮ ಯೋಚನಾ ಲಹರಿಗಳನ್ನು ಬದಲಾಯಿಸಿಕೊಳ್ಳಬೇಕು. ಮುಂದಾಗುವುದನ್ನು ನೆನೆದು ಇಂದೇ ಸೋಲನ್ನು ಒಪ್ಪಿಕೊಳ್ಳುವುದನ್ನು ಬಿಡಬೇಕು. ಆಗ ಮಾತ್ರ ಬರುವ ದಿನಗಳಲ್ಲಿ ಯಶಸ್ಸನ್ನು ಕಾಣಲಿಕ್ಕೆ ಸಾಧ್ಯ. ಸೋಲು–ಗೆಲುವುಗಳು ಯಾರಪ್ಪನ ಸ್ವತ್ತು ಅಲ್ಲ. ಯಾರು ಗಳಿಸುತ್ತಾರೋ ಅವರದಾಗುವುದು. ಈ ನಿಟ್ಟಿನಲ್ಲಿ ನಾವು ಹೆಜ್ಜೆ ಇಡೋಣ. ನಡವಳಿಕೆಯಲ್ಲಿ ಇರುವ ಲೋಪಗಳ ತಿದ್ದಿಕೊಳ್ಳಲು ಕೆಲವು ಟಿಪ್ಸ್‌ಗಳು:

ಕೆಲವರು ನಮ್ಮನ್ನು ತೆಗಳುತ್ತಿದ್ದರೆ ಖಂಡಿತ ನಮ್ಮಲ್ಲಿ ಏನೋ ದೋಷವಿದೆ ಎಂದರ್ಥ: ಒಬ್ಬ ವ್ಯಕ್ತಿಯನ್ನು ದೂಷಿಸಲು ನೂರೆಂಟು ಕಾರಣಗಳಿರುತ್ತವೆ. ಹಾಗೆಯೇ ಯಾರಾದರು ನಮ್ಮನ್ನು ದೂಷಿಸಿದರೆ ಕೋಪಿಸಿಕೊಳ್ಳುವುದಕ್ಕಿಂತ ನಾವು ತಿಳಿಯಬೇಕಿದೆ ನಮ್ಮ ನಡುವಳಿಕೆಯಲ್ಲಿ ಏನೋ ದೋಷ ಇದೆಯೆಂದು. ನಮಗೆ ಚೆಂದ ಕಾಣುವುದು ಬೇರೆಯವರಿಗೆ ಕಾಣದಿರಬಹುದು. ನಮಗಾಗಿ ನಾವು ಬದುಕಬೇಕು ಎನ್ನುವುದು ಸರಿ ಆದರೆ ನಾವು ಬದುಕುತ್ತಿರುವುದು ಸಮಾಜದ ಮಧ್ಯೆ. ಹಾಗಾಗಿ ಬೇರೆಯವರ ಆಸೆ–ಅಭಿಲಾಷೆಗಳನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಬೇಕು.

ನಮ್ಮ ಆತ್ಮ ತೃಪ್ತಿಗೆ ಅನುಗುಣವಾಗಿ ಇರಬೇಕು: ಪ್ರತಿಯೊಬ್ಬರಲ್ಲೂ ಆತ್ಮಸಾಕ್ಷಿ ಎನ್ನುವುದು ಇದೆ ಎಂಬುದು ನಮ್ಮ ನಂಬಿಕೆ ಮತ್ತು ಅದು ಸತ್ಯವು ಕೂಡ. ನಾವು ಏನೇ ಮಾಡಿದರೂ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆಯ ಕೂಡದು, ನಡೆದೇ ಆದಲ್ಲಿ ನಮ್ಮ ವ್ಯಕ್ತಿತ್ವಕ್ಕೆ ದಕ್ಕೆ ಬರುವುದು ಗ್ಯಾರಂಟಿ. ಆತ್ಮಸಾಕ್ಷಿಯ ನೆಪದಲ್ಲಿ ಮತ್ತೊಬ್ಬರ ಸ್ವಾಭಿಮಾನ ಮತ್ತು ಅವರ ಗೌರವಕ್ಕೆ ವಿರುದ್ಧವಾಗಿಯೂ ನಾವು ನಡೆಯಕೂಡದು.

> ಸುಖಪಡುವುದಕ್ಕೆ ಎಲ್ಲರಿಗೂ ಎಲ್ಲವನ್ನೂ ಆ ದೇವರು ಹುಟ್ಟಿನಿಂದಲೇ ಕಲ್ಪಿಸಿದ್ದಾನೆ. ಅವುಗಳನ್ನು ಸದುಪಯೋಗ ಮಾಡಿಕೊಂಡು ಇದ್ದುದರಲ್ಲಿ ಸುಖಪಡುವುದು ನಮಗೆ ಬಿಟ್ಟಿದ್ದು. ಆದರೆ ನಾವು ಅನವಶ್ಯಕ ವಿಚಾರಗಳು–ವಸ್ತುಗಳಿಗೆ ಮಾರುಹೋಗಿ ಇದ್ದುದ್ದನ್ನು ಬಿಟ್ಟು ಇರದಿದ್ದುದ್ದನ್ನು ಹುಡುಕುತ್ತಲೇ ಜೀವನ ಮುಗಿಸಿ ಬಿಡುತ್ತೇವೆ. ನಮ್ಮಲ್ಲಿರುವ ಅನವಶ್ಯಕ ಯೋಚನೆ–ಯೋಜನೆಗಳನ್ನು ಕೈಬಿಟ್ಟರೆ ಸುಖ ಎನ್ನುವುದು ತಾನಾಗೇ ಒಲಿಯುತ್ತದೆ.

ಯಾವುದು ಗೊತ್ತಿಲ್ಲವೋ ಅದನ್ನು ಮಾಡಕೂಡದು: ನಮಗೆ ಗೊತ್ತಿಲ್ಲದ ಕ್ಷೇತ್ರಕ್ಕೆ ಕೈ ಹಾಕಿ ಸುಟ್ಟುಕೊಳ್ಳುವವರೇ ಹೆಚ್ಚು. ನಾವು ಯಾವುದರಲ್ಲಿ ಹೆಚ್ಚು ಪರಿಣಿತರೋ ಅದರಲ್ಲಿ ಮುಂದುವರಿದರೆ ಯಶಸ್ಸು ಕಾಣಲು ಸಾಧ್ಯ. ಹೊಸದನ್ನು ಕಲಿಯಬೇಕು, ಸೃಜನಶೀಲತೆ ಇರಬೇಕು ನಿಜ ಆದರೆ ರಿಸ್ಕ್ ಪ್ರಮಾಣವನ್ನು ತಿಳಿದಿರಬೇಕಾಗುತ್ತದೆ. ಮನಸ್ಸು ಯಾವಾಗಲೂ ನಮ್ಮಲ್ಲಿ ಇಲ್ಲದ ಕಡೆಗೇ ಯೋಚಿಸುತ್ತಿರುತ್ತದೆ, ಇದು ನಮಗೆ ತಿಳುವಳಿಕೆ ಇಲ್ಲದ ಕಡೆಗೆ ವಾಲಿ ಕೈ ಸುಟ್ಟುಕೊಳ್ಳುವಂತೆ ಮಾಡುತ್ತದೆ. ಮನಸ್ಸಿನಲ್ಲಿ ಆಸೆಯ ಬೀಜ ಬಿತ್ತಬೇಕು ಆದರೆ ದುರಾಸೆಯ ಫಲಕ್ಕಾಗಿ ಹಾತೊರೆಯುವುದು ಬೇಡ.

ನಾನು ಇಚ್ಛೆಪಟ್ಟ ರೀತಿಯಲ್ಲಿ ನನ್ನ ಜೀವನವಿಲ್ಲ: ಇದನ್ನು ನಮ್ಮ ಮನಸ್ಸಿನಿಂದ ಮೊದಲು ಕಿತ್ತು ಎಸೆಯಬೇಕು. ದೂರದ ಬೆಟ್ಟ ನುಣ್ಣಗೆ ಎನ್ನುವಂತೆ ಶ್ರೀಮಂತಿಕೆಯ ಜೀವನ ನಡೆಸುವವರೆಲ್ಲ ಸುಖೀಗಳಲ್ಲ. ಅವರಿಗೂ ನೋವುಗಳು ನೂರೆಂಟಿವೆ. ಒಬ್ಬ ಬಡವನಿಗಿಂತಲೂ ಹೆಚ್ಚು ನೋವುಗಳು ಅವನಿಗೆ ಇರುತ್ತವೆ. ಐಷಾರಾಮಿ ಜೀವನದ ಹಿಂದೆ ಹೊರಟವರಿಗೆ ಕಷ್ಟಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾನು ಕೈತುಂಬ ಸಂಬಳ ಪಡೆಯುವ ಸರ್ಕಾರಿ ಕೆಲಸಕ್ಕೆ ಸೇರಿ ಜೀವನಪೂರ ಸುಖವಾಗಿ ಇರಬೇಕು ಎನ್ನುವ ಇಚ್ಛೆ ಕೈಗೂಡದಿರಬಹುದು, ಶ್ರದ್ಧೆ ಮತ್ತು ಛಲ ಇದ್ದರೆ ಸಾರ್ವಜನಿಕ ಜೀವನದಲ್ಲಿ ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಜೀವನ ನಡೆಸಬಹುದು. ನೆನೆಸಿದ್ದು ಕೈಗೂಡದಿದ್ದರೆ ಅದಕ್ಕಿಂತಲೂ ಹೆಚ್ಚಿನದು ನಮ್ಮದಾಗಬಹುದು ಎನ್ನುವ ಚಿಂತೆ ನಮ್ಮಲ್ಲಿರಲಿ.

ನಮ್ಮ ಬಗ್ಗೆ ನಮಗೇ ಕೀಳುಭಾವನೆ: ಇಂದು ನಾವು ಏನಾಗಿದ್ದೇವೆಯೋ ಅದನ್ನು ನಾವು ಪ್ರೀತಿಸಬೇಕು. ಕೀಳುಭಾವನೆಯಿಂದ ಅಯ್ಯೋ ನಾನು ಹೀಗಿದ್ದೇನೆ ಆಗಾಗಬೇಕಾಗಿತ್ತು, ನನ್ನ ಸ್ನೇಹಿತ ಶ್ರೀಮಂತ, ದೊಡ್ಡ ಹುದ್ದೆಯಲ್ಲಿ ಇದ್ದಾನೆ, ಅವನೊಡನೆ ಹೇಗೆ ಮಾತನಾಡುವುದು.... ಇವುಗಳೆಲ್ಲ ನಮ್ಮ ಕೀಳರಿಮೆಯ ಲಕ್ಷಣಗಳು. ಅದು ಹಾಗೆ ಇದೆ, ಇದು ಹೀಗಿದೆ, ಅದು ಹೇಗೇಗೋ ಎನ್ನುವ ಹೊತ್ತಿಗೆ ನಮ್ಮ ಬದುಕು ಮುಗಿದು ಹೋಗುವುದು, ಮುಗಿದು ಕಣ್ಮರೆಯಾಗುವುದು. ಈಗಲೋ ಆಗಲೋ ಎಂದೋ ಕೊನೆಯುಂಟು ಎಂಬುದನ್ನು ತಿಳಿದು ಇದ್ದು ದರಲ್ಲಿ ಸುಖ ಕಾಣುವುದು ಒಳ್ಳೆಯದು.

ನಾವು ತಿರಸ್ಕರಿಲ್ಪಟ್ಟರೆ ಅರ್ಹರಲ್ಲವೆಂಬುದು ಅರ್ಥ: ಎಲ್ಲದರಲ್ಲಿಯೂ ಎಲ್ಲರನ್ನು ಒಪ್ಪಿಕೊಳ್ಳುವುದು ಅಸಾಧ್ಯ, ಕೆಲವು ತಿರಸ್ಕರಿಸಲ್ಪಟ್ಟರೆ ನಾವು ಅರ್ಹರಲ್ಲ ಎಂಬುದು ತಪ್ಪು. ತಿರಸ್ಕಾರ ಮತ್ತು ಅಂಗೀಕಾರಗಳು ಬಹಳಷ್ಟು ಸಮಯ ಸಂದರ್ಭಗಳ ಮೇಲೆ ಆಧಾರಿತವಾಗಿರುತ್ತವೆ. ಪ್ರಸ್ತುತ ಕಾಲ ದಲ್ಲಂತೂ ಭ್ರಷ್ಟತೆ ತಾಂಡವಾಡುತ್ತಿದ್ದು ಇದರಿಂದ ಅರ್ಹರು ಅನರ್ಹರಾಗುತ್ತಾರೆ, ಅನರ್ಹರು ಅರ್ಹರಾಗುತ್ತಾರೆ. ಆದ್ದರಿಂದ ತಿರಸ್ಕರಿಲ್ಪಟ್ಟರೆ ಅರ್ಹರಲ್ಲ ಹೌದು, ಅದು ಎಲ್ಲಾ ಸಂದರ್ಭಕ್ಕೂ ಅನ್ವಯ ಅಲ್ಲ.

ಸ್ಟೀವನ್ ಐಚಿನ್‌ಸನ್ ಹೇಳುವಂತೆ Change your thoughts –Change your life, ನಮ್ಮ ಯೋಚನೆಗಳನ್ನು ಬದಲಾಯಿಸಿ ಜೀವನವನ್ನು ಬದಲಾಯಿಸಿಕೊಳ್ಳೋಣ. ಯೋಚನೆಗಳು ದೃಢವಾಗಿರಲಿ, ದುರ್ಬಲವಾಗುವುದು ಬೇಡ. ಒಂದು ಸಿಂಪಲ್ ಉದಾಹರಣೆ: ಸಿಟಿ ಬಸ್ಸಿನ ಮುಂಭಾಗದಲ್ಲಿ ಕುಳಿತು ಡ್ರೈವರ್ ಬಸ್ಸನ್ನು ಚಲಿಸುವುದನ್ನು ಗಮನಿಸಿ ಮುಂದೆ ನೂರಾರು ವಾಹನಗಳು ಎದುರು ಬರುತ್ತಿರುತ್ತವೆ. ಜನಗಳು ಅಡ್ಡಾದಿಡ್ಡಿ ರಸ್ತೆಯನ್ನು ದಾಟುತ್ತಿರುತ್ತಾರೆ. ನನ್ನ ಬಸ್ಸಿಗೆ ಸಿಲುಕಿಬಿಡಬಹುದೆಂಬ ಭಯ ಅವನಲ್ಲಿದ್ದರೆ ಖಂಡಿತಾ ಬಸ್ಸನ್ನು ಓಡಿಸಲು ಸಾಧ್ಯವಾಗದು. ಬಸ್ಸಿನ ಮುಂಭಾಗದ ಸನ್ನಿವೇಶವನ್ನು ನೋಡುತ್ತಿರುವ ನಮಗೆ ಭಯವಾಗುತ್ತಿರುತ್ತದೆ. ಆದರೆ ಆತ ಲೀಲಾಜಾಲವಾಗಿ ವೇಗವಾಗಿಯೇ ಬಸ್ಸನ್ನು ಓಡಿಸುತ್ತಿರುತ್ತಾನೆ.

ಜೀವನವೂ ಸಿಟಿ ಬಸ್ಸು ಇದ್ದಂತೆ, ಬದುಕಿನ ಪ್ರಯಾಣ ಸುಖಕರವಾಗಿಬೇಕಾದರೆ ನಮ್ಮ ಯೋಚನೆಯಲ್ಲಿ ದೃಢತೆ ಇರಬೇಕು. ಅಳುಕು ಮನಸ್ಸಿನಿಂದ ಚಲಿಸಿದರೆ ಅಪಘಾತಗಳು ತಪ್ಪಿದ್ದಲ್ಲ. ಅದೃಷ್ಟವೂ ಹಾಗೆ ಒಂದು ಸಾರಿ ರೆಡ್ ಸಿಗ್ನಲ್‌ಗೆ ಸಿಲುಕಿದರೆ ಮುಂದೆ ಬರುವ ಎಲ್ಲಾ ಸರ್ಕಲ್‌ಗಳಲ್ಲೂ ನಮಗೆ ರೆಡ್ ಸಿಗ್ನಲ್ಲುಗಳು ಎದುರಾಗುತ್ತವೆ.

ನಾನು ಪುಣ್ಯಕ್ಷೇತ್ರಕ್ಕೆ ಪ್ರವಾಸ ಹೊರಡಬೇಕಿತ್ತು. ಆದರೆ ಕಾರಣಾಂತರಗಳಿಂದ ಹೋಗಲಾಗಲಿಲ್ಲ. ಅಯ್ಯೋ ಹೋಗಲಿಲ್ಲವಲ್ಲ, ದೇವರ ದರ್ಶನ ಮಾಡಲಿಲ್ಲವಲ್ಲ ಎಂದು ಪರಿತಪಿಸುವ ಬದಲು ಮನೆಯೇ ಮಂತ್ರಾಲಯವೆಂದು ಹೆಂಡತಿ ಮಕ್ಕಳೊಡನೆ ದೇವರ ಆರಾಧಿಸುವುದು ಬುದ್ಧಿವಂತಿಕೆ ಅಲ್ಲವೆ?, ಅವಕಾಶಗಳು ಬರುತ್ತಲೇ ಇರುತ್ತವೆ ಮುಂದೊಮ್ಮೆ ಕುಟುಂಬ ಸಮೇತ ಹೋಗಿ ಬಂದರಾಯಿತು.

ಸುಖಪಡುವುದಕ್ಕೆ ಎಲ್ಲರಿಗೂ, ಎಲ್ಲವನ್ನೂ ಆ ದೇವರು ಹುಟ್ಟಿನಿಂದಲೇ ಕೊಟ್ಟಿದ್ದಾನೆ. ಅವುಗಳನ್ನು ಸದುಪಯೋಗ ಮಾಡಿಕೊಂಡು ಇದ್ದುದರಲ್ಲಿ ಸುಖಪಡುವುದು ನಮ್ಮ ಕೈಯ್ಯಲ್ಲಿದೆ. ಆದರೆ ನಾವು ಅನವಶ್ಯಕ ಯೋಚನೆಗಳಿಗೆ ಒಳಗಾಗಿ ಅದನ್ನು ಸಿಗದ ಕಡೆ ಹುಡುಕುತ್ತಲೇ ಜೀವನ ಮುಗಿಸಿಬಿಡುತ್ತೇವೆ. ಇದರ ಬದಲಾಗಿ ನಮ್ಮಲ್ಲಿರುವ ಅನವಶ್ಯಕ ಯೋಚನೆಗಳನ್ನು ನಿಲ್ಲಿಸಿದರೆ ಸುಖ ಎನ್ನುವುದು ತಾನಾಗೇ ನಮ್ಮೊಳಗಿನಿಂದಲೇ ಹುಟ್ಟುವುದು.

ಹೃದಯ, ಮೂತ್ರಪಿಂಡ, ಕಣ್ಣುಕಿವಿ, ಕೈಕಾಲುಗಳು, ದೇಹದ ನರಮಂಡಲ, ಜೀರ್ಣಾಂಗ ಇವೆಲ್ಲವೂ ತಮ್ಮ ಕಾರ್ಯಗಳನ್ನು ಆರೋಗ್ಯಕರವಾಗಿ ನಿರ್ವಹಿಸಿಕೊಂಡು ಹೋಗಬೇಕಾದರೆ ಬೇಕಿರುವುದು ನೀವು ತೆಗೆದುಕೊಳ್ಳುವ ಔಷಧವಲ್ಲ, ತಿನ್ನುವ ವ್ಯುಷ್ಟಾನ್ನವಲ್ಲ, ಅವಶ್ಯವಿರುವುದು ಒಳ್ಳೆಯ ಮನಸ್ಸು ಅದರೊಳಗೆ ಧನಾತ್ಮಕವಾಗಿ ತುಡಿಯುವ ಯೋಚನೆಗಳು ಹಾಗೂ ಚಿಂತನೆಗಳು.

ಈ ಹೃದಯ ಮಿಡಿಯುತ್ತಿದೆ ಸದಾ ನನಗಾಗಿ...!

– ಪ್ರಶಾಂತ್ ಕುಮಾರ್ ಎ.ಪಿ.
ಸಹಾಯಕ ಪ್ರಾಧ್ಯಾಪಕರು,
ಮೊ: 9844859950



ವಿಶ್ರಾಂತಿ ರಹಿತ ಪರಿಶ್ರಮಕ್ಕೆ ನಾವು ಏನೆಲ್ಲಾ ಉದಾಹರಣೆ ಕೊಡಬಹುದು. ಆದರೆ, ನಮ್ಮ ಹೃದಯದ 24 X 7 ಪರಿಶ್ರಮದ ಮುಂದೆ ಅವೆಲ್ಲವೂ ತೃಣ ಸಮಾನ. ನಮ್ಮ ದೇಹದಲ್ಲಿರುವ ಯಾವುದಾದರೂ ಒಂದು ಭಾಗಕ್ಕೆ ಪ್ರಥಮ ಪ್ರಾಶಸ್ತ್ಯ ನೀಡುವಿರಿ ಎನ್ನುವುದಾದರೆ ಅದು ಹೃದಯಕ್ಕೆ ಮಾತ್ರ ಸಲ್ಲಬೇಕು. ತನ್ನ ಜೀವಿತಾವಧಿಯಲ್ಲಿ ಎಂದೂ ವಿಶ್ರಾಂತಿಯನ್ನು ಬಯಸದೆ, ಇತರರ ಒಳಿತಿಗಾಗಿ ಹಗಲಿರುಳೆನ್ನದೆ ಲುಬ್–ಡುಬ್ ಎಂದು ಸತತವಾಗಿ ಮಿಡಿಯುವ ದೇಹದ ಏಕೈಕ ಭಾಗ ಎದೆಯಲ್ಲಿರುವ ಹೃದಯ.

ಶರೀರದ ವಿವಿಧ ಭಾಗಗಳ ಜೀವ, ಜೀವನ, ಭವಿಷ್ಯ ನಿಂತಿರುವುದು ಹೃದಯದ ಚಲನೆಯ ಮೇಲೆಯೇ. ಒಮ್ಮೆ ಹೃದಯ ತನ್ನ ಚಲನೆಯನ್ನು ನಿಲ್ಲಿಸಿದೆ ಅಂದರೆ ಅದರರ್ಥ ಎಲ್ಲಾ ಭಾಗಗಳ ಅಂತಿಮ ವಿದಾಯ. ಒಟ್ಟಾರೆ ಹೇಳುವುದಾದರೆ ಅದು ಮನುಷ್ಯನ ಸಾವು.

ಎಲ್ಲರೂ ಹೇಳುತ್ತಾರೆ. ಅವನು ಆ ರೋಗ ಬಂದು ಸತ್ತ, ಇವನು ಈ ರೋಗ ಬಂದು ಸತ್ತ ಎಂದು. ಆದರೆ ಸಂಶೋಧನೆಗಳ ಪ್ರಕಾರ, ಜಗತ್ತಿನ ಶೇಕಡಾ 99 ಭಾಗ ಸಾವುಗಳಾಗುವುದು ಹೃದಯ ಬಡಿತ ನಿಲ್ಲುವುದರಿಂದಲೇ. ಅಂದರೆ, ರೋಗಗಳು ಅಂತಿಮ ಹಂತಕ್ಕೆ ಹೋದಾಗ, ಅವು ಹೃದಯದ ಚಲನೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡಿ, ಕೊನೆಯದಾಗಿ ಹೃದಯದ ಚಲನೆಯನ್ನೇ ನಿಲ್ಲಿಸಿಬಿಡುತ್ತವೆ. ಹೀಗಾದಾಗ, ಹೃದಯದಿಂದ ಶರೀರದ ವಿವಿಧ ಭಾಗಗಳಿಗೆ ಅತ್ಯವಶ್ಯಕವಾಗಿರುವ ಆಮ್ಲಜನಕ, ರಕ್ತ ಪೂರೈಕೆ



ತಕ್ಷಣವೇ ನಿಲ್ಲುತ್ತದೆ. ಮಾನವನ ದೇಹದ ಭಾಗಗಳು ಒಂದೊಂದಾಗಿ ತನ್ನ ಕೆಲಸಗಳನ್ನು ನಿಲ್ಲಿಸುತ್ತಾ ಬರುತ್ತವೆ. ಆದರೂ, ಮನುಷ್ಯನ ದೇಹ ಎಚ್ಚರವಾಗಿ ಜೀವದಿಂದಿರುತ್ತದೆ. ಆದರೆ, ಯಾವಾಗ ಹೃದಯ ತನ್ನ ಕೆಲಸವನ್ನು ನಿಲ್ಲಿಸುತ್ತದೆಯೋ ಆಗ ಶರೀರ ನಿರ್ಜೀವವಾದ ವಸ್ತುವಾಗುತ್ತದೆ.

ನಮ್ಮ ದೇಹದ ಎಲ್ಲ ಭಾಗಗಳು ವಿಶ್ರಾಂತಿಯನ್ನು ಬಯಸುತ್ತವೆ. ಆದರೆ, ಹೃದಯ ಮಾತ್ರ ಎಂದಾದರೂ ಒಂದು ನಿಮಿಷ ವಿಶ್ರಾಂತಿಯನ್ನು ಕೇಳಿದೆಯೇ? ಅದು ವಿಶ್ರಾಂತಿಯನ್ನು ಕೇಳಿದೆ ಎಂದಾದರೆ ಅರ್ಥ, ಅದುವೇ ಮನುಷ್ಯನ ಅಂತಿಮ ಕ್ಷಣ.

ಹೃದಯ ಅದೆಷ್ಟೋ ವಿಜ್ಞಾನಿಗಳಿಗೆ, ಸಂಶೋಧಕರಿಗೆ ಕೌತುಕದ ತಾಣ. ಕವಿಗಳಿಗೆ, ಲೇಖಕರಿಗೆ ಭಾವನೆಗಳನ್ನು ಕೂಡಿಡುವ ತಾಣ. ಪ್ರೀತಿಸುವ ಪ್ರಣಯ ಪಕ್ಷಿಗಳಿಗೆ ಸಂಬಂಧವನ್ನು ಬೆಸೆಯುವ ತಾಣ. ಹೀಗಾಗಿಯೇ ಅಲ್ಲವೇ ಸಾವಿರಾರು ಸಂಶೋಧನೆಗಳು, ಲಕ್ಷಾಂತರ ಹಾಡುಗಳು, ಬರಹಗಳು ಹೃದಯದ ಕುರಿತು ಮೂಡಿರುವುದು.

> ನಮ್ಮ ದೇಹದ ಎಲ್ಲ ಭಾಗಗಳು ವಿಶ್ರಾಂತಿಯನ್ನು ಬಯಸುತ್ತವೆ. ಆದರೆ, ಹೃದಯ ಮಾತ್ರ ಎಂದಾದರೂ ಒಂದು ನಿಮಿಷ ವಿಶ್ರಾಂತಿಯನ್ನು ಕೇಳಿದೆಯೇ? ಅದು ವಿಶ್ರಾಂತಿಯನ್ನು ಕೇಳಿದೆ ಎಂದಾದರೆ ಅರ್ಥ, ಅದುವೇ ಮನುಷ್ಯನ ಅಂತಿಮ ಕ್ಷಣ. ಹೃದಯ ಅದೆಷ್ಟೋ ವಿಜ್ಞಾನಿಗಳಿಗೆ, ಸಂಶೋಧಕರಿಗೆ ಕೌತುಕದ ತಾಣ. ಕವಿಗಳಿಗೆ, ಲೇಖಕರಿಗೆ ಭಾವನೆಗಳನ್ನು ಕೂಡಿಡುವ ತಾಣ. ಪ್ರೀತಿಸುವ ಪ್ರಣಯ ಪಕ್ಷಿಗಳಿಗೆ ಸಂಬಂಧವನ್ನು ಬೆಸೆಯುವ ತಾಣ. ಹೀಗಾಗಿಯೇ ಅಲ್ಲವೇ ಸಾವಿರಾರು ಸಂಶೋಧನೆಗಳು, ಲಕ್ಷಾಂತರ ಹಾಡುಗಳು, ಬರಹಗಳು ಹೃದಯದ ಕುರಿತು ಮೂಡಿರುವುದು.

ಮುಷ್ಟಿ ಅಗಲ ಇರುವ ಹೃದಯ ಎಲ್ಲರಿಗೂ ಇಷ್ಟ, ಕೇವಲ ಇಷ್ಟವಾದರೆ ಸಾಕೆ? ಅದರ ಆರೋಗ್ಯದ ಕಾಳಜಿ, ಬೇಕು–ಬೇಡಗಳನ್ನು ನಾವು ಪೂರೈಸಬೇಕಲ್ಲವೆ? ಹೀಗೆ ಮಾಡಿದರೆ ಮಾತ್ರ ಅಲ್ಲವೇ, ಅದು ಸಹ ನಮ್ಮ ಸಂಪೂರ್ಣ ಆರೋಗ್ಯ, ಬೇಕು–ಬೇಡಗಳು ಸಿದ್ಧಿಸುವ ಹಾಗೆ ಮಾಡುವುದು.

ಹೃದಯದಲ್ಲಿ ಉತ್ತಮ ಆಲೋಚನೆಗಳು ಮೂಡುವ ಹಾಗೆ ಮಾಡೋಣ, ಹೃದಯಕ್ಕೆ ಆಗತ್ಯವಾಗಿರುವುದನ್ನು ಮಾತ್ರ ಮಾಡೋಣ. 24 X 7 ದುಡಿಯುವ ಹೃದಯದ ಆರೋಗ್ಯದ ಕಡೆ ನಾವು ಗಮನ ಹರಿಸಬೇಕಲ್ಲವೆ? ಪುಟ್ಟ ಹೃದಯ ನಮಗೆ ಭಾರವಲ್ಲ. ಹಾಗೆಯೇ ನಾವು ಕೂಡ ಅದಕ್ಕೆ ಭಾರವಾಗದಿರೋಣ. ನೆನಪಿರಲಿ, ಪ್ರಪಂಚದಲ್ಲಿ ಪ್ರತಿ ವರ್ಷವೊಂದಕ್ಕೆ ಸುಮಾರು 2 ಕೋಟಿ ಜನರು ಹೃದಯ ಸಂಬಂಧಿತ ಖಾಯಿಲೆಗಳಿಂದಾಗಿ ಮರಣ ಹೊಂದುತ್ತಿದ್ದಾರೆ.

ಪ್ರೀತಿ, ಪ್ರೇಮ, ಮಮತೆ, ಕರುಣೆ, ಸುಖ, ದುಃಖ, ಬೇಕು, ಬೇಡ ಈ ಎಲ್ಲಾ ಭಾರಗಳನ್ನು ಹೊತ್ತುಕೊಂಡು ಹಗಲಿರುಳು ದುಡಿಯುವ ಹೃದಯದ ಬಗ್ಗೆ ನಮ್ಮುಗಳಿಗೆ ಕಾಳಜಿ, ಕರುಣೆ ಇರಲಿ. ಹೀಗಾದಲ್ಲಿ ಮಾತ್ರವೇ, ಹೃದಯದಿಂದ ನಮ್ಮ ಜೀವನ ಉದಯವಾಗಿ ಪ್ರತಿ ದಿನದ ಸೂರ್ಯೋದಯ ನೋಡಲು ಸಾಧ್ಯ. ನಮ್ಮ ಹೃದಯವೆಂಬ ಪ್ರೀತಿಯ ಗೂಡಿನಲ್ಲಿ ಸುಖ, ಸಂತೋಷ, ನೆಮ್ಮದಿ, ಆರೋಗ್ಯ ನೆಲೆಸಲಿ. ಈ ಮೂಲಕ ನೀವು, ನಿಮ್ಮನ್ನು ನಂಬಿರುವ ಕುಟುಂಬ ಹಾಗೂ ದೇಶ ಸೌಖ್ಯದಿಂದ ಇರುವಂತಾಗಲಿ. ಏನಂತೀರಿ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ನಾನು ಪಾಕಿಸ್ತಾನ್ ಸೇನೆಯ ನಂಬಿಕಸ್ಥ ಏಜೆಂಟ್

26/11ರ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ತಹವ್ವುರ್ ರಾಣಾ ಸ್ಫೋಟಕ ಮಾಹಿತಿ

ನವದೆಹಲಿ, ಜು.7– ತಾನು ಪಾಕ್ ಸೇನೆಯ ನಂಬಿಕಸ್ಥ ಏಜೆಂಟ್ ಮತ್ತು 2008ರ ದಾಳಿಯ ಸಮಯದಲ್ಲಿ ಮುಂಬೈ ನಲ್ಲಿದ್ದೆ ಎಂದು 26/11ರ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ತಹವ್ವುರ್ ರಾಣಾ ಮುಂಬೈ ಕ್ರೈಂ ಬ್ರಾಂಚ್ ತನಿಖೆ ವೇಳೆ ಸ್ಫೋಟಕ ಮಾಹಿತಿ ಬಹಿರಂಗಪಡಿಸಿದ್ದಾನೆ.



ತಹವ್ವುರ್ ರಾಣಾ

ಈ ಮಾಹಿತಿಯಿಂದ 170ಕ್ಕೂ ಹೆಚ್ಚು ಜನರನ್ನು ಕೊಂದ ಮತ್ತು 300ಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ ಮಾರಣಾಂತಿಕ 2008ರ ಮುಂಬೈ ದಾಳಿಯ ಯೋಜನೆ ಮತ್ತು ಅದರಲ್ಲಿ ಪಾಕಿಸ್ತಾನದ ಕೈವಾಡವನ್ನು ಮತ್ತಷ್ಟು ದೃಢಪಡಿಸುತ್ತದೆ. ವರ್ಷಗಳ ಕಾನೂನು ಹೋರಾಟ ಮತ್ತು ಹಸ್ತಾಂತರ ಪ್ರಕ್ರಿಯೆ ನಂತರ ಭಾರತಕ್ಕೆ ಕರೆತಂದ ರಾಣಾನ ಮೊದಲ ಸುತ್ತಿನ ವಿಚಾರಣೆಯ ಸಮಯದಲ್ಲಿ ಆತ ಈ ಮಾಹಿತಿಯನ್ನು ಬಾಯ್ಬಿಟ್ಟಿದ್ದಾನೆ.

26/11 ಮುಂಬೈ ದಾಳಿಗೆ ಸಂಬಂಧಿಸಿದಂತೆ ಸಾಕಷ್ಟು ಸಾಕ್ಷ್ಯಾಧಾರಗಳೊಂದಿಗೆ ರಾಣಾನನ್ನು ವಿಚಾರಣೆ ನಡೆಸಲಾಗಿದೆ ಎಂದು ಎನ್‌ಐಎ ಈ ಹಿಂದೆ ನ್ಯಾಯಾಲಯಕ್ಕೆ ತಿಳಿಸಿತ್ತು. ವಿಚಾರಣೆ ಸಮಯದಲ್ಲಿ ಆತನ ತಪ್ಪಿಸಿಕೊಳ್ಳುವ ವರ್ತನೆ ಮತ್ತು ಸಹಕಾರದ ಕೊರತೆಯನ್ನು ಉಲ್ಲೇಖಿಸಿ ಮತ್ತಷ್ಟು ಕಸ್ಟಡಿಗಾಗಿ ಸಂಸ್ಥೆ ವಾದಿಸಿತು.

ಹಿರಿಯ ವಕೀಲ ದಯನ್ ಕೃಷ್ಣನ್ ಮತ್ತು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನರೇಂದರ್ ಮಾನ್ ಎನ್‌ಐಎಯನ್ನು ಪ್ರತಿನಿಧಿಸಿದರೆ, ವಕೀಲ ಪಿಯೂಷ್ ಸಚ್‌ದೇವ ರಾಣಾ ಪರ ವಾದ ಮಂಡಿಸಿದರು.

ಏಪ್ರಿಲ್ 4 ರಂದು ಹಸ್ತಾಂತರದ ವಿರುದ್ಧ ರಾಣಾ ಸಲ್ಲಿಸಿದ ಅಂತಿಮ ಮೇಲ್ಮನವಿಯನ್ನು ಅಮೆರಿಕಾ ಸುಪ್ರೀಂಕೋರ್ಟ್ ವಜಾಗೊಳಿಸಿದ ಕೆಲವೇ ದಿನಗಳಲ್ಲಿ ಏಪ್ರಿಲ್ 10ರಂದು ಆತನನ್ನು ಯುನೈಟೆಡ್ ಸ್ಟೇಟ್ಸ್‌ನಿಂದ ಭಾರತಕ್ಕೆ ಹಸ್ತಾಂತರಿಸಲಾಯಿತು.

26/11 ಮುಂಬೈ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ರಾಣಾನನ್ನು ಈಗ ವಿಚಾರಣೆ ನಡೆಸಲಾಗುತ್ತಿದೆ. ಇದು ಭಾರತದ ನೆಲದಲ್ಲಿ ನಡೆದ ಅತ್ಯಂತ ಭೀಕರ ಭಯೋತ್ಪಾದಕ ದಾಳಿಗಳಲ್ಲಿ ಒಂದಾಗಿದ್ದು, 166 ಮಂದಿ ಬಲಿ ತೆಗೆದುಕೊಂಡಿತು. ತಾಜ್ ಹೋಟೆಲ್ ಸೇರಿದಂತೆ ಮುಂಬೈನಾದ್ಯಂತ ಹಲವು ಸ್ಥಳಗಳನ್ನು ಗುರಿಯಾಗಿಟ್ಟುಕೊಂಡು ನಡೆದ ದಾಳಿಯಲ್ಲಿ ಅಪಾರ ಪ್ರಮಾಣದ ಹಾನಿಯಾಗಿತ್ತು. ಅಲ್ಲದೇ ಸಾಕಷ್ಟು ಭೀತಿ ಉಂಟು ಮಾಡಿತ್ತು.

ಹಿಂದುಳಿದ ವರ್ಗಗಳ ಆಯೋಗದ ಮೂಲಕ ಹಿರಿಯ ವಕೀಲ ಶಿವಣ್ಣೇಗೌಡರು ಎಲ್ಲರಿಗೂ ನ್ಯಾಯ ಒದಗಿಸುವ ವಿಶ್ವಾಸ

'ಲಾ-ಗೈಡ್' ಕನ್ನಡ ಕಾನೂನು ಪತ್ರಿಕೆ ಸಂಪಾದಕ ಹೆಚ್.ಎನ್.ವೆಂಕಟೇಶ್

ಮೈಸೂರು, ಜು.7(ಎಸ್‌ಪಿಎನ್)– ವಕೀಲಿ ವೃತ್ತಿ ಜೊತೆಗೆ ಸಾಮಾಜಿಕ ಕ್ಷೇತ್ರ ದಲ್ಲಿ ಅಪಾರ ಅನುಭವ ಹೊಂದಿರುವವ ರನ್ನು, ಹಿಂದುಳಿದ ವರ್ಗಗಳ ಆಯೋಗ ದಲ್ಲಿ ಕೆಲಸ ಮಾಡಲು ರಾಜ್ಯ ಸರ್ಕಾರ ಗುರುತಿಸಬೇಕು. ಆ ಸ್ಥಾನಕ್ಕೆ ಹಿರಿಯ ವಕೀಲ ಶಿವಣ್ಣೇಗೌಡರನ್ನು ಸರ್ಕಾರ ಗುರುತಿಸಿರುವುದು ಶ್ಲಾಘನೀಯ ಎಂದು 'ಲಾ-ಗೈಡ್' ಕನ್ನಡ ಕಾನೂನು ಪತ್ರಿಕೆಯ ಸಂಪಾದಕ, ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿ ಯಲ್ ಜಾವಾ ರೋಟರಿ ಸಭಾಂಗಣ ದಲ್ಲಿ ಹಿರಿಯ ವಕೀಲ ಶಿವಣ್ಣೇಗೌಡ ಸ್ನೇಹ ಬಳಗದ ವತಿಯಿಂದ ಆಯೋ ಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಶಿವಣ್ಣೇಗೌಡರು ಸರಳ, ಸ್ನೇಹಜೀವಿ, ಹಲವು ವರ್ಷ ಗಳಿಂದ ಸಿವಿಲ್ ಕ್ಷೇತ್ರದಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯರೊಂದಿಗೆ ಗುರುತಿಸಿಕೊಂಡು ರಾಜಕೀಯ ಕ್ಷೇತ್ರ ದಲ್ಲೂ ಸೇವೆ ಸಲ್ಲಿಸುತ್ತಿರುವುದಕ್ಕೆ ಈ ಗೌರವ ಸಿಕ್ಕಿದೆ. ಹಾಗಾಗಿ ಓಬಿಸಿ ಆಯೋಗದಲ್ಲಿ ಸದಸ್ಯರಾಗಿ ನೇಮಕಗೊಂಡಿರುವ ಶಿವಣ್ಣೇಗೌಡರು ಎಲ್ಲಾ ವರ್ಗದವರಿಗೂ ನ್ಯಾಯ ದೊರಕಿಸಿಕೊಡಲಿ ಎಂದು ಆಶಿಸಿದರು.

ಕರ್ನಾಟಕ ರಾಜ್ಯ ವಕೀಲರ ಪರಿ ಷತ್ತಿನ ಮಾಜಿ ಅಧ್ಯಕ್ಷ ಸಿ.ಎಂ.ಜಗದೀಶ್ ಮಾತನಾಡಿ, ಹಿರಿಯ ವಕೀಲ ಶಿವಣ್ಣೇ ಗೌಡರಿಗೆ ಬಯಸಿದ್ದಂತಹ ಸ್ಥಾನ ದೊರಕಿದ್ದು, ಮುಂದಿನ ದಿನದಲ್ಲಿ ಮೌಲ್ಯಯುತ ರಾಜಕಾರಣದಲ್ಲಿ ಹಿಂದುಳಿದ ವರ್ಗ ದವರಿಗೆ ಆಸರೆಯಾಗಬೇಕು. ವಕೀಲರ ಸಂಘದ ಸದಸ್ಯರಿಗೆ ರಾಜಕೀಯದಲ್ಲಿ ಬೆಳೆಯುವುದಕ್ಕೆ ಅವಕಾಶ ನೀಡಿರುವುದು ವಿಶೇಷವಾಗಿದ್ದು ಇದಕ್ಕೆ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಕಾರಣ ಎಂದು ಹೇಳಿದರು.

ಶಿವಣ್ಣೇಗೌಡರಿಗೆ ದೊರಕಿರುವ ಅವ ಕಾಶ ನಮಗೆ ದೊರಕಿದಂತೆ. ಶಿವಣ್ಣೇ ಗೌಡ ಅವರು ಇದುವರೆಗೂ ನನಗೆ ಅಧಿ ಕಾರ ಸಿಕ್ಕಿಲ್ಲ ಎಂದು ಯಾರ ಬಳಿಯೂ ಹೇಳದೆ ಸರಳವಾಗಿ ಇದ್ದಂತಹ ವ್ಯಕ್ತಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಣ್ಣೇಗೌಡ ಅವರ ಒಡನಾಟ ತುಂಬಾ ವಿಶೇಷವಾಗಿದೆ ಎಂದು ಹೇಳಿದರು

ವೇದಿಕೆಯಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಶ್ರೀಧರ್, ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ್, ಹಿರಿಯ ವಕೀಲ ಎಂ.ಹರೀಶ್‌ಕುಮಾರ್ ಹೆಗ್ಡೆ, ಹಿರಿಯ ಪತ್ರಕರ್ತ ಮರಂಕಲ್, ವಕೀಲರಾದ ಅನಿಲ್‌ಕುಮಾರ್ ಹೆಗಡೆ, ಮಹದೇವಸ್ವಾಮಿ, ಎಸ್.ಉಮೇಶ್, ಸುರೇಶ್ ಪಾಳ್ಯ, ಎನ್.ನಂದೀಶ್, ಶಿವಣ್ಣ ಹಾಡ್ಯ, ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ನೇಮಕಗೊಂಡಿರುವ ಹಿರಿಯ ವಕೀಲ ಶಿವಣ್ಣೇಗೌಡ ಸ್ನೇಹ ಬಳಗದಿಂದ ಶಿವಣ್ಣೇಗೌಡ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ 'ಲಾ-ಗೈಡ್' ಕನ್ನಡ ಕಾನೂನು ಪತ್ರಿಕೆ ಸಂಪಾದಕ, ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮಾಜಿ ಅಧ್ಯಕ್ಷ ಸಿ.ಎಂ.ಜಗದೀಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಶ್ರೀಧರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಹಿರಿಯ ವಕೀಲ ಎಂ.ಹರೀಶ್‌ಕುಮಾರ್ ಹೆಗ್ಡೆ ಇನ್ನಿತರರಿದ್ದಾರೆ.

> ಹಲವು ವರ್ಷಗಳ ಹಿಂದೆಯೇ ನನಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಟಿಕೆಟ್ ಘೋಷಣೆಯಾಗಬೇಕಿತ್ತು. ಕಾರಣಾಂತರದಿಂದ ಅದು ಸಾಧ್ಯವಾಗಿಲ್ಲ. ಆದರೂ ನಾನು ಸಿದ್ದರಾಮಯ್ಯರೊಂದಿಗೆ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಅದರ ಫಲವಾಗಿ ಇಂದು ನಾನು ಈ ಹುದ್ದೆಯ ಆಕಾಂಕ್ಷಿ ಅಲ್ಲದಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದುಳಿದ ವರ್ಗಗಳ ಆಯೋಗದ ಸದಸ್ಯನ್ನಾಗಿ ನಾಮ ನಿರ್ದೇಶನ ಮಾಡಿರುವುದು ಸಂತೋಷ ತಂದಿದೆ.
>
> –ಶಿವಣ್ಣೇಗೌಡ, ನೂತನ ಸದಸ್ಯ ರಾಜ್ಯ ಒಬಿಸಿ ಆಯೋಗ

ಅಕ್ರಮ ಬಾಂಗ್ಲಾ ವಲಸಿಗರ ಗಡಿಪಾರು ನಿರಂತರ ಪ್ರಕ್ರಿಯೆ

ಬೆಂಗಳೂರು, ಜು.7(ಕೆಎಂಶಿ)–ರಾಜ್ಯದಲ್ಲಿನ ಅಕ್ರಮ ಬಾಂಗ್ಲಾ ವಲಸಿಗರ ಪತ್ತೆ ಹಾಗೂ ಗಡಿಪಾರು ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.



ಡಾ.ಪರಮೇಶ್ವರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಇದುವರೆಗೆ 200ಕ್ಕೂ ಹೆಚ್ಚು ಅಕ್ರಮ ಬಾಂಗ್ಲಾ ವಲಸಿಗರನ್ನು ಗಡಿಪಾರು ಮಾಡಲಾಗಿದೆ. ಎಫ್‌ಆರ್‌ಆರ್‌ಓ ಅಧಿಕಾರಿಗಳು ಅಕ್ರಮ ವಲಸಿಗರನ್ನು ಗುರುತಿಸಿ ನಮಗೆ ಮಾಹಿತಿ ನೀಡುತ್ತಾರೆ. ಹಾಗಾಗಿ ಅಕ್ರಮ ವಲಸಿಗರನ್ನು ಗಡಿಪಾರು ಪ್ರಕ್ರಿಯೆ ನಿರಂತರವಾಗಿ ನಡೆಯುತ್ತದೆ. ಒಂದು ದಿನ ಮಾಡಿ ನಿಲ್ಲಿಸುವುದಲ್ಲ ಎಂದರು.

ಕಟ್ಟಡ ಕಾರ್ಮಿಕರಾಗಿ ಅಕ್ರಮ ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬ ಮಾಹಿತಿ ಪರಿಶೀಲಿಸಿ, ಅಂತಹವರು ಕಂಡುಬಂದರೆ ಕಸ್ಟಡಿಗೆ ತೆಗೆದುಕೊಂಡು ಗಡಿಪಾರು ಮಾಡುತ್ತೇವೆ. ಅಕ್ರಮ ನುಸುಳುಕೋರರ ಬಗ್ಗೆ ಮೃದು ಧೋರಣೆ ಏಕೆ ತೋರಬೇಕು, ಬಾಂಗ್ಲಾ ವಲಸಿಗರನ್ನು ಕರೆಸಿಕೊಂಡು ಚುನಾವಣೆಯಲ್ಲಿ ಮತ ಹಾಕಿಸಿಕೊಳ್ಳುವಂತಹ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿಲ್ಲ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕಳೆದ ವಾರ ನನ್ನನ್ನು ಭೇಟಿಗೆ ಕರೆದಿದ್ದರು. ಆಗ ನಾನು ಊರಲ್ಲಿ ಇರದ ಕಾರಣ ಭೇಟಿ ಆಗಲು ಸಾಧ್ಯವಾಗಿರಲಿಲ್ಲ. ಮತ್ತೆ ಆಹ್ವಾನ ಬಂದರೆ ಭೇಟಿಯಾಗುತ್ತೇನೆ ಎಂದರು.

ರಂಭಾಪುರಿ ಶ್ರೀಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದರಲ್ಲಿ ತಪ್ಪೇನಿದೆ ಎಂದರು. ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿನ ಕೊಲೆ ಯತ್ನ ಪ್ರಕರಣದ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಕರಣದ ಸಂಪೂರ್ಣ ಮಾಹಿತಿ ಇಲ್ಲ. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಿಂದ ಪ್ರೇರೇಪಿತರಾಗಿ ಹತ್ಯೆ ನಡೆಸಿದ್ದಾರೆಂಬ ಬಗ್ಗೆ ತಿಳಿದಿಲ್ಲ. ಸಮಾಜದಲ್ಲಿ ಯುವಕರ ಮೇಲೆ ಇಂತಹ ಕೆಟ್ಟ ಪರಿಣಾಮ ಬೀರುತ್ತಿದೆಯೇ ಎಂಬುದರ ಕುರಿತು ಮನಶಾಸ್ತ್ರಜ್ಞರು ಅಧ್ಯಯನ ನಡೆಸಬೇಕು ಎಂದರು.

ಆಕಾಶವಾಣಿಯಿಂದ ಬಾನು ಮುಷ್ತಾಕ್‌ಗೆ ಸನ್ಮಾನ...



ಮೈಸೂರು ಆಕಾಶವಾಣಿಯಲ್ಲಿ ಸಂದರ್ಶನಕ್ಕೆ ಆಗಮಿಸಿದ್ದ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರನ್ನು ನಿಲಯದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಿಲಯದ ಉಪನಿರ್ದೇಶಕ ಎಸ್.ಎಸ್. ಉಮೇಶ್, ಸಹಾಯಕ ನಿರ್ದೇಶಕರಾದ ಟಿ.ವಿ.ವಿದ್ಯಾಶಂಕರ್ ಮತ್ತು ಇತರೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯಗಳು...



ಮೈಸೂರು ನಗರದ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಯುವ ಮುಖಂಡ ಮಹಾಪ್ರಸಾದ್ ಕಿಟ್ಟಿ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಪಕ್ಷದ ಮುಖಂಡರು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಷಡಕ್ಷರಿ ಮತ್ತಿತರರು ಉಪಸ್ಥಿತರಿದ್ದರು.

ಸಾಹಿತ್ಯ ಪರಿಷತ್‌ಗೆ ನೇಮಕ



ಮೈಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಯಶಸ್ವಿ ಬಿ.ಆರ್ ಅವರನ್ನು ನೇಮಕ ಮಾಡಿ, ಮೈಸೂರು ತಾಲೂಕಿನ ಅಧ್ಯಕ್ಷ ಎ.ಸಿ.ಮಂಜುನಾಥ್ ನೇಮಕಾತಿ ಪತ್ರ ನೀಡಿ ಅಭಿನಂದಿಸಿದರು. ಕಾರ್ಯದರ್ಶಿ ಹರದೂರು ಜವರೇಗೌಡ, ವಿಜಯ್ ಸಾಮ್ರಾಟ್, ಹಿನಕಲ್ ಚೇತನ್ ಉಪಸ್ಥಿತರಿದ್ದರು.

7ನೇ ವೇತನ ಆಯೋಗದನ್ವಯ ಸೌಲಭ್ಯಕ್ಕೆ ಆಗ್ರಹಿಸಿ ಇಂದು ಪಾಲಿಕೆ ನೌಕರರ ಪ್ರತಿಭಟನೆ

ಅಧಿಕಾರಿಗಳು, ಪೌರಕಾರ್ಮಿಕರು, ಗುತ್ತಿಗೆ ನೌಕರರಿಂದ ಸಾಮೂಹಿಕ ರಜೆ; ಬೆಂಗಳೂರು ಫ್ರೀಡಂ ಪಾರ್ಕ್‌ನ ಪ್ರತಿಭಟನೆಯಲ್ಲಿ ಭಾಗಿ

ಮೈಸೂರು,ಜು.7(ಎಂಟಿವೈ)– ರಾಜ್ಯ ಸರ್ಕಾರದ ನೌಕರರಿಗೆ ನೀಡಿರುವಂತೆ 7ನೇ ವೇತನ ಆಯೋಗದ ಸೌಲಭ್ಯವನ್ನು, ಮಹಾನಗರ ಪಾಲಿಕೆಗಳ ನೌಕರರು, ಸಿಬ್ಬಂದಿಗೂ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಾಳೆ(ಜು.8) ಬೆಳಗ್ಗೆ 11ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಮೈಸೂರು ಮಹಾನಗರಪಾಲಿಕೆ ಎಲ್ಲಾ ಅಧಿಕಾರಿಗಳು, ನೌಕರರು, ಪೌರಕಾರ್ಮಿಕರು ಸಾಮೂಹಿಕ ರಜೆ ಹಾಕಿ ಪ್ರತಿಭಟಿಸುತ್ತಿರುವುದಾಗಿ ಮೈಸೂರು ನಗರಪಾಲಿಕೆ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರು ಮಹಾಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಸಿ.ಆರ್.ರಾಚಯ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 7ನೇ ವೇತನ ಆಯೋಗದ ಪರಿಷ್ಕೃತ ವೇತನ ಪಾವತಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು, ಆರ್ಥಿಕ ಇಲಾಖೆ ಬಿಡುಗಡೆಗೊಳಿಸಬೇಕು. ವೇತನಾನುದಾನಕ್ಕೆ ಶೇ.85 ರಿಂದ 95ರಷ್ಟನ್ನು ಮಾತ್ರ ಬಿಡುಗಡೆಗೊಳಿಸಿ, ಉಳಿದಿದ್ದ ಪಾಲಿಕೆ ಕ್ರೋಢೀಕರಿಸಿದ ಸಂಪನ್ಮೂಲದಲ್ಲಿ ಭರಿಸಬೇಕೆಂದು ಪೌರಾಡಳಿತ ಇಲಾಖೆ ನಿರ್ದೇಶನ ಹೊರಡಿಸಿದೆ. ಇದು ಸರಿಯಲ್ಲ. ಒಂದು ವೇಳೆ ನಾಗರಿಕರು ಆಸ್ತಿ ತೆರಿಗೆ ಪಾವತಿಸದಿದ್ದರೆ ವೇತನ ನೀಡಲು ಸಾಧ್ಯವಾಗದು. ಇದು ರದ್ದಾಗಬೇಕು ಎಂದು ಒತ್ತಾಯಿಸಲಾಗುತ್ತಿದೆ ಎಂದರು.

ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವ 7ನೇ ವೇತನ ಆಯೋಗದ ಸೌಲಭ್ಯವನ್ನು ಪಾಲಿಕೆಯ ನೌಕರರು ಹಾಗೂ ಎಲ್ಲಾ ಸಿಬ್ಬಂದಿಗೂ ವಿಸ್ತರಿಸಬೇಕು. ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿ ತಿದ್ದುಪಡಿ ಮಾಡಿ ಕರಡು ಅಧಿಸೂಚನೆ ಹೊರಡಿಸಬೇಕು. ಕೆಜಿಐಡಿ, ಜಿಪಿಎಫ್ ಸೌಲಭ್ಯವನ್ನು ಕರ್ನಾಟಕ ರಾಜ್ಯ ಮಹಾನಗರಪಾಲಿಕೆ ಅಧಿಕಾರಿ, ನೌಕರರಿಗೂ ಜಾರಿಗೊಳಿಸಬೇಕು. ಜ್ಯೋತಿ, ಆರೋಗ್ಯ ಸಂಜೀವಿನಿ ಯೋಜನೆಯ ಸೌಲಭ್ಯ ನಗರಪಾಲಿಕೆ ಸಿಬ್ಬಂದಿಗೂ ಸಿಗುವಂತಾಗಬೇಕು ಎಂದು ಹೇಳಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ನೀಡಲು ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ ಅಧಿಕಾರಿ, ನೌಕರರು ಸಾಮೂಹಿಕ ರಜೆ ಹಾಕಲಾಗಿದ್ದು, ನಾಳೆ ಬೆಳಗ್ಗೆ 8ಕ್ಕೆ ಮಹಾನಗರಪಾಲಿಕೆ ಕಚೇರಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರ ಪಾಲಿಕೆ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಮುಖಂಡರಾದ ಎನ್.ಅರುಣ್ ಕುಮಾರ್, ಜಿ.ಮಂಜುನಾಥ್, ಎಂ.ರಾಜೀವ್, ಎಲ್‌ಐಸಿ ಮುರುಗೇಶ್, ಮೋಹನ್‌ಕುಮಾರ್ ಉಪಸ್ಥಿತರಿದ್ದರು.

ಅಭಿನಂದನೆ...



ಬೆಂಗಳೂರು ದಕ್ಷಿಣ ತಾಲೂಕು ಕೇತೋಹಳ್ಳಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶಾಖಾಮಠ ವತಿಯಿಂದ ಭಕ್ತರ ಭಂಡಾರ ಕುಟೀರದ ಉದ್ಘಾಟನಾ ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಮಣ್ಯ, ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮುಖಂಡರಾದ ಅಭಿಷೇಕ್, ಶಿವಣ್ಣ ಇನ್ನಿತರರಿದ್ದರು.

ಅರ್ಪಿತಾಗೆ ಪಿಹೆಚ್.ಡಿ ಪದವಿ

ಮೈಸೂರು,ಜು.7–ಡಾ.ಎ.ಸಿ.ಪ್ರಮೀಳಾ ಅವರ ಮಾರ್ಗದರ್ಶನದಲ್ಲಿ ಹೆಚ್.ಆರ್.ಅರ್ಪಿತಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಯಾವ ಪರಿ ರಾಜ್ಯ ದಿವಾಳಿ ಮಾಡಿದ್ದಾರೆನ್ನುವುದಕ್ಕೆ ರಾಯರೆಡ್ಡಿ ಹೇಳಿಕೆ ಸಾಕ್ಷಿ: ಬಿಜೆಪಿ ವ್ಯಂಗ್ಯ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ಯಾವ ಪರಿ ರಾಜ್ಯವನ್ನು ದಿವಾಳಿ ಮಾಡಿದ್ದಾರೆ ಎನ್ನುವುದಕ್ಕೆ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರ ಇತ್ತೀಚಿನ ಹೇಳಿಕೆಯೇ ಸಾಕ್ಷಿ ಎಂದು ಬಿಜೆಪಿ ವ್ಯಂಗ್ಯವಾಡಿದೆ.



ರಾಯರೆಡ್ಡಿ

ಈ ಕುರಿತು ರಾಯರೆಡ್ಡಿ ಅವರ ಹೇಳಿಕೆ ವಿಡಿಯೊ ಹಂಚಿಕೊಂಡು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ, 'ಅಕ್ಕಿ ಬೇಕು ಎಂದರೆ, ರಸ್ತೆ ಇಲ್ಲ. ರಸ್ತೆ ಬೇಕು ಎಂದರೆ, ಅಕ್ಕಿ ಇಲ್ಲವೆಂದು ಹೇಳುತ್ತಾರೆ ಎಂದರೆ ಇದು ದಿವಾಳಿತನಕ್ಕೆ ಸಾಕ್ಷಿ' ಎಂದು ಹೇಳಿದೆ.

ಇದುವೇ ದಿವಾಳಿಯಾಗಿರುವ ಕಾಂಗ್ರೆಸ್ ಸರ್ಕಾರದ ಬೋಗಸ್ ಗ್ಯಾರಂಟಿಯ ಅಸಲಿಯತ್ತು. ಸ್ವಯಂ ಘೋಷಿತ ಭ್ರಷ್ಟ ಆರ್ಥಿಕ ತಜ್ಞ ಸಿದ್ದರಾಮಯ್ಯ ಅವರು ಯಾವ ಪರಿ ರಾಜ್ಯವನ್ನು ದಿವಾಳಿ ಮಾಡಿದ್ದಾರೆ ಎನ್ನುವುದಕ್ಕೆ ಇದು ತಾಜಾ ಉದಾಹರಣೆ ಎಂದು ಆರೋಪಿಸಿದೆ. ಸ್ವತಃ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜರಾಯ ರೆಡ್ಡಿಯವರು ಜನರಿಗೆ ಆಯ್ಕೆಗಳನ್ನು ನೀಡುವ ಮೂಲಕ ಸರ್ಕಾರದ ದಿವಾಳಿತನವನ್ನು ಬಟಾ ಬಯಲು ಮಾಡಿದ್ದಾರೆ ಎಂದು ಲೇವಡಿ ಮಾಡಿದೆ. ಕೊಪ್ಪಳ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಸವರಾಜ ರಾಯರೆಡ್ಡಿ ಅವರು ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡಿದ್ದರು.

ಕಲಾ ತಂಡಗಳಿಂದ ಅರ್ಜಿ ಆಹ್ವಾನ

ಮಂಡ್ಯ, ಜು.7– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸರ್ಕಾರದ ಯೋಜನೆಗಳನ್ನು ಪ್ರಚುರ ಪಡಿಸುವ ಉದ್ದೇಶಕ್ಕಾಗಿ ಬೀದಿ ನಾಟಕ/ ಜಾನಪದ ಸಂಗೀತ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಜಿಲ್ಲಾ ಮಟ್ಟದಲ್ಲಿ ಅಧೀನ ಕಚೇರಿಗಳ ಮೂಲಕ 2025–26ನೇ ಸಾಲಿನಲ್ಲಿ ಬೀದಿನಾಟಕ/ಜಾನಪದ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಪ್ರತಿ ಜಿಲ್ಲೆಯಿಂದ 3 ಬೀದಿ ನಾಟಕ ಹಾಗೂ 3 ಜಾನಪದ ಸಂಗೀತ ಕಲಾ ತಂಡಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.

ಬೀದಿನಾಟಕದಲ್ಲಿ 8 ಮಂದಿ ಕಲಾವಿದರಿದ್ದು, ಅದರಲ್ಲಿ ಕಡ್ಡಾಯವಾಗಿ ಇಬ್ಬರು ಮಹಿಳೆಯರು ಹಾಗೂ ಒಬ್ಬರು ಪ.ಜಾತಿ/ ವರ್ಗಕ್ಕೆ ಸೇರಿದ ಕಲಾವಿದರನ್ನೊಳಗೊಂಡಿರಬೇಕು. ಜಾನಪದ ಸಂಗೀತ ಕಲಾ ತಂಡದಲ್ಲಿ 3 ಜನ ಕಲಾವಿದರಿದ್ದು, ಅದರಲ್ಲಿ ಕಡ್ಡಾಯವಾಗಿ ಒಬ್ಬರು ಮಹಿಳೆಯರು ಹಾಗೂ ಒಬ್ಬರು ಪ.ಜಾತಿ/ ವರ್ಗಕ್ಕೆ ಸೇರಿದ ಕಲಾವಿದರಿರಬೇಕು. ಕಲಾ ತಂಡಗಳ ಆಯ್ಕೆ ಮಾಡಲು ಜಿಲ್ಲಾ ಮಟ್ಟದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೃಷಿ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿರುತ್ತದೆ. ಆ.12 ರಂದು ಬೆಳಗ್ಗೆ 11 ಗಂಟೆಗೆ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಜಿಲ್ಲೆಯ ಆಸಕ್ತರು ಅರ್ಜಿ ನಮೂನೆಯನ್ನು ಮಂಡ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು ಭರ್ತಿ ಮಾಡಿ ಆ.5 ರೊಳಗಾಗಿ ಸಲ್ಲಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಬಸವಮಾರ್ಗ ವಸತಿನಿಲಯದಲ್ಲಿ ಪ್ರತಿಭಾ ಕಾರಂಜಿ



ಮೈಸೂರಿನ ಸರಸ್ವತಿಪುರಂನ ಬಸವಮಾರ್ಗ ವಸತಿನಿಲಯದಲ್ಲಿ ಆಯೋಜಿಸಿದ್ದ ಪ್ರತಿಭಾ ಕಾರಂಜಿಯಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಮೈಸೂರು, ಜು.7(ಬಿಎಲ್‌ಯು)– ಮೈಸೂರಿನ ಸರಸ್ವತಿಪುರಂನ ಬಸವ ಮಾರ್ಗ ವಸತಿ ನಿಲಯದಲ್ಲಿ ಪ್ರತಿಭಾ ಕಾರಂಜಿ ಮತ್ತು ಪಾಲಕರ ಸಭೆ ಆಯೋಜಿಸಲಾಗಿತ್ತು. ಪ್ರತಿಭಾ ಕಾರಂಜಿ ವೇಳೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಮಕ್ಕಳು ರಂಗೋಲಿ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಚರ್ಚಾ ಸ್ಪರ್ಧೆ, ಜ್ಞಾಪಕ ಶಕ್ತಿ ಹೆಚ್ಚಿಸುವ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ರಂಗೋಲಿ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಪರಿಸರ, ವಿಜ್ಞಾನ, ದೇವರು ಸೇರಿದಂತೆ ನಾನಾ ವಿಚಾರ ವಸ್ತುಗಳನ್ನಿಟ್ಟುಕೊಂಡು ಅತ್ಯಾಕರ್ಷಕ ರಂಗೋಲಿ ಬಿಡಿಸಿದರು.

ತರುವಾಯ ನಡೆದ ಜ್ಞಾಪಕ ಶಕ್ತಿ ಸ್ಪರ್ಧೆಯಲ್ಲಿ ಪ್ರಶ್ನೆಗಳಿಗೆ ಕ್ಷಣ ಮಾತ್ರದಲ್ಲಿ ಉತ್ತರ ನೀಡಿ ಸೈ ಎನಿಸಿಕೊಂಡರು. ಚರ್ಚಾ ಸ್ಪರ್ಧೆಯಲ್ಲಿ ಭಾಷಾ ಪ್ರಾವೀಣ್ಯತೆ ಪ್ರದರ್ಶಿಸಿದರು. ತಮ್ಮ ಮಕ್ಕಳ ಸೃಜನಾತ್ಮಕ ಕಲೆ ನೋಡಿ ಪೋಷಕರು ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಬಸವ ಮಾರ್ಗ ಫೌಂಡೇಷನ್ ಅಧ್ಯಕ್ಷ ಎಸ್.ಬಸವರಾಜು, ಇಂದಿನ ಮಕ್ಕಳು ನಾಳೆ ಉತ್ತಮ ಪ್ರಜೆಗಳಾಗಿ, ದೊಡ್ಡ ಹುದ್ದೆಗಳನ್ನು ಅಲಂಕರಿಸುತ್ತಾರೆ ಎಂಬ ವಿಶ್ವಾಸ ವಿದೆ. ಇಂದು ಬಡವರಾಗಿರುವ ಮಕ್ಕಳು ನಾಳೆ ಶ್ರೀಮಂತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಉತ್ತೇಜಿಸಲು ಪಠ್ಯದ ಜೊತೆಗೆ ಕೌಶಲ ಹಾಗೂ ಕಲಿಕೆಗೆ ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.

ಮಕ್ಕಳ ಬೆಳವಣಿಗೆಗೆ ಪೋಷಕರ ಪಾತ್ರ ಬಹುಮುಖ್ಯವಾಗಿದೆ. ಪೋಷಕರು ಮಕ್ಕಳಿಗೆ ಬೆಂಬಲವಾಗಿ ನಿಂತು ಉತ್ತೇಜನ ನೀಡಿದರೆ ಭವಿಷ್ಯದಲ್ಲಿ ದೊಡ್ಡ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕಿ ಡಾ.ಶ್ವೇತಾ, ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಪ್ರತಿಭೆ ಅಡಕವಾಗಿರುತ್ತದೆ. ಆದರೆ ಅದನ್ನು ಗುರುತಿಸಿ, ಪ್ರೋತ್ಸಾಹಿಸಬೇಕು. ಇದರಲ್ಲಿ ಶಿಕ್ಷಕರ ಪಾತ್ರ ಎಷ್ಟಿದೆಯೊ ಪೋಷಕರ ಪಾತ್ರ ಕೂಡ ಅಷ್ಟೆ ಇರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸರ್ಕಾರಿ ಶಾಲೆಯ ಮಕ್ಕಳು ಪಠ್ಯ ಹಾಗೂ ಪಠೇತರ ಚಟುವಟಿಕೆಯಲ್ಲಿ ಹಿಂದುಳಿದಿರುತ್ತಾರೆ ಎಂಬ ಮಾತಿದೆ. ಆದರೆ ಸರ್ಕಾರಿ ಶಾಲೆಯ ಮಕ್ಕಳಲ್ಲಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಮುಂದಿರುತ್ತಾರೆ ಎಂಬುದಕ್ಕೆ ಕುಕ್ಕರಹಳ್ಳಿ ಸರ್ಕಾರಿ ಶಾಲೆಯ ಮಕ್ಕಳೆ ಸ್ಪಷ್ಟ ನಿದರ್ಶನ ಎಂದರು.

ಕುಕ್ಕರಹಳ್ಳಿ ಶಾಲೆಯ ಮುಖ್ಯ ಶಿಕ್ಷಕ ಚಂದ್ರು, ಅಕ್ಷರ ಫೌಂಡೇಷನ್ ಸಂಸ್ಥಾಪಕ ಸುನೀಲ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಹಾರ್ಟ್ ಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜು. 7– ಹಾರ್ಟ್ ಸಂಸ್ಥೆ ಮೈಸೂರು ಶ್ರೀನಿವಾಸನ್, ಸರ್ವಿಸಸ್ ಟ್ರಸ್ಟ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಶಾಲಾ ಶಿಕ್ಷಣ ಇಲಾಖೆ ತಾಲೂಕು ವೈದ್ಯಾಧಿಕಾರಿಗಳು ನಂಜನಗೂಡು ಸಿಂಧುವಳ್ಳಿ ಗ್ರಾಮ ಪಂಚಾಯಿತಿ, ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್, ಉಪ ಆರೋಗ್ಯ ಕೇಂದ್ರ ಸಿಂಧುವಳ್ಳಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಕೂಡ್ಲಪುರ ನಾರಾಯಣ ಹೆಲ್ತ್ ಮೈಸೂರು ಎ ಎಸ್ ಜಿ ಕಣ್ಣಿನ ಆಸ್ಪತ್ರೆ, ಮೈಸೂರು ಸಹಯೋಗದೊಂದಿಗೆ ಸಿಂಧುವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಹೊಣಕಾರನಾಯಕ, ಶ್ರೀನಿವಾಸ ಸರ್ವಿಸಸ್ ಟ್ರಸ್ಟ್‌ನ ಸಂಯೋಜಕರಾದ ಮಹದೇವಸ್ವಾಮಿ ಹಾಗೂ ವೇದಿಕೆ ಗಣ್ಯರು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು.

ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ ಸಂಯೋಜಕರಾದ ಮಹದೇವಸ್ವಾಮಿ ಮಾತನಾಡಿ, ರೋಗಿಯು ಆಸ್ಪತ್ರೆಗೆ ಹೋಗಿ ವೈದ್ಯರನ್ನು ಸಂಪರ್ಕಿಸುವುದು ಕಷ್ಟ, ಜೊತೆಗೆ ಸಮಯ, ಅಧಿಕ ಖರ್ಚಾಗುವ ಸಾಧ್ಯತೆಯೂ ಇರುತ್ತದೆ. ಇಂತಹ ಆರೋಗ್ಯ ಶಿಬಿರಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಅನುಕೂಲ ಪಡೆದುಕೊಳ್ಳಬಹುದು. ಈ ಉಚಿತ ಆರೋಗ್ಯ ಶಿಬಿರದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಇದ್ದು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಶಿಬಿರದಲ್ಲಿ ನೂರಾರು ರೋಗಿಗಳು ತಪಾಸಣೆಗೆ ಒಳಗಾದರು. ರಕ್ತದೊತ್ತಡ, ಮಧುಮೇಹ, ಇಸಿಜಿ, ಹೃದಯ ಸಂಬಂಧಿ ಇನ್ನಿತರೆ ಸಮಸ್ಯೆಗಳ ಜೊತೆಗೆ 70 ಜನ ಕಣ್ಣಿನ ಪರೀಕ್ಷೆ ಮಾಡಿಸಿಕೊಂಡರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲರಿಗೂ ಉಚಿತ ಔಷಧಿಯನ್ನು ಸಹ ನೀಡಲಾಯಿತು

ನಾರಾಯಣ ಹೆಲ್ತ್ ನಾ ಸುಪ್ರೀತ್ ಮತ್ತು ತಂಡದವರು, ಎಎಸ್‌ಜಿ ಕಣ್ಣಿನ ಆಸ್ಪತ್ರೆಯ ಮಹೇಶ್ ಮತ್ತು ತಂಡದವರು, ಹಾರ್ಟ್ ಸಂಸ್ಥೆಯ ಸಂಯೋಜಕ ಶಿವಲಿಂಗ, ಶ್ರೀನಿವಾಸನ್ ಸರ್ವಿಸ್ ಟ್ರಸ್ಟ್ ಗ್ರಾಮಾಭಿವೃದ್ಧಿ ಅಧಿಕಾರಿ ಮಾಲತಿ, ಮಹೇಶ್, ಶಾಲಾ ಶಿಕ್ಷಕರು ಹಾಜರಿದ್ದರು.



ಸಮಾಜಕ್ಕೆ ಕೊಡುಗೆ ನೀಡಿದರೆ ಜನ ನೆನೆಸಿಕೊಳ್ಳುತ್ತಾರೆ

ಪತ್ರಕರ್ತರಿಗೆ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ಕಿವಿಮಾತು



ಪತ್ರಕರ್ತರಾದ ಮತ್ತೀಕೆರೆ ಜಯರಾಂ ಹಾಗೂ ಬಸವರಾಜ ಹೆಗ್ಗಡೆ ಅವರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜು.7– ಅವಿರತ ಕಷ್ಟಗಳನ್ನು ಅನುಭವಿಸಿ ಸಮಾಜಕ್ಕೆ ಕೊಡುಗೆ ನೀಡಿದಾಗ ಮಾತ್ರ ಜನರು ಪತ್ರಕರ್ತರನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಎಂದು ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ಸೋಮವಾರ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಪತ್ರಿಕಾ ಮಿತ್ರರು ಹಾಗೂ ಹಿತೈಷಿಗಳ ಬಳಗದಿಂದ ಹಿರಿಯ ಪತ್ರಕರ್ತ ಕೆ.ಕೆ.ಶೆಟ್ಟಿ ಕುತ್ತಿಕಾರ್ ಪ್ರಶಸ್ತಿ ಪುರಸ್ಕೃತ ಮತ್ತೀಕೆರೆ ಜಯರಾಂ ಹಾಗೂ ಹೆಚ್.ಕೆ. ವೀರಣ್ಣಗೌಡ ಪ್ರಶಸ್ತಿ ಪುರಸ್ಕೃತ ಬಸವರಾಜ ಹೆಗ್ಗಡೆ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪತ್ರಕರ್ತರು ಜನಸಾಮಾನ್ಯರ ನಡುವೆ ಇದ್ದು ಸಮಸ್ಯೆ ಅರಿತವರಾಗಿರುತ್ತಾರೆ. ಕಷ್ಟದಲ್ಲಿರುವ ಪತ್ರಕರ್ತರಿಗೆ ಬೇಕಾದ ಸವಲತ್ತುಗಳನ್ನು ಒದಗಿಸುವಂತಹ ಹಿರಿಯ ಪತ್ರಕರ್ತರ ಕಾರ್ಯ ವೈಖರಿ ಪತ್ರಕರ್ತರಿಗೆ ಶಕ್ತಿ ತುಂಬುತ್ತದೆ ಎಂದು ಅಭಿಪ್ರಾಯಪಟ್ಟರು.

ಮಾಧ್ಯಮ ಸ್ನೇಹಿತರು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಸಮಾಜದ ಒಳಿತಿಗೆ ಕೊಡುಗೆ ನೀಡಬೇಕು. ಮತ್ತೀಕೆರೆ ಜಯರಾಂ ಅವರು ಉತ್ತಮ ಸಂಘಟಕರಾಗಿ ಪತ್ರಕರ್ತರ ಕ್ಷೇಮದ ಕಾಳಜಿ ವಹಿಸುವ ಕೆಲಸ ಮುಂದುವರೆಸಲಿ. ಬಸವರಾಜ ಹೆಗ್ಗಡೆಯವರು 60 ವರ್ಷಗಳ ಸಾರ್ಥಕ ಜೀವನ ನಡೆಸುತ್ತಿದ್ದು, ಶತಾಯುಷಿಗಳಾಗಿ ಮುಂದಿನ ಪೀಳಿಗೆಗೆ ಮಾದರಿಯಾಗಲಿ ಎಂದು ಆಶಯ ನುಡಿಗಳನ್ನಾಡಿದರು.

> ದೃಶ್ಯ ಅಥವಾ ಪತ್ರಿಕೆ ಮಾಧ್ಯಮವನ್ನು ಯಾರೂ ಕಡೆಗಣಿಸಲು ಸಾಧ್ಯವಿಲ್ಲ. ಪ್ರಬಲವಾದ ಮಾಧ್ಯಮದ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕು. ಪತ್ರಿಕೆ ಇಂದಿಗೂ ಪ್ರಬಲ ಮಾಧ್ಯಮವಾಗಿದೆ. ದೃಶ್ಯ ಮಾಧ್ಯಮದ ನಡುವೆ ಪತ್ರಿಕೆ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಪತ್ರಿಕೆಯಲ್ಲಿ ಸುದ್ದಿ ಬಂದೊಡನೆ ಸತ್ಯ ಎಂದು ನಂಬುವವರು ಇಂದಿಗೂ ನಮ್ಮ ನಡುವೆಯಿದ್ದಾರೆ. ಪತ್ರಿಕೆ ಹಲವರ ಜೀವನ ರೂಪಿಸಿದೆ. ಹಲವರ ಜೀವನವನ್ನು ಕಡೆಗಣಿಸಿದೆ.
> –ಪ್ರೊ.ಬಿ.ಜಯಪ್ರಕಾಶ್‌ಗೌಡ, ಕರ್ನಾಟಕ ಸಂಘದ ಅಧ್ಯಕ್ಷ.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ ಮಾತನಾಡಿ, ಪತ್ರಿಕೆಯಿಂದ ಅನುಕೂಲ ಹಾಗೂ ಅನಾನುಕೂಲವೂ ಆಗಿದ್ದು, ಅನಾನುಕೂಲವಾಗದಂತೆ ಸುದ್ದಿಗಳ ಮೂಲ ಸಂಗ್ರಹಿಸಿ ಸತ್ಯಾಸತ್ಯೆಯ ಮೇರೆಗೆ ಸುದ್ದಿ ಮಾಡಬೇಕು. ಬಸವರಾಜ ಹೆಗ್ಗಡೆಯೊಂದಿಗೆ 40 ವರ್ಷಗಳ ಒಡನಾಟವಿದ್ದು, ಜಿಲ್ಲೆಯ ಹಲವು ಸಂಘ ಟನೆಗಳಲ್ಲಿ ತೊಡಗಿಸಿಕೊಂಡ ಹೆಗ್ಗಡೆ ನಮ್ಮಲ್ಲಿ ಆಸ್ಥಾನ ಪಂಡಿತರಿದ್ದಂತೆ. ನಮ್ಮ ಜೊತೆಯಲ್ಲಿ ಸದಾ ಹೆಜ್ಜೆ ಹಾಕಿ ದವರಾಗಿದ್ದಾರೆ. ನನ್ನ ಬೆಳವಣಿಗೆಯಲ್ಲಿ ಪತ್ರಕರ್ತರಾದ ಮತ್ತೀಕೆರೆ ಜಯರಾಂ, ಬಸವರಾಜ ಹೆಗ್ಗಡೆ, ಕೆ.ಎನ್.ರವಿ, ಎಸ್.ಕೃಷ್ಣ ಸ್ವರ್ಣಸಂದ್ರ ಸೇರಿದಂತೆ ಹಲವರ ಕೊಡುಗೆ ಇದೆ ಎಂದು ಸ್ಮರಿಸಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು. ಪತ್ರಕರ್ತರಾದ ಮತ್ತೀಕೆರೆ ಜಯರಾಂ ಹಾಗೂ ಬಸವರಾಜ ಹೆಗ್ಗಡೆ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಹಿರಿಯ ಪತ್ರಕರ್ತರಾದ ಪಿ.ಜೆ.ಚೈತನ್ಯಕುಮಾರ್, ಕೆ.ಎನ್.ರವಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್, ಮಾಜಿ ಅಧ್ಯಕ್ಷರಾದ ಕೆ.ಸಿ.ಮಂಜುನಾಥ, ಬಿ.ಪಿ.ಪ್ರಕಾಶ್, ರಾಜ್ಯ ಸಮಿತಿ ಸದಸ್ಯ ಸಿ.ಎನ್.ಮಂಜುನಾಥ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪ ನಿರ್ದೇಶಕಿ ಹೆಚ್.ಎಸ್. ನಿರ್ಮಲಾ, ಪತ್ರಕರ್ತರಾದ ಲೋಕೇಶ್ ಚಿನಕುರಳಿ, ಶಶಿಧರ್ ಕಾಡುಕೊತ್ತನಹಳ್ಳಿ, ಕೆ.ಶ್ರೀನಿವಾಸ್, ಶಿವನಂಜಯ್ಯ, ಎಂ.ಎಸ್.ಶಿವಪ್ರಕಾಶ್, ಎನ್.ನಾಗೇಶ್, ರವಿ ಸಾವಂದಿಪುರ ಸೇರಿದಂತೆ ಮತ್ತಿತರರಿದ್ದರು.

ದೊಡ್ಡಬ್ಯಾಡರಹಳ್ಳಿ ಪಿಎಸಿಎಸ್ ಚುನಾವಣೆ

ಡಿ.ಟಿ.ಧರ್ಮ ಅಧ್ಯಕ್ಷ, ಟಿ.ಎ.ಕೃಷ್ಣ ಉಪಾಧ್ಯಕ್ಷ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು, ನಿರ್ದೇಶಕರು ಅಭಿನಂದಿಸಿದರು.

ಪಾಂಡವಪುರ, ಜು.7– ತಾಲೂಕಿನ ದೊಡ್ಡಬ್ಯಾಡರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಡಿ.ಟಿ.ಧರ್ಮ, ಉಪಾಧ್ಯಕ್ಷರಾಗಿ ಟಿ.ಎ.ಕೃಷ್ಣ ಅವಿರೋಧವಾಗಿ ಆಯ್ಕೆಯಾದರು.

ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಡಿ.ಟಿ.ಧರ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಟಿ.ಎ.ಕೃಷ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮುಕ್ತ ಘೋಷಿಸಿದರು. ಅಧ್ಯಕ್ಷ, ಉಪಾಧ್ಯಕ್ಷರನ್ನು ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ಅಧ್ಯಕ್ಷ ಡಿ.ಟಿ.ಧರ್ಮ ಮಾತನಾಡಿ, ದೊಡ್ಡಬ್ಯಾಡರಹಳ್ಳಿ ಸೊಸೈಟಿ ಆರ್ಥಿಕವಾಗಿ ಹಿಂದುಳಿದಿರುವ ಹಿನ್ನೆಲೆಯಲ್ಲಿ ಸೊಸೈಟಿ ವ್ಯಾಪ್ತಿಯ ಎಲ್ಲಾ ಗ್ರಾಮಸ್ಥರು ಒಗ್ಗಟ್ಟಿನಿಂದ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಅದರಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸಹ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಸೊಸೈಟಿ ಅಭಿವೃದ್ಧಿಗೆ ಷೇರುದಾರರು ಸಹಕರಿಸಬೇಕು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ರಸಗೊಬ್ಬರ ಖರೀದಿ ಸೇರಿದಂತೆ ವಹಿವಾಟು ನಡೆಸಬೇಕು. ಆಡಳಿತ ಮಂಡಳಿ ಸರ್ಕಾರದಿಂದ ರೈತರಿಗೆ ಸಾಲ ಸೌಲಭ್ಯದ ಜೊತೆಗೆ ಅಗತ್ಯವಿರುವ ರಸಗೊಬ್ಬರ ಒದಗಿಸಿಕೊಡಲಿದೆ. ಈ ಹಿಂದೆ ಸೊಸೈಟಿಯಲ್ಲಿ ನಡೆಸಿರುವ ಭ್ರಷ್ಟಾಚಾರವನ್ನು ಕಾನೂನು ರೀತಿ ಸೂಕ್ತ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ನಿರ್ದೇಶಕರಾದ ಡಿ.ಕೆ.ಕುಳ್ಳೇಗೌಡ, ನಿಂಗರಾಜು, ಟಿ.ಸಿ.ಶಂಕರೇಗೌಡ, ಸುರೇಶ್, ಚಿಕ್ಕತಾಯಮ್ಮ, ಪಿ.ಸುರೇಶ್, ಜಯಮ್ಮ, ಬಿ.ರವಿ, ಡಿ.ಎಂ.ಸಂತೋಷ್, ಯಜಮಾನರಾದ ಡಿ.ಎಂ.ನಿಂಗೇಗೌಡ, ಡಿ.ಸಿ.ಅಣ್ಣೇಗೌಡ, ನಿಂಗೇಗೌಡ, ಪಟೇಲ್ ಆನಂದ್, ಗ್ರಾಪಂ ಅಧ್ಯಕ್ಷ ರವಿರಾಜ್, ಗ್ರಾಪಂ ಮಾಜಿ ಅಧ್ಯಕ್ಷರಾದ ಆನಂದ್, ಡಿ.ಎನ್.ರವಿ. ಮುಖಂಡರಾದ ಡಿ.ಎಂ.ಚನ್ನೇಗೌಡ, ಗೋಪಾಲ್, ಕೃಷ್ಣ, ಡಿ.ಸಿ.ಲೋಕೇಶ್, ಪರಮೇಶ್, ಗಣೇಶ್, ಮಹದೇವಸ್ವಾಮಿ ಸೇರಿದಂತೆ ಹಲವರಿದ್ದರು.

ಫೋಟೋ ತೆಗೆಸಿಕೊಳ್ಳಲು ಹೋದ ವ್ಯಕ್ತಿ ನೀರು ಪಾಲು



ಶ್ರೀರಂಗಪಟ್ಟಣ, ಜು.7– ಫೋಟೋ ತೆಗೆಸಿಕೊಳ್ಳಲು ಹೋದ ವ್ಯಕ್ತಿಯೋರ್ವ ಆಯತಪ್ಪಿ ಕಾವೇರಿ ನದಿಗೆ ಬಿದ್ದು ಕೊಚ್ಚಿಕೊಂಡು ಹೋಗಿರುವ ಘಟನೆ ತಾಲೂಕಿನ ಸರ್ವಧರ್ಮ ಆಶ್ರಮದ ಬಳಿ ಭಾನುವಾರ ನಡೆದಿದೆ.

ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಉಲ್ಲಂಗಾಲ ಗ್ರಾಮದ ಮಲ್ಲೇಶ್ ಅವರ ಮಗ ಮಹೇಶ್(30) ನದಿಯಲ್ಲಿ ಕೊಚ್ಚಿಕೊಂಡು ಹೋದವರು. ಮೈಸೂರಿನಲ್ಲಿ ಆಟೋ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ ಮಹೇಶ್, ಭಾನುವಾರ ಸ್ನೇಹಿತರೊಂದಿಗೆ ಕೆಆರ್‌ಎಸ್‌ಗೆ ಪ್ರವಾಸಕ್ಕೆ ಬಂದಿದ್ದ. ಈ ವೇಳೆ ಸರ್ವಧರ್ಮ ಆಶ್ರಮದ ಬಳಿ ಫೋಟೋ ತೆಗೆಸಿ ಕೊಳ್ಳಲು ಹೋದಾಗ ಆಯತಪ್ಪಿ ಕಾವೇರಿ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ ನದಿಯಲ್ಲಿ ನೀರು ಹೆಚ್ಚಾಗಿರುವ ಕಾರಣ ಕೊಚ್ಚಿ ಹೋಗಿರುವ ಮಹೇಶ್‌ಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿರತೆ ದಾಳಿಗೆ ಮೂರು ಮೇಕೆಗಳು ಬಲಿ



ಚಿರತೆ ದಾಳಿಗೆ ಮೇಕೆ ಸಾವನ್ನಪ್ಪಿರುವುದು.

ಭಾರತೀನಗರ, ಜು.7– ಚಿರತೆ ದಾಳಿಗೆ 3 ಮೇಕೆಗಳು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಕಾರ್ಕಹಳ್ಳಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ಬೋರೇಗೌಡರಿಗೆ ಸೇರಿದ ಮೇಕೆಗಳು ಬಲಿಯಾಗಿರುವುದು. ಭಾನುವಾರ ರಾತ್ರಿ ಮೇಕೆಗಳ ಕೊಟ್ಟಿಗೆಗೆ ನುಗ್ಗಿದ ಚಿರತೆ ಮೇಕೆ ಮೇಲೆ ದಾಳಿ ನಡೆಸಿ ಅರೆಬರೆ ತಿಂದು ಹಾಕಿದೆ. ಈ ವೇಳೆ ಮೇಕೆಗಳ ಚೀರಾಟ ಕೇಳಿ ಮನೆಯವರು ಹೊರ ಬರಲಾಗಿ ಚಿರತೆ ಅಲ್ಲಿಂದ ಓಡಿ ಹೋಗಿದೆ. ನಂತರ ಕೆಲ ಸಮಯದ ಬಳಿಕ ಮತ್ತೆ ಬಂದ ಚಿರತೆ ಮೇಕೆಯನ್ನು ಮಾಲೀಕರೆದುರಿಗೆ ಹೊತ್ತೊಯ್ದಿದೆ. ಬಳಿಕ ಮುಂಜಾನೆ 3 ಗಂಟೆ ವೇಳೆಗೆ ಮತ್ತೆ ಬಂದ ಚಿರತೆ ಮತ್ತೊಂದು ಮೇಕೆಯನ್ನು ಹೊತ್ತೊಯ್ಯಲು ಪ್ರಯತ್ನಿಸಿ ಬಲಿ ಪಡೆದಿದೆ. ಈ ವೇಳೆ ಸ್ಥಳೀಯರ ಕೂಗಾಡದಿಂದ ಚಿರತೆ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಿಡಿಓ ಸುಧಾ ಪರಿಶೀಲಿಸಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ತಕ್ಷಣ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಿಶೀಲಿಸಿ ಚಿರತೆ ಸೆರೆ ಹಿಡಿಯುವ ಭರವಸೆ ನೀಡಿದರು.

ಸಿಂಧುಘಟ್ಟದಲ್ಲಿ ವಿಜೃಂಭಣೆಯ ಬಾಬಯ್ಯನ ಹಬ್ಬ



ಸಿಂಧುಘಟ್ಟದಲ್ಲಿ ಬಾಬಯ್ಯನ ಹಬ್ಬ ಆಚರಿಸಲಾಯಿತು.

ಕೆ.ಆರ್.ಪೇಟೆ, ಜು.7– ತಾಲೂಕಿನ ಸಿಂಧುಘಟ್ಟದಲ್ಲಿ ಮೊಹರಂ ಕಡೇ ದಿನದ ಅಂಗವಾಗಿ ಹಸೇನ್, ಹುಸೇನರ ತ್ಯಾಗ ಮತ್ತು ಬಲಿದಾನದ ಸಂಕೇತವಾಗಿ ಹಿಂದೂ–ಮುಸ್ಲಿಮರ ಭಾವೈಕ್ಯತೆಯ ಸಂಕೇತವಾಗಿರುವ ಬಾಬಯ್ಯನ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಸಿಂಧುಘಟ್ಟದ ಕೆರೆ ಬೀದಿಯಲ್ಲಿರುವ ಬಾಬಯ್ಯನ ಗುಡಿ ಬಳಿ ತೆಗೆದ ಕೊಂಡಕ್ಕೆ ಭಾನುವಾರ ರಾತ್ರಿ ಅಗ್ನಿ ಸ್ಪರ್ಶ ಮಾಡಿ, ಬಾಬಯ್ಯನ ಗುಡಿಯಲ್ಲಿ ಹಸೇನ್–ಹುಸೇನ್ ದೇವರ ಪ್ರತಿಷ್ಠಾಪನೆ ಮಾಡಿ ಹೂವಿನಿಂದ ಅಲಂಕಾರ ಮಾಡಿ, ಧೂಪ ಮತ್ತು ಗಂಗಧಕಡ್ಡಿ ಹಚ್ಚಿ ಪೂಜೆ ಸಲ್ಲಿಸಲಾಯಿತು. ಬಳಿಕ ಕಡ್ಲೆ ಪುರಿ ನೈವೇದ್ಯ ಮಾಡಲಾಯಿತು. ನಂತರ ಗ್ರಾಮದ ಪ್ರಮುಖ ಬೀದಿಯಲ್ಲಿ ಬಾಬಯ್ಯ ದೇವರ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಹರಕೆ ಹೊತ್ತ ಭಕ್ತರು ಹರಕೆ ತೀರಿಸಿ ಬಾಬಯ್ಯನ ಕೃಪೆಗೆ ಪಾತ್ರರಾದರು.

ಬಾಬಯ್ಯನ ಹಬ್ಬದ ಅಂಗವಾಗಿ ದಸ್ತಗೀರ್ ಸಾಬ್ ಮೊಮ್ಮಗ ಇಮ್ರಾನ್‌ಪಾಷಾ ಚಾವಟಿ ಬಾರಿಸಿಕೊಂಡು ಕುರಾನ್ ಪಠಣ ಮಾಡಿದರು. ಬಾಬಯ್ಯನ ಹಬ್ಬ ಆಚರಣಾ ಸಮಿತಿ ಮುಖಂಡ ಈರಣ್ಣಿ ಅವರು ಬಾಬಯ್ಯ ಹಬ್ಬದ ಸಂಪೂರ್ಣ ಉಸ್ತುವಾರಿ ವಹಿಸಿಕೊಂಡು ನಡೆಸಿಕೊಟ್ಟರು.

ಹರಕೆ ಹೊತ್ತವರು ಮೈಗೆ ಮಸಿ ಬಳಿದುಕೊಂಡು ಕೊಂಡದ ಸುತ್ತಲೂ ಕುಣಿದು ಸಂಭ್ರಮಿಸಿದರು. ಮತ್ತೆ ಕೆಲವರು ಹುಲಿ ವೇಷ ತೊಟ್ಟು ನೆರದವರನ್ನು ರಂಜಿಸಿದರು. ನಂತರ ಪರಸ್ಪರ ಚಾವಟಿಯಿಂದ ಹೊಡೆದುಕೊಂಡು, ಮುಸ್ಲಿಂರು ಕುರಾನ್ ಗ್ರಂಥದ ಸಾಲುಗಳನ್ನು ಪಠಿಸಿದರು. ಅದಕ್ಕೆ ಹಿಂದೂಗಳು ದನಿಗೂಡಿಸಿದರು. ಭಕ್ತರಿಗೆ ಸಿಹಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಬಾಬಯ್ಯನ ಹಬ್ಬದಲ್ಲಿ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ್, ಮುಖಂಡರಾದ ಈರಣ್ಣ ಮಹಮದ್ ಸಾದಿಕ್, ಅನ್ಸರ್ ಪಾಷಾ, ಗಂಜಿಗೆರೆ ಮಹೇಶ್, ಆಯಾಜ್, ದಸ್ತಗಿರ್ ಪಾಷಾ, ಅನ್ಸರ್, ನೂರ್ ಅಹಮದ್, ಶಿಕ್ಷಕ ಯೋಗೇಶ್ ಸೇರಿದಂತೆ ಸಾವಿರಾರು ಭಕ್ತರು ಸೇರಿದಂತೆ ಹಿಂದೂ ಮತ್ತು ಮುಸ್ಲಿಂ ಮಹಿಳೆಯರು ಭಾಗವಹಿಸಿದ್ದರು.

ನಾಳೆ ನೇರ ಸಂದರ್ಶನ

ಮಂಡ್ಯ, ಜು.7– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ.ಮೈತ್ರಿ ಅಕಾಡೆಮಿ ಮತ್ತು ಮೆ.ಚೈತನ್ಯ ಇಂಡಿಯಾ ಫಿನ್ ಕ್ರೆಡಿಟ್ ಪ್ರೈ ಲಿ ಸಂಸ್ಥೆಯವರು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳಿಗಾಗಿ ಸಂದರ್ಶನ ನಡೆಸಲಿದ್ದಾರೆ.

18 ರಿಂದ 32 ವರ್ಷದೊಳಗಿನವರು ಜು.9 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ತಮ್ಮ ಬಯೋಡೇಟಾಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ.

'ಅಕಾಡೆಮಿ ಕೋ ಆರ್ಡಿನೇಟರ್ ಮತ್ತು ಎಸ್‌ಎಫ್‌ಓ' ಖಾಲಿ ಇರುವ ಹುದ್ದೆಗಳಾಗಿದ್ದು, ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟು ಹಾಗೂ ಎಂ.ಎಸ್ಸಿ, ಬಿ.ಇಡ್, ಎಂ.ಎ, ಬಿ.ಇಡ್ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ: 08232–295124, 9164642684 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಎ.ಎಸ್.ಗೋಪಾಲ್ ನಿಧನ



ಕೆ.ಆರ್.ಪೇಟೆ, ಜು.7– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡ, ದಿ.ಸುಬ್ಬುಕೃಷ್ಣೇಗೌಡರ ಪುತ್ರ ಎ.ಎಸ್.ಗೋಪಾಲ್ (55) ಸೋಮವಾರ ನಿಧನರಾದರು. ಮೃತರು ಪತ್ನಿ ಲೀಲಾವತಿ, ತಾಯಿ ಸರೋಜಮ್ಮ, ಪುತ್ರರಾದ ವಿನಯ್, ಹರೀಶ್, ಕರವೇ ತಾಲೂಕು ಅಧ್ಯಕ್ಷ ಟೆಂಪೋ ಶ್ರೀನಿವಾಸ್ ಸೇರಿದಂತೆ ನಾಲ್ವರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸಂಜೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ರಾಜ್ಯ ಸರ್ಕಾರ ಪ್ಯಾಕೇಜ್

ಪಶ್ಚಿಮ ಘಟ್ಟಗಳ ಭಾಗಗಳಲ್ಲಿ ಸ್ಥಳ ಗುರ್ತಿಸಲಾಗುತ್ತಿದ್ದು, ಇಲಾಖೆಯು ಈಗಾಗಲೇ ಪಾಲುದಾರರನ್ನು ಶಾರ್ಟ್ ಲಿಟ್ ಮಾಡಿದೆ ಎಂದು ತಿಳಿದುಬಂದಿದೆ. ಈ ಪ್ಯಾಕೇಜ್‌ನಲ್ಲಿ ಪ್ರವಾಸಿಗರು ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗುತ್ತದೆ. ಕನಿಷ್ಠ 2–3 ಸ್ಥಳಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಮಹಿಳೆಯರು, ಕಾಲೇಜು ವಿದ್ಯಾರ್ಥಿಗಳು ಹಾಗೂ ಕಾರ್ಪೊರೇಟ್ ವಲಯದಲ್ಲಿರುವ ಮಹಿಳೆಯರು ಹೆಚ್ಚಾಗಿ ಪ್ರವಾಸಗಳಿಗೆ ತೆರಳುತ್ತಿದ್ದು, ಪ್ಯಾಕೇಜ್‌ಗಳನ್ನು ರೂಪಿಸುವ ಕೆಲಸ ನಡೆಯುತ್ತಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇಲ್ಲಿಯವರೆಗೆ ಗಗನಚುಕ್ಕಿ–ಭರಚುಕ್ಕಿ, ಜೋಗ್ ಜಲಪಾತ ಅಥವಾ ಇತರ ಸ್ಥಳಗಳಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಬಳಸಿಕೊಂಡು ಒಂದು ಅಥವಾ ಎರಡು ದಿನಗಳ ಪ್ರವಾಸವನ್ನು ನಡೆಸಲಾಗುತ್ತಿತ್ತು. ಇವುಗಳನ್ನು ಒಂದು ವಾರ ಅಥವಾ ವಾರಾಂತ್ಯದ ಸಂಯೋಜಿತ ಪ್ರವಾಸಗಳಾಗಿ ವಿಸ್ತರಿಸಲು ಚಿಂತನೆ ನಡೆಸಲಾಗಿದೆ.

ಸಾಹಸ ಪ್ರವಾಸೋದ್ಯಮ ಪ್ಯಾಕೇಜ್‌ಗಳನ್ನು ನಡೆಸುವ ಅನೇಕ ಖಾಸಗಿ ಗುಂಪುಗಳು ಮತ್ತು ವ್ಯಕ್ತಿಗಳು ಇದ್ದು, ಇಂತಹವರು ಪ್ರವಾಸಿಗರನ್ನು ಆಹ್ವಾನಿಸಲು ಸಾಮಾಜಿಕ ಜಾಲತಾಣ ವೇದಿಕೆಗಳನ್ನು ಬಳಸುತ್ತಿರುವುದು ನಿಜ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳನ್ನು ಒಳ ಗೊಂಡ ಪ್ರಯಾಣ ಮತ್ತು ವಸತಿ ವ್ಯವಸ್ಥೆ ಗಳನ್ನು ವಿಂಗಡಿಸಲಾಗುತ್ತಿದ್ದು, ಜುಲೈ ತಿಂಗಳಿನಲ್ಲಿ ನಮ್ಮ ಹೊಸ ಯೋಜನೆಯನ್ನು ಪ್ರಾರಂಭಿಸುವ ನಿರೀಕ್ಷೆಗಳಿವೆ. ಯೋಜನೆ ಆರಂಭಿಸಲು ಮಳೆಗಾಲ ಉತ್ತಮ ಸಮಯವಾಗಿದೆ. ಭೂಕುಸಿತಗಳು ಸಮಸ್ಯೆಗಳು ಎದುರಾಗಿಲ್ಲ. ಜಲಪಾತಗಳ ನೋಟ ರಮಣೀಯವಾಗಿವೆ ಎಂದು ತಿಳಿಸಿದ್ದಾರೆ.

ಶ್ರೀಗಳು ಹೇಳಿದ ಮಾತು ನಿಜ ಆಗುತ್ತೆ

ಆ ಜಾಗದಲ್ಲಿ ಅಂತವರಿದ್ದರೆ ಮಾತ್ರ ಹಿಂದುಳಿದ ವರ್ಗಕ್ಕೆ ಅನುಕೂಲ. ಸಿದ್ದರಾಮಯ್ಯನರಿಗೆ ಬಹಳ ಅನುಭವ ಇದೆ, ದಾಖಲೆ ಪ್ರಮಾಣದ ಬಜೆಟ್ ಮಂಡಿಸಿದ್ದಾರೆ. ಹಾಗಾಗಿ ಆ ಸ್ಥಾನಕ್ಕೆ ಸೂಕ್ತವಾದ ವ್ಯಕ್ತಿಯನ್ನು ಎಐಸಿಸಿ ಆಯ್ಕೆ ಮಾಡಿದೆ. ಇದಕ್ಕೆ ಬಿಜೆಪಿ ನಾಯಕರು ಟೀಕೆ ಮಾಡುವುದು ಸಹಜ. ವಿರೋಧ ಪಕ್ಷದ ಕೆಲಸವೇ ಟೀಕೆ ಮಾಡುವುದು. ಅಧಿಕಾರ ಇದ್ದಾಗ ಅವರು ಅಭಿವೃದ್ಧಿ ಮಾಡಲಿಲ್ಲ, ಈಗ ಕೇವಲ ಟೀಕೆ, ಟಿಪ್ಪಣಿ ಮಾಡುತ್ತಾರೆ. ಅವರ ಕೆಲಸ ಅವರು ಮಾಡಲಿ. ಸಿದ್ದರಾಮಯ್ಯನವರು ನಮ್ಮ ಮುಖ್ಯಮಂತ್ರಿಗಳು. ಹಿಂದುಳಿದ ವರ್ಗದ ಬಗ್ಗೆ ವಿಶೇಷ ಕಾಳಜಿ ಹೊಂದಿರುವವರು. ಅವರಿಗೆ ಎರಡೂ ಸ್ಥಾನವನ್ನ ನಿಭಾಯಿಸುವ ಸಾಮರ್ಥ್ಯ ಇದೆ ಎಂದರು.

9,428 ಮಂದಿಗೆ ನಾಯಿ ಕಡಿತ

ಸೋಂಕಿನಿಂದ ಮುಕ್ತಾಗುವುದು ಸಾಧ್ಯವಿಲ್ಲ. ಅಗತ್ಯವಿದ್ದಲ್ಲಿ ವೈದ್ಯರ ಸಲಹೆಯಂತೆ ಟೆಟಾನಸ್ ಚುಚ್ಚುಮದ್ದು ಹಾಗೂ ಆಂಟಿ ಬಯಾಟಿಕ್ ಮಾತ್ರೆಗಳನ್ನು ತೆಗೆದುಕೊಳ್ಳಬೇಕು. ಗರ್ಭಿಣಿಯರು, ಹಾಲುಣಿಸುವ ತಾಯಂದಿರು, 1 ವರ್ಷದೊಳಗಿನ ಮಕ್ಕಳು ಮತ್ತು ವಯಸ್ಕರು ಸಹ ರೇಬಿಸ್ ವಿರುದ್ಧದ ಲಸಿಕೆಯನ್ನು ತೆಗೆದುಕೊಳ್ಳಬಹುದು.

ಏನು ಮಾಡಬಾರದು: ಕಚ್ಚಿದ ಗಾಯಕ್ಕೆ ಮಣ್ಣು, ವೀಳ್ಯೆದೆಲೆ, ಅರಿಸಿನ, ಸುಣ್ಣ, ಎಣ್ಣೆಯಂತಹ ಪದಾರ್ಥಗಳನ್ನು ಹಾಕಕೂಡದು. ಜೊತೆಗೆ ಗಾಯಕ್ಕೆ ಕಟ್ಟು ಹೊಲಿಗೆ, ಬರೆ ಹಾಕಬಾರದು. ಬಹುಮುಖ್ಯವಾಗಿ ನಿರ್ಲಕ್ಷ್ಯದಿಂದ ಯಾವುದೇ ಕ್ರಮ ವಹಿಸದೇ ಇರುವುದು ಮುಂದೊಂದಿನ ಅಪಾಯಕ್ಕೆ ಕಾರಣವಾಗಲಿದೆ ಎಂಬ ಅರಿವು ಇರಬೇಕು.

ನಿರ್ಲಕ್ಷ್ಯ ಸಲ್ಲದು: ಇತ್ತೀಚೆಗೆ ಉತ್ತರ ಪ್ರದೇಶದ ಯುವ ಕಬಡ್ಡಿ ಆಟಗಾರ ಬ್ರಜೇಶ್ ಸೋಲಂಕಿಯವರು ರೇಬಿಸ್ ಕಾಯಿಲೆಗೆ ಬಲಿಯಾದರು. ಅವರು ನಾಯಿ ಮರಿಯೊಂದರ ರಕ್ಷಣೆ ಮಾಡಿದ್ದರು. ಈ ವೇಳೆ ಅದು ಕಚ್ಚಿದ್ದರೂ ಅವರು ಲಸಿಕೆ ಪಡೆಯೇ ಇದ್ದ ಕಾರಣ ರೇಬಿಸ್‌ಗೆ ತುತ್ತಾಗಿ ಸಾವನ್ನಪ್ಪಿದರು ಎಂದು ವರದಿಯಾಗಿದೆ. ಅಲ್ಲದೆ, ಮೈಸೂರಿನ ಮೇಟಗಳ್ಳಿಯ ಮಹಾಲಿಂಗೇಶ್ವರ ದೇವಾಲಯದ ಬಸವ ಕೂಡ ಹುಚ್ಚುನಾಯಿ ಕಡಿತಕ್ಕೆ ತುತ್ತಾಗಿ ಇತ್ತೀಚೆಗೆ ಸಾವನ್ನಪಿತು. ಈ ಎರಡು ಪ್ರಕರಣಗಳಲ್ಲಿ ಸಕಾಲದಲ್ಲಿ ಲಸಿಕೆ ಪಡೆಯದಿದ್ದರೆ, ಇಂತಹ ದುಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಹಾಗಾಗಿ ನಾಯಿ ಕಡಿತದ ಬಗ್ಗೆ ಯಾವುದೇ ನಿರ್ಲಕ್ಷ್ಯ ಸಲ್ಲದು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ರೇಬಿಸ್ ಸೋಂಕು ಹೊಂದಿರುವ ಹುಚ್ಚುನಾಯಿ ತೀವ್ರ ರೀತಿಯಲ್ಲಿ ಕಚ್ಚಿದಾಗ ಸೋಂಕು ಹರಡುವ ಸಾಧ್ಯತೆ ಹೆಚ್ಚು. ಕಚ್ಚಿದ ಭಾಗವನ್ನು ಸೂಕ್ತ ರೀತಿಯಲ್ಲಿ ತೊಳೆದು, ರೇಬಿಸ್ ವಿರೋಧಿ ಲಸಿಕೆ ತೆಗೆದುಕೊಂಡರೆ ಅಪಾಯದಿಂದ ಪಾರಾಗಬಹುದು. ಮುಖ, ಎದೆ ಭಾಗದಲ್ಲಿ ನರಗಳು, ರಕ್ತನಾಳಗಳ ಸಂಖ್ಯೆ ಹೆಚ್ಚಿರುವ ಹಿನ್ನೆಲೆಯಲ್ಲಿ ಈ ಭಾಗಗಳಲ್ಲಿ ಕಚ್ಚಿದಾಗ ಸೋಂಕು ವ್ಯಾಪಿಸುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ತಿಳಿಸಿದರು.

ಸಿಎಂ, ಡಿಸಿಎಂ ದೆಹಲಿ ಪ್ರವಾಸ

ನೀಡಿದ್ದರೂ, ಅದರ ಬಗ್ಗೆ ಸಿದ್ದರಾಮಯ್ಯ ಅವರಲ್ಲಿ ಆಸಕ್ತಿ ಇದ್ದಂತಿಲ್ಲ. ಅವರು ರಾಜ್ಯ ರಾಜಕಾರಣದಲ್ಲೇ ಮುಂದುವರೆಯುವ ಇಚ್ಛೆ ಹೊಂದಿದ್ದಾರೆ. ಈ ವಿಷಯವೂ ಸೇರಿದಂತೆ ವಿಧಾನ ಪರಿಷತ್‌ನಲ್ಲಿ ತೆರವಾಗಿರುವ ನಾಲ್ಕು ಸ್ಥಾನಗಳಿಗೆ ನೇಮಕಾತಿ, ಜೊತೆಯಲ್ಲೇ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸುವ ಉದ್ದೇಶವನ್ನು ಮುಖ್ಯಮಂತ್ರಿ ಹೊಂದಿದ್ದಾರೆ. ಮತ್ತೊಂದೆಡೆ ರಾಹುಲ್‌ಗಾಂಧಿ ದೇಶಕ್ಕೆ ಹಿಂತಿರುಗುತ್ತಿದ್ದಾರೆ ಎಂಬ ಮಾಹಿತಿ ದೊರೆಯುತ್ತಿದ್ದಂತೆ, ಡಿ.ಕೆ.ಶಿವಕುಮಾರ್ ಅವರು, ಮುಖ್ಯಮಂತ್ರಿಗಳಿಗಿಂತ ಒಂದು ದಿನ ಮುಂಚಿತವಾಗಿ ದೆಹಲಿಗೆ ತೆರಳಲಿದ್ದಾರೆ.

ಈ ಬಾರಿ ದೆಹಲಿ ಭೇಟಿ ವೇಳೆ ಮುಖ್ಯಮಂತ್ರಿ ಅವರು, ರಾಜನಾಥ್ ಸಿಂಗ್ ಹಾಗೂ ರಾಹುಲ್ ಗಾಂಧಿ ಅವರನ್ನು ಹೊರತುಪಡಿಸಿ ಪಕ್ಷದ ಉಳಿದ ಯಾವುದೇ ಮುಖಂಡರನ್ನು ಭೇಟಿ ಮಾಡುವ ಕಾರ್ಯಕ್ರಮ ಇಲ್ಲ. ಕಳೆದ 15 ದಿನಗಳ ಹಿಂದೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿಗೆ ತೆರಳಿದ್ದಾಗ, ತಮ್ಮ ಆಪ್ತ ಸಚಿವರ ಜೊತೆಗೂಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ್ದರು.

ಲಾರಿಗಳ 260 ಕೋಟಿ ಬಾಡಿಗೆ ಬಾಕಿ

ಸಂಘ ಇಂದಿನಿಂದ ಬಂದ್‌ಗೆ ಕರೆ ನೀಡಿವೆ ಎಂದು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಗಪ್ಪ ತಿಳಿಸಿದ್ದಾರೆ.

ಬಾಡಿಗೆ ನೀಡದ ಕಾರಣ ಇಪಿಎಫ್, ಇಎಸ್‌ಐ ಕಟ್ಟಿಲ್ಲ. ಸರ್ಕಾರದ ಜೊತೆಗೆ ಅಧಿಕಾರಿಗಳೇ ಲಾರಿಗಳನ್ನು ಓಡಿಸಿಕೊಳ್ಳಲಿ. ಸಾಗಾಣಿಕೆ ಟೆಂಡರ್‌ಗಳಲ್ಲಿ ಭಾಗವಹಿಸುವಾಗ ನೀಡಿದ್ದ ಇಎಂಡಿ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ನೀಡಿದ ನಂತರವೂ ಗುತ್ತಿಗೆದಾರರಿಗೆ ಮರುಪಾವತಿ ಮಾಡಿಲ್ಲ. ಆಯ್ಕೆಯಾಗದ ಬಿಡ್‌ದಾರರಿಗೂ ಇಎಂಡಿ ಹಣ ಹಿಂತಿರುಗಿಸಿಲ್ಲ. ಒಂದು ದಿನ ತೆರಿಗೆ ಕಟ್ಟದೇ ಇದ್ದರೆ ದಂಡ ವಿಧಿಸುತ್ತಾರೆ ಎಂದು ಆಕ್ರೋಶ ಹೊರ ಹಾಕಿದರು.

ಲಾರಿ ಬಾಡಿಗೆ 120 ಕೋಟಿ ರೂ.ಗಳನ್ನು ಇಂದು ಬಿಡುಗಡೆ ಮಾಡ ಲಾಗಿದೆ. ಇನ್ನು ಒಂದು ವಾರದೊಳಗೆ ಲಾರಿ ಬಾಡಿಗೆಯ ಎಲ್ಲಾ ಬಾಕಿ ಮೊತ್ತವನ್ನೂ ನೀಡಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ ಹೇಳಿಕೆ ನೀಡಿದ ರಾದರೂ, ತಮ್ಮ ಖಾತೆಗೆ ಹಣ ಜಮೆ ಯಾಗದ ಕಾರಣ ಲಾರಿ ಓಡಿಸುವುದಿಲ್ಲ ಎಂದು ಲಾರಿ ಮಾಲೀಕರು ಮತ್ತು ಚಾಲಕರು ತಿಳಿಸಿದ್ದಾರೆ.

ಮೈಸೂರು ವರದಿ: ಮೈಸೂರಿನ ರೈಲ್ವೆ ಗೂಡ್ಸ್ ಶೆಡ್‌ಗೆ ವ್ಯಾಗನ್‌ಗಳಲ್ಲಿ ಬರುವ ಅಕ್ಕಿಯನ್ನು ಲಾರಿಗಳ ಮೂಲಕ ಮೊದಲು ಸರ್ಕಾರದ ಉಗ್ರಾಣಕ್ಕೆ ಸಾಗಾಟ ಮಾಡಲಾಗುತ್ತದೆ. ತರುವಾಯ ಅಕ್ಕಿಯನ್ನು ಉಗ್ರಾಣದಿಂದ ಪಡಿತರ ಅಂಗಡಿಗಳಿಗೆ ಸಾಗಿಸಲಾಗುತ್ತದೆ.

ಆದರೆ ಸರ್ಕಾರ ಅಕ್ಕಿ ಸಾಗಾಟದ ಬಾಡಿಗೆ ಬಾಕಿಯನ್ನು 3 ತಿಂಗಳಿನಿಂದ ಪಾವತಿಸಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ಕರ್ನಾಟಕದ ಎಲ್ಲಾ ಲಾರಿ ಮಾಲೀಕರು ಅನ್ನಭಾಗ್ಯ ಯೋಜನೆಯ ಅಕ್ಕಿಯ ಸಾಗಾಟವನ್ನು ಸ್ಥಗಿತ ಮಾಡಿದ್ದಾರೆ. ಮೈಸೂರಿನಲ್ಲಿರುವ ಗೂಡ್ಸ್ ಶೆಡ್‌ನ ವ್ಯಾಗನ್‌ನಲ್ಲಿದ್ದ ಅಕ್ಕಿಯನ್ನು ಇಂದು ಉಗ್ರಾಣಕ್ಕೆ ಸಾಗಿಸಲಾಯಿತು. ಆದರೆ, ಉಗ್ರಾಣದಿಂದ ಪಡಿತರ ಅಂಗಡಿಗಳಿಗೆ ಅಕ್ಕಿ ಸಾಗಾಟವನ್ನು ಸ್ಥಗಿತ ಮಾಡಲಾಗಿದೆ ಎಂದು ರೈಲ್ವೆ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಅಬ್ದುಲ್ ಖಾದರ್ ಶಾಹಿದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೆಆರ್‌ಎಸ್ ರಸ್ತೆಯಲ್ಲಿ ಸಂಚಾರ ವ್ಯತ್ಯಯ

ತಿರುಗಿ ಮುಂದೆ ಸಾಗುವುದು. ಪಂಪ್‌ಹೌಸ್ ಕಡೆಯಿಂದ ಮೈಸೂರಿಗೆ ಬರುವ ವಾಹನಗಳು ಕೆಆರ್‌ಎಸ್ ರಸ್ತೆಯ ಫಾಲ್ಕನ್ ಟೈರ್ಸ್ ಫ್ಯಾಕ್ಟರಿ ಬಳಿ ಎಡಕ್ಕೆ ತಿರುಗಿ ಮುಂದೆ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್ ರಸ್ತೆಯಲ್ಲಿ ಬಲಕ್ಕೆ ತಿರುಗಿ ಮುಂದೆ ಸಾಗಿ, ರಾಯಲ್ ಇನ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಮುಂದೆ ಸಾಗುವಂತೆ ವಿವಿಪುರಂ ಸಂಚಾರ ಠಾಣೆ ಪೊಲೀಸರು ಸಲಹೆ ನೀಡಿದ್ದಾರೆ.

ಕೆಆರ್‌ಎಸ್ ರಸ್ತೆಯ ಫಾಲ್ಕನ್ ಟೈರ್ಸ್ ಕಾರ್ಖಾನೆ ಬಳಿ ಹಾಗೂ ರಾಯಲ್ ಇನ್ ಜಂಕ್ಷನ್‌ನಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಸ್ಥಳದಲ್ಲಿ ವಿವಿಪುರಂ ಸಂಚಾರ ಠಾಣೆ ಪೊಲೀಸರು, ಆರ್‌ಪಿಎಫ್ ಸಿಬ್ಬಂದಿ ನೆರವು ಪಡೆದು ಬದಲಿ ಮಾರ್ಗದಲ್ಲಿ ವಾಹನ ಸಂಚರಿಸುವಂತೆ ಸೂಚಿಸುತ್ತಿದ್ದಾರೆ. ಮೂರು ದಿನದಲ್ಲಿ ರೈಲ್ವೆ ಹಳಿ ಬದಲಿಸುವ ಕಾಮಗಾರಿ ಪೂರ್ಣಗೊಳ್ಳಲಿದ್ದು, ಗುರುವಾರ ಬೆಳಗ್ಗೆಯಿಂದ ಇಲ್ಲಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದು ರೈಲ್ವೆ ಅಧಿಕಾರಿ ದೇವರಾಜೇಗೌಡ ತಿಳಿಸಿದ್ದಾರೆ.

ಗಾಂಧೀ ಅನುಯಾಯಿ ಎಲ್.ನರಸಿಂಹಯ್ಯರಿಗೆ ಪ್ರೊ. ಎಂ. ಕರೀಮುದ್ದೀನ್ ಪ್ರಶಸ್ತಿ ಪ್ರದಾನ



ತುಮಕೂರಿನ ಎಲ್. ನರಸಿಂಹಯ್ಯ ತೊಂಡೋಟಿ ಅವರಿಗೆ ಪ್ರೊ.ಎಂ.ಕರೀಮುದ್ದೀನ್ ಸ್ಮಾರಕ ಗಾಂಧಿ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಜು. 7– ಪ್ರಖರ ಗಾಂಧೀ ಚಿಂತಕರೂ, ಶಿಕ್ಷಣ ತಜ್ಞರಾದ ತುಮಕೂರಿನ ಎಲ್. ನರಸಿಂಹಯ್ಯ ತೊಂಡೋಟಿ ಅವರಿಗೆ ಮಂಡ್ಯದ ಗಾಂಧೀ ಭವನದಲ್ಲಿ ಈ ಸಾಲಿನ ಪ್ರೊ.ಎಂ.ಕರೀಮುದ್ದೀನ್ ಸ್ಮಾರಕ ಗಾಂಧಿ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಅಭಿನಂದನಾ ನುಡಿಗಳನ್ನಾಡಿದ ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷ ಡಾ.ಎಚ್.ಎಸ್.ಸುರೇಶ್, ಇತ್ತೀಚೆಗೆ 91ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಎಲ್ಲೆನ್ ಅವರು ಕನಕಪುರ ತಾಲೂಕು ಹಾರೋಹಳ್ಳಿ ಗ್ರಾಮಾಂತರ ಪ್ರೌಢ ಶಾಲೆಯಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಮುಖ್ಯೋಪಾಧ್ಯಾಯರಾಗಿ ಆ ಶಾಲೆಗೆ ಗಾಂಧಿ ಮೌಲ್ಯಗಳ ಚೌಕಟ್ಟು ಹಾಕಿದವರು. ವಿವಿಧ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ತುಮಕೂರು ಮತ್ತು ರಾಮನಗರ ಜಿಲ್ಲೆಗಳ ಶಾಲಾ ಮಕ್ಕಳಿಗೆ ಗಾಂಧೀ ತತ್ವಗಳನ್ನು ಪರಿಚಯಿಸಿದವರು. ಅವರು ರಚಿಸಿದ ಕಥನ ಕವನ 'ಗಾಂಧೀ ಗೋವಿನ ಕಥೆ 'ಮಕ್ಕಳಿಗೆ ಪ್ರಿಯವಾದ ಪುಸ್ತಿಕೆ.ಪ್ರೊ. ಎಂ. ಕರೀಮುದ್ದಿನ್ ಸಂಸ್ಮರಣೆಯಲ್ಲಿ ದ್ವಿತೀಯ ವರ್ಷದ ಈ ಗಾಂಧೀ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ಅತ್ಯಂತ ಸಮಯೋಚಿತ ಎಂದು ಅಭಿಪ್ರಾಯಪಟ್ಟರು.

ಮಂಡ್ಯದ ಖ್ಯಾತ ವೈದ್ಯ ಡಾ ಬಿ ಸುಜಯ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್ ಗೌಡ, ಸರ್ವೋದಯ ಮಂಡಲದ ಅಧ್ಯಕ್ಷ ಪ್ರೊ. ನಾಗಾನಂದ, ಪಿಇಟಿ ಸಮೂಹ ಸಂಸ್ಥೆ ಅಧ್ಯಕ್ಷ ಡಾ. ರಾಮಲಿಂಗಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೀದಿನಾಟಕ, ಜಾನಪದ ಸಂಗೀತ ಕಲಾತಂಡಗಳಿಂದ ಅರ್ಜಿ ಆಹ್ವಾನ

ಮೈಸೂರು, ಜು.7– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸರ್ಕಾರದ ಯೋಜನೆಗಳನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ ಬೀದಿನಾಟಕ, ಜಾನಪದ ಸಂಗೀತ ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 25 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿಗಳನ್ನು ಉಪನಿರ್ದೇಶಕರ ಕಛೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮೈಸೂರು ಇಲ್ಲಿಗೆ ಸಲ್ಲಿಸಬೇಕು.

ಜಿಲ್ಲಾ ಮಟ್ಟದಲ್ಲಿ ಅಧೀನ ಕಚೇರಿಗಳ ಮೂಲಕ 2025–26ನೇ ಸಾಲಿನಲ್ಲಿ ಬೀದಿ ನಾಟಕ, ಜಾನಪದ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಪ್ರತಿ ಜಿಲ್ಲೆಯಿಂದ 3 ಬೀದಿನಾಟಕ ಹಾಗೂ 3 ಜಾನಪದ ಸಂಗೀತ ಕಲಾತಂಡಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.

ಪ್ರತಿ ಬೀದಿನಾಟಕ ತಂಡದಲ್ಲಿ 8 ಜನ ಕಲಾವಿದರಿದ್ದು, ಅದರಲ್ಲಿ ಕಡ್ಡಾಯವಾಗಿ ಇಬ್ಬರು ಮಹಿಳೆಯರು ಹಾಗೂ ಒಬ್ಬರು ಪರಿಶಿಷ್ಟ ಜಾತಿ, ಪರಿಶಿಷ್ಠ ವರ್ಗಕ್ಕೆ ಸೇರಿದ ಕಲಾವಿದರನ್ನೊಳಗೊಂಡಿರಬೇಕು.

ಪ್ರತಿ ಜಾನಪದ ಸಂಗೀತ ಕಲಾ ತಂಡದಲ್ಲಿ 3 ಜನ ಕಲಾವಿದರಿದ್ದು, ಅದರಲ್ಲಿ ಕಡ್ಡಾಯವಾಗಿ ಒಬ್ಬರು ಮಹಿಳೆಯರು ಹಾಗೂ ಒಬ್ಬರು ಪರಿಶಿಷ್ಟ ಜಾತಿ, ಪರಿಶಿಷ್ಠ ವರ್ಗಕ್ಕೆ ಸೇರಿದ ಕಲಾವಿದರು ಇರುವುದು ಕಡ್ಡಾಯವಾಗಿದೆ. ಕಲಾ ತಂಡಗಳ ಆಯ್ಕೆ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ, ಪರಿಶಿಷ್ಟ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೃಷಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿದ್ದು, 2025ರ ಆಗಸ್ಟ್ 12 ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯಾದ್ಯಂತ 31 ಜಿಲ್ಲೆಗಳಲ್ಲಿ ಏಕಕಾಲಕ್ಕೆ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾನೂನು ತರಬೇತಿಗೆ ಅರ್ಜಿ ಆಹ್ವಾನ

ಮಂಡ್ಯ, ಜು.7– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜಿಲ್ಲೆಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಕಾನೂನು ಪದವೀಧರರಿಗೆ 2025–26ನೇ ಸಾಲಿನಲ್ಲಿ ಕಾನೂನು ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ನಮೂನೆಗಳನ್ನು ಕೆರೆಯಂಗಳದ ಬೀಡಿ ಕಾಲೋನಿಯಲ್ಲಿರುವ ಮೌಲಾನಾ ಆಜಾದ್ ಭವನದಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪಡೆದು, ಜು.24ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.:08232–279240 ಸಂಪರ್ಕಿಸಿ.

ಗಾಂಧಿವಾದಿ ಶಶಿರೇಖಾ ನಿಧನ



ಮೈಸೂರು,ಜು.7–ಮಹಾರಾಷ್ಟ್ರದ ವಾರ್ಧಾ ಗಾಂಧೀ ಆಶ್ರಮದಲ್ಲಿ ಸೇವೆ ಸಲ್ಲಿಸಿದ ಗಾಂಧಿವಾದಿ ಶಶಿರೇಖಾ ಅವರು ಸೋಮವಾರ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಶಶಿರೇಖಾ ಅವರು ಗಾಂಧಿವಾದಿ ತಗಡೂರು ಸತ್ಯನಾರಾಯಣ ಅವರ ಪತ್ನಿ. ಇವರು ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಲಿದ್ದಾರೆ. ಮೃತರು ವಾರ್ಧಾ ಗಾಂಧಿ ಆಶ್ರಮದಲ್ಲಿ 2 ದಶಕಗಳಿಗೂ ಹೆಚ್ಚು ಕಾಲ ನೆಲೆನಿಂತು ಸೇವೆ ಸಲ್ಲಿಸಿದ್ದರು. ಬಳಿಕ ಅರಸೀಕೆರೆ ಗಾಂಧಿ ಆಶ್ರಮದಲ್ಲಿ ಸೇವೆಗೈದ ಅವರು, ಈಗ ತಗಡೂರಿನ ಗಾಂಧೀ ಆಶ್ರಮದಲ್ಲಿದ್ದರು. ಮಂಗಳವಾರ (ಜು.8) 10 ಗಂಟೆಯವರೆಗೆ ತಗಡೂರಿನ ಗಾಂಧೀ ಆಶ್ರಮದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಬಳಿಕ ಜೆಎಸ್‌ಎಸ್ ಆಸ್ಪತ್ರೆಗೆ ದೇಹದಾನ ಮಾಡಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮಂಗಳವಾರ 8 ಜುಲೈ 2025

ರಾಜ್ಯ ಸರ್ಕಾರದ ದ್ವಂದ್ವ ನೀತಿಗೆ ಕನ್ನಡ ಕ್ರಿಯಾ ಸಮಿತಿ ಖಂಡನೆ; ಪ್ರತಿಭಟನೆ ಎಚ್ಚರಿಕೆ

ಮೈಸೂರು,ಜು.7–ರಾಜ್ಯದಲ್ಲಿ ಒಂದರಿಂದ ಐದನೇ ತರಗತಿವರೆಗೆ ಮಾತೃಭಾಷೆ ಅಥವಾ ರಾಜ್ಯ ಭಾಷೆಯನ್ನು ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಕಡ್ಡಾಯ ಶಿಕ್ಷಣ ಮಾಧ್ಯಮವಾಗಿ ಜಾರಿಗೊಳಿಸುವ ಉಚಿತ ಕಡ್ಡಾಯ ಶಿಕ್ಷಣ ಮಸೂದೆ 2015ಕ್ಕೆ ಒಪ್ಪಿಗೆ ನೀಡಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಖುದ್ದಾಗಿ ಒತ್ತಾಯಿಸಿದ ಮುಖ್ಯಮಂತ್ರಿಗಳ ನಡೆಯನ್ನು ಕನ್ನಡ ಕ್ರಿಯಾ ಸಮಿತಿ ಸ್ವಾಗತಿಸಿದೆ.

ಆದರೆ ಅದರ ಬೆನ್ನಲ್ಲೇ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಈ ವರ್ಷ ನಾಲ್ಕು ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ತೆರೆಯುವುದಾಗಿ ಪ್ರಕಟಣೆ ಹೊರಡಿಸಿರುವುದು ಆಘಾತಕಾರಿ ಸಂಗತಿ.

ಮಾತೃಭಾಷೆ ಶಿಕ್ಷಣ ಮಾಧ್ಯಮವನ್ನು ಬಲವಾಗಿ ಪ್ರತಿಪಾದಿಸುತ್ತಾ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಈ ದ್ವಂದ್ವ ನೀತಿಯನ್ನು ಕನ್ನಡ ಕ್ರಿಯಾ ಸಮಿತಿ ಖಂಡಿಸುತ್ತದೆ ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ್ ತಿಳಿಸಿದ್ದಾರೆ.

ಉಚಿತ ಕಡ್ಡಾಯ ಶಿಕ್ಷಣ ಮಸೂದೆ (2015) ಸಿದ್ದರಾಮಯ್ಯ ನೇತೃತ್ವದ ಸರ್ಕಾರದಿಂದಲೇ ಮಂಡಿತವಾದ, ಸರ್ವ ಪಕ್ಷಗಳಿಂದ ಬೆಂಬಲ ಪಡೆದ ಮಸೂದೆ. 'ಮಗುವನ್ನು ಸಾಕಿ ಸಲಹುವ ತಾಯಿಯಾಗಿ, ಗರ್ಭಪಾತ ಮಾಡಿಸುವ ತಾಯಿಯಾಗಬೇಡಿ' ಎಂದು ಸುದರ್ಶನ್ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಈ ಶೈಕ್ಷಣಿಕ ವರ್ಷದಿಂದಲೇ ನಾಲ್ಕು ಸಾವಿರ ಸರ್ಕಾರಿ ಶಾಲೆಗಳನ್ನು ತೆರೆಯುವ ಆದೇಶವನ್ನು ತಡೆಹಿಡಿಯಬೇಕು. ಉಚಿತ ಕಡ್ಡಾಯ ಶಿಕ್ಷಣ ಮಸೂದೆಗೆ ರಾಷ್ಟ್ರಪತಿಗಳ ಒಪ್ಪಿಗೆ ದೊರೆಯುವವರಿಗೆ ಯಾವುದೇ ಸರ್ಕಾರಿ ಶಾಲೆಯಲ್ಲಿ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯುವುದನ್ನು ಕೈಬಿಡಬೇಕು. ಹೊಸದಾಗಿ ರಾಜ್ಯ ಹಾಗೂ ಸಿಬಿಎಸ್ಸಿ ಪಠ್ಯಕ್ರಮದ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳಿಗೂ ಅನುಮತಿ ಕೊಡುವುದನ್ನು ವಿರೋಧಿಸುತ್ತೇವೆ ಎಂದಿದ್ದಾರೆ.

ಉಚಿತ ಕಡ್ಡಾಯ ಶಿಕ್ಷಣ ಮಸೂದೆಗೆ ಕೇಂದ್ರ ಸರ್ಕಾರ ಆಕ್ಷೇಪಣೆ ಎತ್ತಿದ್ದರೆ, ಅದನ್ನು ವಿಧಾನಸಭೆಯಲ್ಲಿ ಮುಚ್ಚಿಟ್ಟು ತಿರಸ್ಕರಿಸಿದೆ ಎಂದು ತಪ್ಪು ಮಾಹಿತಿ ನೀಡಿದ, ವಿಧಾನಸಭೆಯಲ್ಲಿ ಅಂಗೀಕರಿಸಿದ್ದ ಉಚಿತ ಕಡ್ಡಾಯ ಶಿಕ್ಷಣ ಮಸೂದೆಗೆ ವಿರುದ್ಧವಾಗಿ 'ಶಿಕ್ಷಣ ಮಾಧ್ಯಮ ಪೋಷಕರ ಆಯ್ಕೆಗೆ ಬಿಟ್ಟಿದ್ದು' ಹೇಳಿಕೆ ಕೊಟ್ಟ ಶಿಕ್ಷಣ ಸಚಿವರಿಂದ ರಾಜೀನಾಮೆ ಪಡೆದು 'ಕನ್ನಡ ಉಳಿಸಿ' ಎಂದು ಕನ್ನಡ ಕ್ರಿಯಾ ಸಮಿತಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದೆ.

ಸರಕಾರ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಬಾರದೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ಹೇಳಿರುವುದನ್ನು ಕನ್ನಡ ಕ್ರಿಯಾ ಸಮಿತಿ ಸ್ವಾಗತಿಸುತ್ತದೆ. ಸರ್ಕಾರದ ನೀತಿಯನ್ನು ಕನ್ನಡ ಕ್ರಿಯಾ ಸಮಿತಿ ಖಂಡಿಸುವುದಲ್ಲದೆ, ಹೋರಾಟ ಹಮ್ಮಿಕೊಳ್ಳಲು ಉದ್ದೇಶಿಸಿದೆ ಎಂದು ಅಧ್ಯಕ್ಷ ಮ.ಗು.ಸದಾನಂದಯ್ಯ, ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ್ ಎಚ್ಚರಿಸಿದ್ದಾರೆ.

ಮೂರು ದಿನಗಳ ಅಧ್ಯಯನ ಶಿಬಿರ ಅರ್ಜಿ ಆಹ್ವಾನ

ಮೈಸೂರು, ಜು.7– ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪತ್ರಕರ್ತರಿಗೆ ಕನ್ನಡ ಸಾಹಿತ್ಯ ಎಂಬ ಹೆಸರಿನಲ್ಲಿ 3 ದಿನಗಳ ಅಧ್ಯಯನ ಶಿಬಿರವನ್ನು ಆಗಸ್ಟ್ 3ನೇ ವಾರ ಅಥವಾ ಕೊನೆಯ ವಾರದಲ್ಲಿ ನಡೆಸಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯಿರುವ 20ರಿಂದ 40 ವರ್ಷ ವಯಸ್ಸುಳ್ಳ ಈಗಾಗಲೇ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿರುವವರು, ಪತ್ರಿಕೋದ್ಯಮ ಪದವಿ ಪಡೆದವರು ಹಾಗೂ ಆಸಕ್ತಿಯುಳ್ಳವರು ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಜು.25 ಕೊನೆಯ ದಿನ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ https://sahithyaacademy.karanataka.gov.in ಮೂಲಕ ಅರ್ಜಿ ನಮೂನೆಯನ್ನು ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕರಿಯಪ್ಪ ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜಯೇಂದ್ರರಿಗೆ ಅಭಿನಂದನೆ...




ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಕಚೇರಿಗೆ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ಮುಖಂಡರಾದ ಎನ್.ಪ್ರದೀಪ್ ಕುಮಾರ್, ಕಿಶೋರ್, ಗೋಕುಲ್ ಗೋವರ್ಧನ್, ಗಿರೀಶ್‌ಗೌಡ, ಸುರೇಶ್, ಶಿವು ಇನ್ನಿತರರು ಸ್ವಾಗತಿಸಿ, ಅಭಿನಂದಿಸಿದರು.

ಆರ್‌ಟಿಐ ಮಾಹಿತಿ ಪತ್ರಿಕೆ ಬಿಡುಗಡೆ



ಮೈಸೂರಿನ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರೀ ಭಾಷ್ಯಂ ಸ್ವಾಮೀಜಿ ಸಮ್ಮುಖದಲ್ಲಿ ಆರ್‌ಟಿಐ ಮಾಹಿತಿ ಪತ್ರಿಕೆ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ದೇವಸ್ಥಾನದ ಆಡಳಿತ ಅಧಿಕಾರಿ ಶ್ರೀನಿವಾಸನ್, ಪಂಚಾಯತ್ ಗ್ರಾಮೀಣ ಅಭಿವೃದ್ಧಿ ರೈತರ ಸೇವಾ ಸಮಿತಿ ರಾಜ್ಯಾಧ್ಯಕ್ಷ ಯಾದವ್ ಹರೀಶ್, ಉಪಾಧ್ಯಕ್ಷ ಸತೀಶ್, ಖಜಾಂಚಿ ಮಂಜುಳಾ, ಪ್ರಧಾನ ಕಾರ್ಯದರ್ಶಿ ರವೀಂದ್ರ, ಸಹ ಕಾರ್ಯದರ್ಶಿ ಪಲ್ಲವಿ, ಗೌರವಾಧ್ಯಕ್ಷೆ ಸವಿತಾ, ಸಂಘಟನಾ ಕಾರ್ಯದರ್ಶಿ ರಘೂನ್ನಿ ರಾಣಿ, ರಾಜ್ಯ ಸಂಚಾಲಕರಾದ ರಕ್ತದಾನಿ ಮಂಜು, ನಗರಸಭೆ ಸಮುದಾಯ ಮಹಿಳೆಯರು ಇದ್ದರು.

ರಮೇಶ್‌ಗೆ ಪಿಹೆಚ್.ಡಿ ಪದವಿ



ಮೈಸೂರು,ಜು.7–ಡಾ.ಎಂ.ಎಸ್.ಹೇಮಲತಾ ಅವರ ಮಾರ್ಗದರ್ಶನದಲ್ಲಿ ಕೆ.ಎಲ್.ರಮೇಶ್ ಅವರು ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ ವಿಷಯದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪ್ರೊ.ದೇಜಗೌ ಮನಸು ಮಾಡಿದ್ದರೆ ಇಂಜಿನಿಯರಿಂಗ್ ಇಲ್ಲವೆ ಮೆಡಿಕಲ್ ಕಾಲೇಜು ಸ್ಥಾಪಿಸಬಹುದಿತ್ತು

ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ ಡಾ.ಚೇತನ ಅಭಿಪ್ರಾಯ

ಮೈಸೂರು, ಜು.7(ಬಿಎಲ್‌ಯು)– ನಿವೃತ್ತ ಕುಲಪತಿ ನಾಡೋಜ ಪ್ರೊ.ದೇಜವರೇಗೌಡರು ಮನಸ್ಸು ಮಾಡಿದ್ದರೆ ಮೆಡಿಕಲ್ ಇಲ್ಲವೆ ಇಂಜಿನಿಯರಿಂಗ್ ಕಾಲೇಜು ನಿರ್ಮಾಣ ಮಾಡಬಹುದಿತ್ತು. ಆದರೆ ಗ್ರಾಮೀಣ ಮಕ್ಕಳಿಗೆ ಕೈಗೆಟಕುವಂತಹ ಶಿಕ್ಷಣ ನೀಡಲು ಶಾಲಾ ಕಾಲೇಜು ನಿರ್ಮಾಣ ಮಾಡಿದ್ದರು ಎಂದು ಮೈಸೂರಿನ ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಆರ್.ಚೇತನ ಹೇಳಿದರು.

ನಗರದ ಜಯಲಕ್ಷ್ಮಿಪುರಂನ ಶ್ರೀ ಕುವೆಂಪು ರಂಗಮಂದಿರದಲ್ಲಿ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಹಾಗೂ ಕುವೆಂಪು ವಿದ್ಯಾ ಪರಿಷತ್ ಸಂಯುಕ್ತವಾಗಿ ಆಯೋಜಿಸಿದ್ದ ಪ್ರೊ.ದೇಜಗೌ ಅವರ ಜನ್ಮೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡತನದಲ್ಲಿದ್ದ ಬಹಳಷ್ಟು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದ ಪ್ರೊ.ದೇಜಗೌ ಅವರು ಕೆಲವು ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೇ ಆಶ್ರಯ ನೀಡಿ ವಿದ್ಯಾರ್ಜನೆಗೆ ಅವಕಾಶ ಕಲ್ಪಿಸುತ್ತಿದ್ದರು ಎಂದು ಪ್ರೊ.ದೇ.ಜವರೇಗೌಡರ ಬಡವರ ಪರ ಕಾಳಜಿಯನ್ನು ವಿವರಿಸಿದರು.



ಮೈಸೂರಿನ ಜಯಲಕ್ಷ್ಮಿಪುರಂನ ಕುವೆಂಪು ರಂಗಮಂದಿರದಲ್ಲಿ ಸೋಮವಾರ ಗಣ್ಯರು ನಾಡೋಜ ಪ್ರೊ.ದೇಜಗೌ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಇಂಗ್ಲಿಷ್ ಭಾಷೆ ಬಿಟ್ಟು ಬಿಡಿ, ಕನ್ನಡ ಮಾತ್ರ ಕಲಿಯಿರಿ ಎಂದು ಪ್ರೊ.ದೇ.ಜವರೇಗೌಡ ಎಂದೂ ಹೇಳುತ್ತಿರಲಿಲ್ಲ. ಇಂಗ್ಲಿಷ್ ಭಾಷೆಯನ್ನೂ ಕಲಿಯಿರಿ, ಆದರೆ ಮಾತೃಭಾಷೆ ಕನ್ನಡವನ್ನು ಎಂದಿಗೂ ಮರೆಯಬೇಡಿ ಎಂದು ಸಲಹೆ ನೀಡುತ್ತಿದ್ದರು ಎಂದರು.

ಕನ್ನಡ ಭಾಷೆ ಬಗ್ಗೆ ಅಪಾರ ಅಭಿಮಾನ ಹೊಂದಿದ್ದ ಪ್ರೊ.ದೇ.ಜವರೇಗೌಡರು ಪರ ಭಾಷೆಯ ಬಗ್ಗೆ ಕೀಳರಿಮೆ ಹೊಂದಿರಲಿಲ್ಲ. ಅವರು ಶೂನ್ಯದಿಂದ ಮೇಲೆ ಬಂದ ಸರಳತೆಯ ವ್ಯಕ್ತಿತ್ವ ಹೊಂದಿದ್ದರು. ಯುಗದ ಕವಿ, ಜಗದ ಕವಿ ಕುವೆಂಪು ಅವರ ಅಪ್ಪಟ ಶಿಷ್ಯರಲ್ಲಿ ಒಬ್ಬರಾಗಿದ್ದರು. ತಮ್ಮ ಬದುಕನ್ನು ಕನ್ನಡಕ್ಕಾಗಿ ಮುಡುಪಾಗಿಟ್ಟಿದ್ದರು. ಯಾವುದೇ ಭಾಷೆಯನ್ನು ಕಲಿಯುವಂತೆ ಯಾರ ಮೇಲೂ ಒತ್ತಡ ಹೇರಬೇಡಿ ಎಂದು ಸಲಹೆ ನೀಡುತ್ತಿದ್ದ ಡಾ.ದೇಜಗೌ, ಇಂಗ್ಲಿಷ್ ಕಲಿಯಿರಿ, ಆದರೆ ಮಾತೃಭಾಷೆ ಕನ್ನಡ ಮರೆಯದಿರಿ ಎಂದು ಒತ್ತಿ ಹೇಳುತ್ತಿದ್ದರು ಎಂದರು.

ಬಡತನದಲ್ಲಿ ಬೆಳೆದ ಪ್ರೊ.ದೇಜಗೌ ಅವರು ಗುಡಿಸಲಿನಿಂದ ಗಂಗೋತ್ರಿವರೆಗೆ ಸಾಗಿ ಬಂದರು. ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಜನಪರ ಕೆಲಸ ಮಾಡುವ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ಡಾ.ಚೇತನ ಹೇಳಿದರು.

ಇದೇ ವೇಳೆ ಮಾತನಾಡಿದ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಪದಾಧಿಕಾರಿ ಡಾ.ಕ್ಯಾತನಹಳ್ಳಿ ರಾಮಣ್ಣ, ಮಾನಸ ಗಂಗೋತ್ರಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಎಲ್ಲಾ ವಿಭಾಗಗಳಂತೆ ಸಾಮಾನ್ಯವಾಗಿತ್ತು. ಆದರೆ ಡಾ.ದೇಜಗೌ ಅವರು ಕನ್ನಡ ಅಧ್ಯಯನ ಸಂಸ್ಥೆಗೆ ಸಿರಿವಂತಿಕೆ ತಂದರು.

ತಮಿಳು, ತೆಲುಗು, ಮಲೆಯಾಳಂನಂತೆ ಕನ್ನಡದಲ್ಲೂ ವಿಶ್ವಕೋಶ ತಂದರು. ಭಾಷಾಂತರ ವಿಭಾಗ ಸೇರಿದಂತೆ ಹಲವು ಹೊಸತನ್ನು ಪರಿಚಯಿಸಿ ಕನ್ನಡ ಅಧ್ಯಯನ ಸಂಸ್ಥೆಗೆ ಮೆರುಗು ನೀಡಿದರು. ರಾಜ್ಯದಲ್ಲಿ ಎಲ್ಲೇ ಶಾಸನ ಸಿಕ್ಕಿದರೂ ಅದನ್ನು ಇಲ್ಲಿಗೆ ತಂದು ಪ್ರದರ್ಶಿಸುತ್ತಿದ್ದರು. ತಮ್ಮ ಮನೆಯಲ್ಲೇ ಇರುವ ಬಹಳಷ್ಟು ಹಳೆಯ ವಸ್ತುಗಳನ್ನು ಇಲ್ಲಿ ಪ್ರದರ್ಶನಕ್ಕಿಟ್ಟು ಅದರ ಹಿನ್ನೆಲೆ ವಿವರಿಸುತ್ತಿದ್ದರು. ಇಂತಹ ಮಹಾನ್ ವ್ಯಕ್ತಿಯ ಸ್ಮರಣೆ ಪ್ರತಿ ವರ್ಷ ನಡೆಯಬೇಕು ಎಂದು ಡಾ.ಕ್ಯಾತನಹಳ್ಳಿ ರಾಮಣ್ಣ ಸಲಹೆ ನೀಡಿದರು. ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮತ್ತೊಬ್ಬ ಪದಾಧಿಕಾರಿ ಸಿ.ವೈ.ಪಾರ್ಥಸಾರಥಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಖಾಯಂಪೂರ್ವ ಸೇವಾವಧಿ ಪರಿಗಣಿಸಿ ನಿಶ್ಚಿತ ಪಿಂಚಣಿಗೆ ನೌಕರರ ಒತ್ತಾಯ



ಮುಖ್ಯಮಂತ್ರಿಗಳ ಬಳಿ ಚರ್ಚಿಸಿ ತಮಗೆ ನಿಶ್ಚಿತ ಪಿಂಚಣಿ ಯೋಜನೆ ಜಾರಿಗೊಳಿಸಿ ಕೊಡಲು ಸಹಾಯ ಮಾಡುವಂತೆ ವಿವಿಧ ಇಲಾಖೆ ನೌಕರರು ಸೋಮವಾರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಭೇಟಿ ಮಾಡಿ, ಮನವಿ ಮಾಡಿದರು.


ಮೈಸೂರು, ಜು. 7(ಆರ್‌ಕೆ)– ಪದವಿ ಪೂರ್ವ ವೃತ್ತಿ ಶಿಕ್ಷಣ (ಜೆಓಸಿ) ಇಲಾಖೆಯಿಂದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುವ ನೌಕರರು, ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯನ್ನು ಪರಿಗಣಿಸಿ ತಮಗೆ ನಿಶ್ಚಿತ ಪಿಂಚಣಿ ನೀಡುವಂತೆ ಅಖಿಲ ಕರ್ನಾಟಕ ವೃತ್ತಿ ಶಿಕ್ಷಣ ಇಲಾಖೆಯಿಂದ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡ ನೌಕರರ ಸಂಘವು ಸರ್ಕಾರವನ್ನು ಒತ್ತಾಯಿಸಿದೆ.

ಈ ಸಂಬಂಧ ಇಂದು 100ಕ್ಕೂ ಹೆಚ್ಚು ನೌಕರರು ಸಂಘದ ಅಧ್ಯಕ್ಷ ಕೆ.ಎಸ್.ಸೋಮಶೇಖರ್ ಹಾಗೂ ಕಾರ್ಯದರ್ಶಿ ಗಿರೀಶ್ ನೇತೃತ್ವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಇಂದು ಮೈಸೂರಿನ ನಿವಾಸದಲ್ಲಿ ಭೇಟಿ ಮಾಡಿ, ತಮಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸಿ ಸಮಸ್ಯೆಗಳನ್ನು ನಿವೇದಿಸಿಕೊಳ್ಳಲು ಸಹಾಯ ಮಡುವಂತೆ ಕೋರಿ ಮನವಿ ಪತ್ರ ಸಲ್ಲಿಸಿದರು.

ವೃತ್ತಿ ಶಿಕ್ಷಣ ಇಲಾಖೆಯ ಸುಮಾರು 3,150 ಸಿಬ್ಬಂದಿಯ ಸೇವೆಯನ್ನು 2011ರ ಏಪ್ರಿಲ್ 6ರ ವಿಶೇಷ ಕಾನೂನಿನ್ವಯ ಖಾಯಂಗೊಳಿಸಿ, ಸರ್ಕಾರದ ವಿವಿಧ ಇಲಾಖೆಗಳ ಹಾಗೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿಲೀನಗೊಳಿಸಲಾಯಿತು. ಆದರೆ, ಆ ಸಂದರ್ಭ 15ರಿಂದ 20 ವರ್ಷಗಳ ಖಾಯಂ ಪೂರ್ವ ಸೇವೆಯನ್ನು ನಿಶ್ಚಿತ ಪಿಂಚಣಿಗೆ ಪರಿಗಣಿಸಿಲ್ಲದಿರುವುದರಿಂದ ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸಹಾಯ ಮಾಡುವಂತೆಯೂ ಅವರು ಕೋರಿಕೊಂಡಿದ್ದಾರೆ.

ಮನವಿ ಪತ್ರ ಸ್ವೀಕರಿಸಿದ ಎಂ.ಕೆ.ಸೋಮಶೇಖರ್, ಜುಲೈ 18, 19ರಂದು ಮುಖ್ಯಮಂತ್ರಿಗಳು ಮೈಸೂರಿಗೆ ಆಗಮಿಸಲಿದ್ದು, ಆ ಸಂದರ್ಭ ಭೇಟಿ ಮಾಡಿಸುವುದಾಗಿ ಭರವಸೆ ನೀಡಿದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ...



ಎಂಸಿಡಿಸಿಸಿ ಬ್ಯಾಂಕ್‌ನ ನೂತನ ನಿರ್ದೇಶಕರಾಗಿ ಚುನಾಯಿತರಾದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಎನ್.ಮಹದೇವಸ್ವಾಮಿ, ಚಾಪೆ ನೇಕಾರರ ಕೈಗಾರಿಕಾ ಸಹಕಾರ ಸಂಘದ ನಿರ್ದೇಶಕ ಕಡಕೊಳ ಕುಮಾರಸ್ವಾಮಿ, ಮಾಜಿ ಎಪಿಎಂಸಿ ಸದಸ್ಯ ಮರಿಸ್ವಾಮಿನಾಯಕ್, ಜಯ ಕರ್ನಾಟಕ ಸಂಘಟನೆ ಜಿಲ್ಲಾಧ್ಯಕ್ಷ ಶ್ರೀಧರ್‌ನಾಯಕ್, ಜಯಪುರ ಪಿಎಸಿಸಿ ನಿರ್ದೇಶಕ ರಂಗಸ್ವಾಮಿ, ಯುವ ಮುಖಂಡರಾದ ಇಲವಾಲ ಜೆ.ಕೃಷ್ಣ, ಅಂಕಪ್ಪ, ಮರಂಕಯ್ಯ, ಸುಂದರ್, ಸೋಮ, ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 7–ಯಶಸ್ವಿನಿ ಮಹಿಳಾ ಸಂಘದ ವತಿಯಿಂದ ಬಬ್ಬೂರು ಕಮ್ಮೆ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95 ಹಾಗೂ ಪಿಯುಸಿಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದವರು, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಆಸಕ್ತರು ಜು. 16 ರೊಳಗೆ ಅರ್ಜಿಯನ್ನು ಬಬ್ಬೂರುಕಮ್ಮೆ ಸಂಘದ ಕಚೇರಿಗೆ ತಲುಪಿಸಲು ಕೋರಲಾಗಿದೆ. ಅರ್ಜಿ ಜೊತೆ ಅಂಕಪಟ್ಟಿ ನಕಲು ಲಗತ್ತಿಸಿರಬೇಕು. ಹೆಚ್ಚಿನ ವಿವರಗಳಿಗೆ ಮೊ. 9845272963, 9886636806 ಸಂಪರ್ಕಿಸಬಹುದು.

ರಂಗಭೂಮಿ ಮನುಷ್ಯನಲ್ಲಿ ಜೀವಂತಿಕೆ ತಂದುಕೊಡುತ್ತದೆ

ಬೆಂಗಳೂರು ನಗರ ಕಸಾಪ ಅಧ್ಯಕ್ಷ ಪ್ರಕಾಶ್‌ಮೂರ್ತಿ ಅಭಿಪ್ರಾಯ

ಮೈಸೂರು, ಜು. 7(ಎಸ್‌ಪಿಎನ್)– ರಂಗಭೂಮಿ ಮನುಷ್ಯನಲ್ಲಿ ಜೀವಂತಿಕೆ ತಂದುಕೊಡುತ್ತದೆ. ಅಂತಹ ಜೀವಂತಿಕೆಯನ್ನು ನಾವು ಸಿಜಿಕೆ ಅವರ ರಂಗ ಪಯಣದಲ್ಲಿ ಕಾಣಬಹುದು ಎಂದು ಬೆಂಗಳೂರು ನಗರ ಕಸಾಪ ಅಧ್ಯಕ್ಷ ಪ್ರಕಾಶ್‌ಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ರಂಗಚಂದಿರ ಸಂಸ್ಥೆ, ಜೆಪಿಐಇಆರ್ ರಂಗ ತಂಡದ ಸಹಕಾರದೊಂದಿಗೆ 'ಒಡನಾಡಿ ಬಂಧು ಸಿ.ಜಿ.ಕೃಷ್ಣಮೂರ್ತಿ–75' ಶೀರ್ಷಿಕೆಯಡಿ ಮಾಸದ ನೆನಪು ಸರಣಿ ಕಾರ್ಯಕ್ರಮ–2ರಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಹಾಗೂ ಡಾ.ಎಸ್.ಎಲ್.ಎನ್.ಸ್ವಾಮಿ ರಚಿತ ಪಂಚಕಾವ್ಯಗಳ ಅಭಿನಯ ಗುಚ್ಛ 'ಪಂಚಗವ್ಯ' ನಾಟಕ ಪ್ರದರ್ಶನದಲ್ಲಿ ಭಾಗವಹಿಸಿ ಮಾತನಾಡಿದರು.

70ರ ದಶಕದಲ್ಲಿ ಬಿ.ವಿ.ಕಾರಂತರು ತಮ್ಮ ಸಂಗೀತ ಹಾಗೂ ನಾಟಕಗಳಿಂದ ರಂಗಭೂಮಿಯನ್ನು ಶ್ರೀಮಂತಗೊಳಿಸಿದರು. 80ರ ದಶಕದಲ್ಲಿ ಗಿರೀಶ್ ಕಾರ್ನಾಡ್ ಮತ್ತು ನಾನಾ ಬರಹಗಾರರು ರಂಗಭೂಮಿಯನ್ನು ಇನ್ನೊಂದು ಹಂತಕ್ಕೆ ತಲುಪಿಸಿದರು. 90ರ ದಶಕದಲ್ಲಿ ಸಿಜಿಕೆ ತಮ್ಮ ಬೀದಿ ನಾಟಕಗಳ ಮೂಲಕ ಹೊಸ ಅಲೆ ಸೃಷ್ಟಿಸಿದರು. ಅವರ ಒಡಲಾಳ ನಾಟಕ ದೆಹಲಿಯಲ್ಲಿ ಸುಮಾರು ನೂರು ಪ್ರದರ್ಶನ ಕಂಡ ಪ್ರಸಂಗವನ್ನು ವಿವರಿಸಿದರು.

ಸಿಜಿಕೆ ಸಮುದಾಯ ಹೋರಾಟದಿಂದ ಬೆಳೆದುಬಂದರು. ಅವರ ರಂಗಭೂಮಿ ಚಿಂತನೆಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ವ್ಯಾಪಿಸಿತು. ವಿದ್ಯಾರ್ಥಿಗಳು ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ ಅವರಲ್ಲಿ ಶಿಸ್ತು ಬೆಳೆಯುತ್ತದೆ. ರಂಗ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿ ರಂಗಕಲೆಯ ನಾನಾ ವಿಭಾಗಗಳನ್ನು ಪರಿಚಯ ಮಾಡಿಕೊಳ್ಳಬೇಕು. ಆದ್ದರಿಂದ ಸಮಾನ ಮನಸ್ಕರು ಒಂದೆಡೆ ಸೇರಿ ನಮ್ಮ ಸಂಸ್ಕೃತಿ ಬಗ್ಗೆ ವಿಮರ್ಶೆ ಮಾಡಬೇಕು ಎಂದು ಹೇಳಿದರು.

ಸನ್ಮಾನ: ಈ ವೇಳೆ ಕಲಾ ನಿರ್ದೇಶಕ ಅಕ್ಮಲ್ ಪಾಷಾ, ಲೇಖಕ ಡಾ.ನಂದಾಕುಮಾರಸ್ವಾಮಿ, ಹಿರಿಯ ಕಲಾವಿದ ಜಿ.ಶಿವಾಜಿರಾವ್ ಜಾದವ್, ಹಿರಿಯ ರಂಗಕರ್ಮಿ ಎನ್.ನಾಗರಾಜು ಐತಾಳ್ (ಬೆನಕ), ಕಲಾವಿದೆ ರಶ್ಮಿ ಗೋವಿಂದರಾಜು ಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ಕಿರುತೆರೆ ನಟ ಶಿವಾಜಿರಾವ್ ಯಾದವ್ ಮಾತನಾಡಿದರು. ನಂತರ ಗೋಕುಲ ಸಹೃದಯನ ಏಕವ್ಯಕ್ತಿ ನಾಟಕ 'ಪಂಚಗವ್ಯ' ನಾಟಕ ಪ್ರದರ್ಶನಗೊಂಡಿತು.



'ಒಡನಾಡಿ ಬಂಧು ಸಿ.ಜಿ.ಕೃಷ್ಣಮೂರ್ತಿ–75' ಶೀರ್ಷಿಕೆಯಡಿ ಮಾಸದ ನೆನಪು ಸರಣಿ ಕಾರ್ಯಕ್ರಮ–2ರಲ್ಲಿ ರಂಗ ನಿರ್ದೇಶಕ ಅಕ್ಮಲ್ ಪಾಷಾ, ಲೇಖಕ ಡಾ.ನಂದಾಕುಮಾರಸ್ವಾಮಿ, ಹಿರಿಯ ಕಲಾವಿದ ಜಿ.ಶಿವಾಜಿರಾವ್ ಜಾದವ್, ಹಿರಿಯ ರಂಗಕರ್ಮಿ ಎನ್.ನಾಗರಾಜು ಐತಾಳ್, ಕಲಾವಿದೆ ರಶ್ಮಿ ಗೋವಿಂದರಾಜು ಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಆರ್. ರಮೇಶ್, ಹಿರಿಯ ರಂಗಕರ್ಮಿ ಎಚ್.ಜನಾರ್ಧನ್(ಜನ್ನಿ), ಸಂಚಾರ ವಿಭಾಗದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಎಸ್.ನಾಗರಾಜು, ಡಾ.ಬೇಲೂರು ರಘುನಂದನ್, ರಂಗ ನಿರ್ದೇಶಕ ಮೈಮ್ ರಮೇಶ್, ರಂಗ ಚಂದಿರ ಟ್ರಸ್ಟ್‌ನ ರಾಧಾಕೃಷ್ಣ ಹೆಗಡೆ, ಸಂಚಾಲಕರಾದ ಮಾಗಡಿ ಗಿರೀಶ್, ಶ್ರೀಧರ್‌ಗೌಡ, ಎ.ಆರ್.ಪ್ರಭಾಕರ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಎ.ಎಸ್.ಚಂದ್ರಶೇಖರ್(ಜೆಪಿಓ ಚಂದ್ರು), ಡಾ.ಟಿ.ತ್ಯಾಗರಾಜು, ನಂಜುಂಡಸ್ವಾಮಿ, ದೊಡ್ಡನಿಂಗಪ್ಪ, ದೀಪಕ್ ಸಂಚಲನ, ರಮೇಶ್ ಪಾಲ್ಸಂದ್ರ, ಅಶ್ವಿನಿ, ಡಾ.ಪ್ರಭು, ರಾಜೇಶ್ ತಲಕಾಡು, ಎಂ.ಪಿ.ಹರಿದತ್ತ, ಪು.ಹೊನ್ನಶೆಟ್ಟಿ ಕೋಡಿ ಬೆಳಗೊಳ, ಅಶ್ವಿನಿ ಕುಮಾರ್, ಯಶವಂತ್ ಕುಮಾರ್, ಚಿಂತನ ಚಿತ್ತಾರೆ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್, ರಂಗಾಯನ ರಾಮು, ಹರ್ಷ, ಮರುಡಯ್ಯ, ಚೇತನ್, ಪ್ರವೀಣ್ ಕವಿ ಉಪಸ್ಥಿತರಿದ್ದರು.

ದೇಶ - ವಿದೇಶ

ಟೆಕ್ಸಾಸ್ ಪ್ರವಾಹ: ಸಾವಿನ ಸಂಖ್ಯೆ 79ಕ್ಕೆ ಏರಿಕೆ, ಪತ್ತೆಯಾಗದ 10 ಬಾಲಕಿಯರು



ಕೆರ್ವಿಲ್ಲೆ(ಟೆಕ್ಸಾಸ್): ಶುಕ್ರವಾರ ಸುರಿದ ಭಾರಿ ಮಳೆಯಿಂದಾಗಿ ಉಂಟಾದ ಹಠಾತ್ ಪ್ರವಾಹಕ್ಕೆ ಟೆಕ್ಸಾಸ್ ನಗರದಲ್ಲಿ ಅಪಾರ ಪ್ರಮಾಣ ಹಾನಿಯುಂಟಾಗಿದ್ದು, ಸಾವಿನ ಸಂಖ್ಯೆ 79ಕ್ಕೆ ಏರಿಕೆಯಾಗಿದೆ ಎಂದು ಅಲ್ಲಿನ ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ನದಿ ತೀರದ ಬೇಸಿಗೆ ಶಿಬಿರದಲ್ಲಿದ್ದ 10 ಬಾಲಕಿಯರು ಸೇರಿದಂತೆ ನಾಪತ್ತೆಯಾದ ಹಲವರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಕೆರ್ರಿ ಕೌಂಟಿಯಲ್ಲಿ 28 ಮಕ್ಕಳು ಸೇರಿದಂತೆ 68 ಜನರ ಶವಗಳು ಪತ್ತೆಯಾದರೆ, ಟ್ರಾವಿಸ್, ಬರ್ನೆಟ್, ಕೆಂಡಾಲ್, ಟಾಮ್ ಗ್ರೀನ್ ಮತ್ತು ವಿಲಿಯಮ್ಸನ್ ಕೌಂಟಿಗಳಲ್ಲಿ 10 ಶವಗಳು ಪತ್ತೆಯಾಗಿರುವುದು ವರದಿಯಾಗಿವೆ.

ಮಳೆ ಮುಂದುವರಿಯುವ ಸಾಧ್ಯತೆ ಹೆಚ್ಚಿದ್ದರಿಂದ ಜನರ ಸ್ಥಳಾಂತರಕ್ಕೆ ಸ್ಥಳೀಯ ಆಡಳಿತ ಮುಂದಾಗಿದೆ. ಈಗಾಗಲೇ ಜಲಾವೃತಗೊಂಡಿರುವ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಇನ್ನಷ್ಟು ಹೆಚ್ಚುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿರಿಯಾನಿ, ಶರಬತ್ ಸೇವಿಸಿ ಓರ್ವ ಸಾವು, 70 ಮಂದಿ ಅಸ್ವಸ್ಥ

ಸಹಾರನ್‌ಪುರ(ಉತ್ತರ ಪ್ರದೇಶ): ಜಿಲ್ಲೆಯ ನನೌತ ಪ್ರದೇಶದಲ್ಲಿ ಮೊಹರಂ ಮೆರವಣಿಗೆಯ ವೇಳೆ ಶರಬತ್ ಮತ್ತು ಬಿರಿಯಾನಿ ಸೇವಿಸಿ ಒಬ್ಬ ವ್ಯಕ್ತಿ ಸಾವಿಗೀಡಾಗಿದ್ದು, ಸುಮಾರು 70 ಜನರು ಅಸ್ವಸ್ಥರಾಗಿದ್ದಾರೆ.



ಬಿರಿಯಾನಿ, ಶರಬತ್ ಸೇವಿಸಿದ ನಂತರ ಸುಮಾರು 70 ಮಂದಿ ವಾಂತಿ ಮಾಡಿಕೊಂಡಿದ್ದಾರೆ ಎಂದು ಡಿಸಿ ಮನೀಶ್ ಬನ್ಸಾಲ್ ತಿಳಿಸಿದ್ದಾರೆ. ಅವರನ್ನು ತಕ್ಷಣ ಪ್ರಾಥಮಿಕ ಆರೋಗ್ಯ ಕೇಂದ್ರ, ಜಿಲ್ಲಾಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವಾಗಲೇ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಮೃತ ವ್ಯಕ್ತಿಯನ್ನು ಶಬಿ ಹೈದರ್(60) ಎಂದು ಗುರುತಿಸಲಾಗಿದೆ. ಅಸ್ವಸ್ಥತೆಯು ಆಹಾರ ಅಥವಾ ಪಾನೀಯ ಯಾವುದರಿಂದ ಆಗಿದೆ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಸಹಾರನ್‌ಪುರದ ಮುಖ್ಯ ವೈದ್ಯಕೀಯ ಅಧಿಕಾರಿ ಡಾ.ಪ್ರವೀಣ್ ಕುಮಾರ್ ಹೇಳಿದ್ದಾರೆ. ಆಹಾರ ಮತ್ತು ಪಾನೀಯದ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಸದ್ಯ, 54 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 15 ಮಂದಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ.

ಬ್ರಿಕ್ಸ್ ರಾಷ್ಟ್ರಗಳ ಜೊತೆ ನಿಲ್ಲುವ ದೇಶಗಳಿಗೆ ಡೊನಾಲ್ಡ್ ಟ್ರಂಪ್ 'ಟ್ಯಾಕ್ಸ್ ವಾರ್ನಿಂಗ್'

ನ್ಯೂಯಾರ್ಕ್: ಬ್ರಿಕ್ಸ್ ಗುಂಪಿನ ಅಮೆರಿಕನ್ ವಿರೋಧಿ ನೀತಿಗಳೊಂದಿಗೆ ಹೊಂದಿಕೆಯಾಗುವ ದೇಶಗಳ ಮೇಲೆ ಹೆಚ್ಚುವರಿಯಾಗಿ ಶೇ.10ರಷ್ಟು ಸುಂಕವನ್ನು ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ.



ಬ್ರಿಕ್ಸ್ ಬಣವು ಟ್ರಂಪ್ ಅವರನ್ನು ಹೆಸರಿಸದೆ ಸುಂಕ ಹೆಚ್ಚಳವನ್ನು ಖಂಡಿಸಿದ ನಂತರ ಅವರ ಹೇಳಿಕೆಗಳು ಬಂದಿವೆ. ಇಂದು 17ನೇ ಬ್ರಿಕ್ಸ್ ಶೃಂಗಸಭೆಗಾಗಿ ಬ್ರಿಕ್ಸ್ ನಾಯಕರು ಬ್ರೆಜಿಲ್‌ನಲ್ಲಿ ಸಭೆ ಸೇರುತ್ತಿದ್ದಾರೆ. ಬ್ರಿಕ್ಸ್‌ನ ಅಮೆರಿಕನ್ ವಿರೋಧಿ ನೀತಿಗಳೊಂದಿಗೆ ತಮ್ಮನ್ನು ಹೊಂದಿಸಿಕೊಳ್ಳುವ ಯಾವುದೇ ದೇಶಕ್ಕೆ ಹೆಚ್ಚುವರಿಯಾಗಿ ಶೇ.10ರಷ್ಟು ಸುಂಕ ವಿಧಿಸಲಾಗುತ್ತದೆ. ಈ ನೀತಿಗೆ ಯಾವುದೇ ವಿನಾಯಿತಿ ಇರುವುದಿಲ್ಲ. ಈ ವಿಷಯದ ಬಗ್ಗೆ ನಿಮ್ಮ ಗಮನಕ್ಕೆ ಧನ್ಯವಾದಗಳು! ಎಂದು ಟ್ರಂಪ್ ತಡರಾತ್ರಿ ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಮೂಲತಃ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾವನ್ನು ಒಳಗೊಂಡಿದ್ದ ಬ್ರಿಕ್ಸ್, 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಅನ್ನು ಸೇರಿಸಲು ವಿಸ್ತರಿಸಿತು, ಇಂಡೋನೇಷ್ಯಾ 2025ರಲ್ಲಿ ಸೇರುತ್ತದೆ.

ಭಾರತೀಯರಿಗೆ 23 ಲಕ್ಷ ರೂ.ಗೆ ಯುಎಇ ಗೋಲ್ಡನ್ ವೀಸಾ

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್ ಸರ್ಕಾರವು ಹೊಸ ರೀತಿಯ ಗೋಲ್ಡನ್ ವೀಸಾ ಪರಿಚಯಿಸಿದ್ದು, ಇದು ದುಬೈನಲ್ಲಿ ಆಸ್ತಿ ಖರೀದಿ ಅಥವಾ ವ್ಯವಹಾರದಲ್ಲಿ ದೊಡ್ಡ ಮೊತ್ತವನ್ನು ಹೂಡಿಕೆ ಮಾಡುವ ಪ್ರಸ್ತುತ ಗೋಲ್ಡನ್ ವೀಸಾಗಿಂತ ಭಿನ್ನವಾಗಿದೆ ಮತ್ತು ಕೆಲವು ಷರತ್ತುಗಳನ್ನೊಳಗೊಂಡಿದೆ. ಇಲ್ಲಿಯವರೆಗೆ ದುಬೈನ ಗೋಲ್ಡನ್ ವೀಸಾ ಪಡೆಯಲು ಭಾರತೀಯರು ಕನಿಷ್ಠ 2 ಮಿಲಿಯನ್ ದಿರ್ಹಮ್(ಅಂದರೆ 4.66 ಕೋಟಿ ರೂ.) ಮೌಲ್ಯದ ಆಸ್ತಿ ಖರೀದಿ ಮಾಡಬೇಕಿತ್ತು. ಇಲ್ಲವೆ ಆ ದೇಶದಲ್ಲಿ ದೊಡ್ಡ ಮೊತ್ತದ ಹಣ ಹೂಡಿಕೆ ಮಾಡಬೇಕಾಗಿತ್ತು. ಈಗ ಯುಎಇ ಸರ್ಕಾರ ಈ ಷರತ್ತುಗಳನ್ನು ತೆಗೆದು ಹಾಕಿದ್ದು, ಹೊಸ ನಾಮನಿರ್ದೇಶನ ಆಧಾರಿತ ವೀಸಾ ನೀತಿಯಡಿಯಲ್ಲಿ, ಭಾರತೀಯರು ಈಗ ಸುಮಾರು 23.30 ಲಕ್ಷ ರೂ. ಶುಲ್ಕ ಪಾವತಿಸಿ, ಜೀವಿತಾವಧಿಯ ಗೋಲ್ಡನ್ ವೀಸಾ ಪಡೆಯಬಹುದು. ಈ ವೀಸಾದ ಪೈಲಟ್ ಯೋಜನೆಗೆ ಮೊದಲ ಹಂತದಲ್ಲಿ ಭಾರತ ಮತ್ತು ಬಾಂಗ್ಲಾದೇಶವನ್ನು ಆಯ್ಕೆ ಮಾಡಲಾಗಿದೆ. ಭಾರತದಲ್ಲಿ ನಾಮನಿರ್ದೇಶನ ಆಧಾರಿತ ಗೋಲ್ಡನ್ ವೀಸಾದ ಆರಂಭಿಕ ರೂಪವನ್ನು ಪರೀಕ್ಷಿಸಲು ರಾಯದ್ ಗ್ರೂಪ್ ಎಂಬ ಸಲಹಾ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ.

ಇಂಡೋನೇಷ್ಯಾ: ದೈತ್ಯ ಹೆಬ್ಬಾವಿನ ಹೊಟ್ಟೆಯಲ್ಲಿತ್ತು ರೈತನ ಶವ!

ಇಂಡೋನೇಷ್ಯಾ: ಏಕಾಏಕಿ ನಾಪತ್ತೆಯಾಗಿದ್ದ 63 ವರ್ಷದ ರೈತರೊಬ್ಬರ ಶವ ದೈತ್ಯ ಹೆಬ್ಬಾವಿನ ಹೊಟ್ಟೆಯಲ್ಲಿ ಪತ್ತೆಯಾಗಿರುವ ಘಟನೆ ಇಂಡೋನೇಷ್ಯಾದ ದಕ್ಷಿಣ ಬುಟಾನ್ ಜಿಲ್ಲೆಯಲ್ಲಿ ನಡೆದಿದೆ. ಅಂಟಾರಾ ವರದಿ ಪ್ರಕಾರ, ರೈತರೊಬ್ಬರು ತೋಟಕ್ಕೆ ಹೋದ ವರು ಹಿಂದಿರುಗಿ ಬಂದಿರಲಿಲ್ಲ. ಮಧ್ಯಾಹ್ನ 2.30ರ ಸುಮಾರಿಗೆ ತೋಟದಲ್ಲಿ ಹೆಬ್ಬಾವು ಒದ್ದಾಡುತ್ತಿರು ವುದನ್ನು ಕಂಡ ಜನರು, ಯಾವುದೋ ದೊಡ್ಡ ಹಾವನ್ನು ನುಂಗಿರಬೇಕು ಎಂದು ತಿಳಿದಿದ್ದರು. ನಂತರ ಹಾವನ್ನು ಕೊಂದು ಹೊಟ್ಟೆ ಬಗೆದು ನೋಡಿದಾಗ ಅಲ್ಲಿ ರೈತರ ಶವ ಕಂಡಿದೆ. ಬಳಿಕ ಪೊಲೀಸರಿಗೆ ಕರೆ ಮಾಡಿ ವಿಷ ತಿಳಿಸಿ, ಬಳಿಕ ರೈತರ ಶವವನ್ನು ಮನೆಗೆ ಸಾಗಿಸಿದ್ದಾರೆ. ಮುಚ್ಚಿ ಹಾಕಲು ಮೇಲಾಧಿಕಾರಿ ಸಿಬ್ಬಂದಿಗೆ ಲಂಚ ನೀಡಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ಪ್ರದೇಶದಲ್ಲಿ ಮನುಷ್ಯರನ್ನು ಹೆಬ್ಬಾವು ನುಂಗಿದ ಮೊದಲ ಘಟನೆ ಇದಾಗಿದೆ. ಈ ಗ್ರಾಮದಲ್ಲಿ ಮಳೆಗಾಲದ ಸಂದರ್ಭದಲ್ಲಿ ಹಲವು ಬಾರಿ ಜಾನುವಾರುಗಳ ಮೇಲೆ ದಾಳಿ ಮಾಡುವ ಘಟನೆಗಳು ಆಗಾಗ ವರದಿಯಾಗಿತ್ತಿರುತ್ತದೆ. ರೈತ ತೋಟದಿಂದ ಹಿಂದಿರುಗದ ಕಾರಣ ಕುಟುಂಬವು ನಾಪತ್ತೆ ದೂರನ್ನು ದಾಖಲಿಸಿತ್ತು.



ಅಸಹಾಯಕ ಕುಟುಂಬವನ್ನು ಕಾಡುತ್ತಿರುವ ಗುಡ್ಡದ ಭೂತ!

ಗುಡ್ಡ ಕುಸಿಯುವ ಆತಂಕದಲ್ಲೇ ಜೀವ ಕೈಯಲ್ಲಿಡಿದು ಜೀವಿಸುತ್ತಿರುವ ಮನೆಯವರು

ಜಿಲ್ಲಾಡಳಿತ, ಸರ್ಕಾರಕ್ಕೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಿಲ್ಲ

ಮಡಿಕೇರಿ,ಜು.7– ಮನೆ ಹಿಂಬದಿಯ ಗುಡ್ಡವೊಂದು ಯಾವುದೇ ಕ್ಷಣದಲ್ಲಿ ಕುಸಿಯುವ ಹಂತದಲ್ಲಿದ್ದರೂ ಅಸಹಾಯಕ ಕುಟುಂಬವೊಂದು ಬೇರೆ ದಾರಿ ಕಾಣದೆ ಕಳೆದ 7 ವರ್ಷಗಳಿಂದ ಜೀವ ಕೈಯಲ್ಲಿ ಹಿಡಿದು ದಿನ ದೂಡುತ್ತಿದೆ. ಸಿಮೆಂಟ್ ಶೀಟ್‌ನ ಹೊದಿಕೆ ಹೊದ್ದ ಮನೆಯ ಗೋಡೆಗಳು ಈಗಾಗಲೇ ಬಿರುಕು ಬಿಟ್ಟಿದ್ದು, ಬಡಪಾಯಿ ಕುಟುಂಬವನ್ನು 'ಗುಡ್ಡದ ಭೂತ' ಬೆಂಬಿಡದೆ ಕಾಡುತ್ತಿದೆ. ಪ್ರಾಕೃತಿಕ ವಿಕೋಪ ಸಂತ್ರಸ್ಥರಿಗೆಂದು ನಿರ್ಮಿಸಲಾದ ಮನೆಯನ್ನು ನೀಡದೇ ಆಡಳಿತ ವ್ಯವಸ್ಥೆ ಬಡ ಕುಟುಂಬದ ನೆಮ್ಮದಿಯನ್ನು ಕಸಿದಿದೆ. ಇಂತಹ ಅದೆಷ್ಟೋ ಪ್ರಕರಣಗಳು ಜಿಲ್ಲೆಯಲ್ಲಿದ್ದು, ಈ ಬಡ ಕುಟುಂಬ ಒಂದು ಮೂಕ ಸಾಕ್ಷಿ ಮಾತ್ರವೇ.



ಕುಸಿಯುವ ಹಂತದಲ್ಲಿರುವ ಮನೆ ಬಳಿಯ ಗುಡ್ಡ.

2018ರಲ್ಲಿ ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ಮಡಿಕೇರಿ ಮಂಗಳಾದೇವಿ ನಗರದಲ್ಲಿ ಬರೆ ಕುಸಿದಿದ್ದು, ಇಲ್ಲಿ ವಾಸವಿದ್ದ ಬಹಳಷ್ಟು ಮಂದಿ ಮನೆಗಳನ್ನು ಕಳೆದು ಕೊಂಡಿದ್ದರು. ಕಳೆದ 25 ವರ್ಷಗಳಿಂದ ಮಂಗಳಾದೇವಿ ನಗರದಲ್ಲಿ ವಾಸವಿರುವ ಗೃಹ ರಕ್ಷಕ ದಳದ ದಿನ ಕೂಲಿ ನೌಕರಳಾದ ಕೆ.ಎಫ್.ಲವಿ ಎಂಬುವರಿಗೆ ಸೇರಿದ ಮನೆಯೂ ಅಂದು ಅಪಾಯಕ್ಕೆ ಸಿಲುಕಿ ಸಂತ್ರಸ್ಥರಾಗಿದ್ದರು. ಸರಕಾರ ಪ್ರಾಕೃತಿಕ ವಿಕೋಪ ಸಂತ್ರಸ್ಥರಿಗೆ ನಿರ್ಮಿಸಿರುವ ಮನೆಗಳ ಪೈಕಿ ಒಂದು ಮನೆಯನ್ನು ತಮಗೆ ಮಂಜೂರು ಮಾಡುವಂತೆ ಲವಿ ಅವರು ನಗರ ಸಭೆ, ಜಿಲ್ಲಾಡಳಿತ, ಸ್ಥಳೀಯ ಶಾಸಕರು ಸಹಿತ ಆಡಳಿತ ವ್ಯವಸ್ಥೆಗೆ ಮನವಿ ಮಾಡಿದ್ದರು. ಆದರೂ ಇಂದಿಗೂ ಮನೆ ಮಾತ್ರ ಮಂಜೂರಾಗಿಲ್ಲ. ಇದೀಗ ಸುರಿದ ಮಳೆಯಿಂದ ಮನೆ ಹಿಂಬದಿಯ ಗುಡ್ಡ ಕುಸಿದಿದ್ದು, ನಗರಸಭೆ ವತಿಯಿಂದ ಗುಡ್ಡಕ್ಕೆ ಪ್ಲಾಸ್ಟಿಕ್ ಹೊದಿಕೆ ಹಾಸಲಾಗಿದೆ. ಮನೆಯ ಗೋಡೆಗೂ, ಗುಡ್ಡಕ್ಕೂ ಕೇವಲ ಎರಡು ಅಡಿ ಅಂತರ ಮಾತ್ರವೇ ಇದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಮಳೆ ಸುರಿಯಲಿದ್ದು, ಮತ್ತೆ ಗುಡ್ಡ ಕುಸಿದರೆ ಲವಿ ಅವರ ಮನೆ ಉಳಿಯುವ ಯಾವುದೇ ಸಾಧ್ಯತೆ ಕಂಡು ಬರುತ್ತಿಲ್ಲ.

ಸರಕಾರ ಪ್ರಕೃತಿ ವಿಕೋಪ ಸಂತ್ರಸ್ಥರಿಗಾಗಿ ಮಾದಾಪುರದ ಜಂಬೂರು ಬಾಣೆ, ಗಾಳಿಬೀಡು, ಕೆ.ನಿಡುಗಣೆ, ಹಾಕತ್ತೂರು ಕಡೆಗಳಲ್ಲಿ 800ಕ್ಕೂ ಅಧಿಕ ಮನೆಗಳನ್ನು ನಿರ್ಮಿಸಿಕೊಟ್ಟಿತ್ತು ಇದರಲ್ಲಿ ಮಂಗಳಾದೇವಿ ನಗರ ಕೆಲವರಿಗೆ ಮನೆ ದೊರಕಿದ್ದು, ಅಪಾಯದ ಅಂಚಿನಲ್ಲಿ ವಾಸಿಸುವ ಹಲವರಿಗೆ ಇದುವರೆಗೂ ಮನೆಗಳು ಸಿಕ್ಕಿಲ್ಲ. ಹೀಗೆ ಮನೆ ಸಿಗದ ಲವಿ ಕುಟುಂಬ ಈಗಲೂ ಮಂಗಳಾದೇವಿ ನಗರದಲ್ಲಿರುವ ತಮ್ಮ ಹಳೆಯ ಮನೆಯಲ್ಲೇ ಜೀವ ಕೈಯಲ್ಲಿ ಹಿಡಿದು ಬದುಕು ಸಾಗಿಸುತ್ತಿದೆ. ಕುಸಿಯುವ ಹಂತದಲ್ಲಿರುವ ಗುಡ್ಡದ ಮೇಲಿನ ಕಾಲುದಾರಿಯಲ್ಲಿ ನಡೆದುಕೊಂಡು ಲವಿ ಅವರ ಮನೆಗೆ ತೆರಳಬೇಕಿದೆ. ಮನೆಯ ಪುಟ್ಟ ಕೊಠಡಿಯಲ್ಲಿ ಗುಡ್ಡ

> 2018ರಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿದಾಗ ಮನೆಯ ಅಂಗಳ, ಮನೆ ಗೋಡೆಗಳು ಬಿರುಕು ಬಿಟ್ಟಿದ್ದವು. ಅಂದಿನಿಂದಲೇ ಬೇರೆ ಮನೆ ನೀಡಿ ಎಂದು ಆಡಳಿತ ವ್ಯವಸ್ಥೆಗೆ ಮನವಿ ಸಲ್ಲಿಸಿದ್ದೆ. ಆದರೆ ಇಂದಿಗೂ ಯಾವ ಮನೆಯೂ ಮಂಜೂರಾಗಿಲ್ಲ. ಜು.2ರ ರಾತ್ರಿ 10 ಗಂಟೆಗೆ ಮನೆಯ ಹಿಂಬದಿಯ ಗುಡ್ಡ ಕುಸಿದು ಬಿದ್ದಿದೆ. ಇದೀಗ ಮನೆ ಖಾಲಿ ಮಾಡಿ ಎಂದು ಹೇಳುತ್ತಿದ್ದಾರೆ. ಆದರೆ ನಾವು ಹೋಗೋದಾದ್ರು ಎಲ್ಲಿಗೆ? ಇದೇ ಮನೆಯಲ್ಲಿ ಮಣ್ಣಾಗೋದು ಮಾತ್ರವೇ ಇದೀಗ ಉಳಿದಿರೋದು ನಮಗೆ.
> – ಕೆ.ಎಫ್.ಲವಿ, ಗೃಹ ರಕ್ಷಕ ದಳ ಸಿಬ್ಬಂದಿ.

ಕುಸಿಯುವ ಭೀತಿ ನಡುವೆಯೇ ಲವಿ ಅವರು ತಮ್ಮ ಸಹೋದರನೊಂದಿಗೆ ಜೀವ ಕೈಯಲ್ಲಿ ಹಿಡಿದು ದಿನದೂಡುತ್ತಿದ್ದಾರೆ. ಗೃಹ ರಕ್ಷಕ ದಳದ ದಿನ ಗೂಲಿ ಸಿಬ್ಬಂದಿಯಾಗಿ ಮಡಿಕೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಲವಿ ಅವರು, ಸಿಗುವ ಅಲ್ಪ ಸಂಬಳದಲ್ಲೇ ಜೀವನ ನಿರ್ವಹಣೆ ಮಾಡಬೇಕಿದೆ.

ಆರ್ಥಿಕವಾಗಿ ತೀರಾ ಹಿಂದುಳಿದಿದ್ದು, ಬೇರೆ ಕಡೆ ಬಾಡಿಗೆ ಮನೆ ಮಾಡಿಕೊಂಡು ತೆರಳುವ ಸ್ಥಿತಿಯಲ್ಲಿಲ್ಲದ ಲವಿ, ಅತಂತ್ರ ಸ್ಥಿತಿಯಲ್ಲಿದ್ದಾರೆ. ಬಾಡಿಗೆ ಮನೆಗೆ ತೆರಳಲಾಗದೇ ಅತ್ತ ಸರಕಾರದ ಮನೆಯೂ ದೊರಕದೇ ತ್ರಿಶಂಕು ಸ್ಥಿತಿಯಲ್ಲಿರುವ ಲವಿ 'ಬದುಕಿದರೂ ಇಲ್ಲಿಯೇ ಸತ್ತರೂ ಇಲ್ಲಿಯೇ' ಎಂದು ಹತಾಶೆ ವ್ಯಕ್ತಪಡಿಸಿದ್ದಾರೆ. ಮಂಗಳಾದೇವಿನಗರ ವಾಸಕ್ಕೆ ಯೋಗ್ಯವಿಲ್ಲ ಎಂದು ಈ ಹಿಂದೆಯೇ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾದ ವಿಜ್ಞಾನಿಗಳು ಸರಕಾರ ಮತ್ತು ಜಿಲ್ಲಾಡಳಿತಕ್ಕೆ ವರದಿಯನ್ನೂ ನೀಡಿದೆ.

ಪ್ರಕೃತಿ ವಿಕೋಪ ಸಂತ್ರಸ್ಥರಿಗೆಂದು ನಿರ್ಮಿಸಲಾದ ಮನೆಗಳು ಉಳ್ಳವರ ಪಾಲಾಗಿದೆ ಎಂಬ ಆರೋಪಗಳ ನಡುವೆಯೇ ಕೆಲವು ಮನೆಗಳಿಗೆ ಬೀಗ ಜಡಿಯಲಾಗಿದೆ. ಸಂತ್ರಸ್ಥರೆಂದು ಮನೆ ಪಡೆದುಕೊಂಡವರು ಬೇರೆಡೆ ವಾಸಿಸುತ್ತಿದ್ದಾರೆ ಎಂಬ ಸಾರ್ವಜನಿಕರ ಆರೋಪಗಳಿವೆ. ಸರಕಾರ ನೀಡಿದ ಮನೆಗಳನ್ನು ಕೆಲವರು ಹಿಂದಿರುಗಿಸಿ ಮೂಲ ಸ್ಥಾನಕ್ಕೆ ಆಗಮಿಸಿದ ಹತ್ತಾರು ನಿದರ್ಶನಗಳು ಕೂಡ ಇವೆ ಇನ್ನು ಜಂಬೂರು ಬಾಣೆಯಲ್ಲಿ ಇಂದಿಗೂ ನೂರಾರು ಮನೆಗಳು ಖಾಲಿ ಬಿದ್ದಿದ್ದು, ಯಾವ ಪ್ರದೇಶದಲ್ಲಾದರೂ ಮನೆ ನೀಡಿ ಎಂದು ಅರ್ಜಿ ಸಲ್ಲಿಸಿದ ಸಂತ್ರಸ್ಥರು ಇಂದಿಗೂ ಸೂರಿಗಾಗಿ ಕಾದು ಕುಳಿತಿದ್ದಾರೆ.

ಇಂತಹ ಅರ್ಜಿದಾರರ ಪೈಕಿ ಲವಿ ಕೂಡ ಒಬ್ಬರಾಗಿದ್ದು, ಇಂತಹವರಿಗೆ ಮನೆ ಸಿಗದಿರುವುದು ನಮ್ಮ ಆಡಳಿತ ವ್ಯವಸ್ಥೆಯ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇನ್ನಾದರೂ ಸಂತ್ರಸ್ಥರಿಗೆಂದು ನಿರ್ಮಿಸಲಾದ ಮನೆಯೊಂದನ್ನು ಈ ಅಸಹಾಯಕ ಬಡ ಕುಟುಂಬಕ್ಕೆ ನೀಡುವುದರ ಮೂಲಕ ನೆಮ್ಮದಿಯಿಂದ ಬದುಕು ಸಾಗಿಸಲು ಆಡಳಿತ ವ್ಯವಸ್ಥೆ ಅನುಕೂಲ ಕಲ್ಪಿಸಬೇಕಿದೆ.

ಸೇನೆಯಿಂದ ನಿವೃತ್ತರಾಗಿ ಗ್ರಾಮಕ್ಕೆ ಆಗಮಿಸಿದ ಯೋಧನಿಗೆ ಆತ್ಮೀಯ ಸ್ವಾಗತ



ನಿವೃತ್ತ ಯೋಧ ಮಂಜುನಾಥ್ ಮತ್ತು ಅವರ ಪತ್ನಿಯನ್ನು ಸನ್ಮಾನಿಸಲಾಯಿತು.

ಮಡಿಕೇರಿ,ಜು.7– ಕೇಂದ್ರಿಯ ಮೀಸಲು ಪಡೆಯಲ್ಲಿ 37 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿ ಗ್ರಾಮಕ್ಕೆ ಆಗಮಿಸಿದ ಯೋಧನನ್ನು ಮೈಲಾತಪುರ ಗ್ರಾಮಸ್ಥರು ಬರಮಾಡಿಕೊಂಡು ಗೌರವಿಸಿದರು. ಆಲೂರು ಸಿದ್ದಾಪುರ ಬಳಿಯ ಮೈಲಾತಪುರ ಗ್ರಾಮದ ನಿವೃತ್ತ ಯೋಧ ಮಂಜುನಾಥ್ ಮತ್ತು ಅವರ ಪತ್ನಿಯನ್ನು ಸನ್ಮಾನಿಸಲಾಯಿತು. ಇವರೊಂದಿಗೆ ಅಕ್ಕ ಪಕ್ಕದ ಗ್ರಾಮಗಳ ಮಾಜಿ ಸೈನಿಕರನ್ನು ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಯೋಧ ಮಂಜುನಾಥ್, ದೇಶ ಸೇವೆ ಮಾಡುವ ಭಾಗ್ಯ ನನಗೆ ಸಿಕ್ಕಿರುವುದಕ್ಕೆ ಹೆಮ್ಮೆ ಪಡುತ್ತೇನೆ. 37 ವರ್ಷಗಳಲ್ಲಿ ಹಲವು ಭಾರಿ ಪ್ರಾಣ ಕಳೆದು ಕೊಳ್ಳಬೇಕಾದಂತಹ ಪರಿಸ್ಥಿತಿ ಎದುರಾಗಿತ್ತು. ನಮ್ಮ ಕಣ್ಣು ಮುಂದೆಯೇ ಹಲವು ಸಹೋದ್ಯೋಗಿಗಳು ಜೀವ ತೆತ್ತಿದ್ದಾರೆ. ಇವೆಲ್ಲಾ ನನ್ನ ವೃತ್ತಿ ಬದುಕಿನ ಅತ್ಯಂತ ದುಃಖದ ಕ್ಷಣಗಳು ಎಂದು ಭಾವುಕರಾಗಿ ನುಡಿದರು. ತಮ್ಮ ಬಾಲ್ಯ ಸ್ನೇಹಿತರು, ಗ್ರಾಮಸ್ಥರು ವೃತ್ತಿ ಬದುಕಿನ ಸಿಹಿ, ಕಹಿ ಘಟನೆಗಳನ್ನು ಮೆಲುಕು ಹಾಕಿದರು. ತಪೋಕ್ಷೇತ್ರ ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ ಮಾತನಾಡಿ, ಈ ದೇಶದ ಸೈನಿಕರ ತ್ಯಾಗದಿಂದ ನಾವುಗಳು ನೆಮ್ಮದಿಯಿಂದ ಬದುಕಲು ಸಾಧ್ಯವಾಗಿದೆ. ಆದ್ದರಿಂದ ನಾವು ಸೈನಿಕರು ಮತ್ತು ಮಾಜಿ ಸೈನಿಕರನ್ನು ಗೌರವ ಭಾವನೆಯಿಂದ ಕಾಣ ಬೇಕು ಎಂದರು.

ಮೈಲಾತಪುರ ಸಣ್ಣೆಗೌಡರ ಕುಟುಂಬ ರಾಷ್ಟ್ರ ರಕ್ಷಣೆಗೆ ಮಂಜುನಾಥ್ ಹಾಗೂ ಧರ್ಮದ ರಕ್ಷಣೆಗೆ ಶಿಡಿಗಳಲೆ ಮಠದ ಸ್ವಾಮೀಜಿಯಂತಹ ಎರಡು ಜನರನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಶಿಡಿಗಳಲೆ ಮಠದ ಶ್ರೀ ಇಮ್ಮಡಿ ಶಿವಲಿಂಗ ಸ್ವಾಮೀಜಿ ಮಾತನಾಡಿ, ಅನ್ನದಾತ ರೈತರು ಹಾಗು ಸೈನಿಕರು ಒಂದೇ ನಾಣ್ಯದ ಎರಡು ಮುಖವಿದ್ದಂತೆ ಇಬ್ಬರಿಗೂ ಯಾವುದೇ ಚ್ಯುತಿ ಬಾರದಂತೆ ಗೌರವ ಸಲ್ಲಬೇಕೆಂದರು.

ಇದೇ ಸಂದರ್ಭ ಮಾಜಿ ಸೈನಿಕರಾದ ಅಂಕನಹಳ್ಳಿ ಮಹೇಶ್, ಸೋಮಣ್ಣ, ಶೆಟ್ಟಿಹಳ್ಳಿ ಜಗದೀಶ್ ಹಾಗೂ ನಿವೃತ್ತ ಶಿಕ್ಷಕ ಬಡುಬನಹಳ್ಳಿಯ ಷಣ್ಮುಖಯ್ಯ ಅವರುಗಳನ್ನು ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಮುಖರಾದ ಬಸಪ್ಪ, ಪರಮೇಶ್, ಕೃಷಿಕ ಬಸಪ್ಪ, ಶಿಕ್ಷಕರಾದ ಕುಮಾರ್, ಸುರೇಶ್ ಹಾಜರಿದ್ದರು.

ಮಡಿಕೇರಿ ವಕೀಲರ ಸಂಘದ ಅಧ್ಯಕ್ಷರಾಗಿ ಜೋಸೆಫ್ ಆಯ್ಕೆ

ಮಡಿಕೇರಿ, ಜು.7– ಮಡಿಕೇರಿ ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಸಿ.ಟಿ.ಜೋಸೆಫ್, ಕಾರ್ಯದರ್ಶಿಯಾಗಿ ಅಚ್ಚಾಂಡಿರ ಪವನ್ ಪೆಮ್ಮಯ್ಯ ಹಾಗೂ ಉಪಾಧ್ಯಕ್ಷರಾಗಿ ಸಂಜಯ್ ರಾಜ್ ಆಯ್ಕೆಯಾಗಿದ್ದಾರೆ.



ಖಜಾಂಚಿಯಾಗಿ ಮೀನಾ ಕುಮಾರಿ, ಜಂಟಿ ಕಾರ್ಯದರ್ಶಿಯಾಗಿ ಡಿ.ಕೆ. ರಾಜೇಶ್, ನಿರ್ದೇಶಕರಾಗಿ ಕಪಿಲ್ ಕುಮಾರ್, ಜಿ.ಸಿ.ರಮೇಶ್, ಕೇದಂಬಾಡಿ ಚಂದ್ರಶೇಖರ್, ಪಿ.ಎಂ.ಚೆಗಂಪ್ಪ, ಭಾನು ಪ್ರಕಾಶ್, ಅಭಿತ್ ಅಪ್ಪಯ್ಯ, ಲತಾ ಕುಮಾರಿ, ದಿವ್ಯ ನಂಜಪ್ಪ ಹಾಗೂ ಲಿಖಿತಾ ಆಯ್ಕೆಯಾದರು. ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ನಾಪೋಕ್ಲುವಿನಲ್ಲಿ ಸಿಎನ್‌ಸಿಯಿಂದ ಮಾನವ ಸರಪಳಿ

ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಗೆ ಆಗ್ರಹ



ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮದಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿದರು.

ನಾಪೋಕ್ಲು, ಜು.7– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಸೋಮವಾರ ಇಲ್ಲಿನ ಬಸ್ ನಿಲ್ದಾಣದಲ್ಲಿ ಬಳಿ ರಸ್ತೆ ತಡೆ ನಡೆಸುವ ಮೂಲಕ ಏಳನೇ ಮಾನವ ಸರಪಳಿ ನಿರ್ಮಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಹಕ್ಕೊತ್ತಾಯ ಮಂಡಿಸಿದರು.

ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಮತ್ತು ಎಸ್ಟಿ ವರ್ಗೀಕರಣ ಸೇರಿದಂತೆ 2026ರ ರಾಷ್ಟ್ರೀಯ ಜನಗಣತಿಯೊಂದಿಗೆ ಜನಾಂಗವಾರು ಮಾಹಿತಿ ಕಲೆಹಾಕುವ ಸಂದರ್ಭ ಆದಿಮ ಸಂಜಾತ ಏಕ–ಜನಾಂಗೀಯ (ಆಯನಿಮಿಕ್ಸ್) ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದರು.

ಸಂಸತ್ ಹಾಗೂ ವಿಧಾನಸಭೆಯಲ್ಲಿ ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂಬ ಬೇಡಿಕೆ ಸೇರಿದಂತೆ ಇನ್ನಿತರ ಬೇಡಿಕೆ ಬಗ್ಗೆ ಒತ್ತಾಯಿಸಿ ಜನಜಾಗೃತಿ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ, ಕೇಟೋಳಿರ ಹರೀಶ್ ಪೂವಯ್ಯ, ಕುಂಡಿಯೊಳಂಡ ಮುದ್ದಯ್ಯ ಮುದ್ದಯ್ಯ, ಕಲಿಯಂಡ ಪ್ರಕಾಶ್, ಕುಲ್ಲೇಟಿರ ಅರುಣ್ ಬೇಬಾ, ಬೊಪ್ಪಂಡ ಬೋಳ್ಳಮ್ಮನಾಣಯ್ಯ ಸೇರಿದಂತೆ ಜನಾಂಗಬಾಂಧವರು ಭಾಗವಹಿಸಿದ್ದರು.

ದಸರಾ ಉತ್ಸವ ಸಮಿತಿಗೆ ಅಧ್ಯಕ್ಷರಾಗಿ ಜಗದೀಶ್ ಆಯ್ಕೆ

ಮಡಿಕೇರಿ,ಜು.7– ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಶ್ರೀ ಕೋಟೆ ಮಾರಿಯಮ್ಮ ಯುವಕ ಮಿತ್ರ ಮಂಡಳಿಯ ದಸರಾ ಉತ್ಸವ ಸಮಿತಿಯ ನೂತನ ಅಧ್ಯಕ್ಷರಾಗಿ ಬಿ.ಕೆ. ಜಗದೀಶ್, ಪ್ರಧಾನ ಕಾರ್ಯದರ್ಶಿಯಾಗಿ ಮುದ್ದುರಾಜು ಬಿ.ಎನ್ ಹಾಗೂ ಖಜಾಂಚಿಯಾಗಿ ಪ್ರದೀಪ್ ಆಯ್ಕೆಯಾಗಿದ್ದಾರೆ.



ದೇವಾಲಯದ ಆವರಣದಲ್ಲಿ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭ ಮಾತನಾಡಿದ ನೂತನ ಅಧ್ಯಕ್ಷ ಬಿ.ಕೆ.ಜಗದೀಶ್ ಶ್ರೀ ಕೋಟೆ ಮಾರಿಯಮ್ಮ ಯುವಕ ಮಿತ್ರ ಮಂಡಳಿ 50ನೇ ವರ್ಷದ ದಸರಾ ಆಚರಣೆಯ ಸಂಭ್ರಮದಲ್ಲಿದ್ದು ಎಲ್ಲರ ಸಹಕಾರದೊಂದಿಗೆ ಅದ್ದೂರಿಯಾಗಿ ದಸರಾ ಹಬ್ಬವನ್ನು ಆಚರಿಸಲಾಗುವುದೆಂದರು.

ತೋಟಕ್ಕೆ ನುಗ್ಗಿ ಮರಕ್ಕೆ ಡಿಕ್ಕಿ ಹೊಡೆದ ಬಸ್

33 ಮಂದಿ ಪ್ರಾಣಾಪಾಯದಿಂದ ಪಾರು

ವಿರಾಜಪೇಟೆ, ಜು.7– ಕೆಎಸ್‌ಆರ್‌ಟಿಸಿ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿರುವ ತೋಟದೊಳಗೆ ನುಗ್ಗಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸುಮಾರು 33 ಮಂದಿ ಸಣ್ಣ–ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಇಲ್ಲಿಗೆ ಸಮೀಪ ಸಂಭವಿಸಿದೆ.



ಮಡಿಕೇರಿಯಿಂದ ವಿರಾಜಪೇಟೆ ಮಾರ್ಗವಾಗಿ ಬೆಂಗಳೂರು–ಕೋಲಾರಕ್ಕೆ ಹೋಗುತ್ತಿದ್ದ (ಕೆ.ಎ.07,ಎಫ್–1892) ಬಸ್ ವಿರಾಜಪೇಟೆಯಿಂದ 7–10ಕ್ಕೆ ಹೊರಟು 10 ನಿಮಿಷದಲ್ಲಿ ಕಾವೇರಿ ಕಾಲೇಜು ಬಳಿಯ ಇಳಿಜಾರು ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬಲಬದಿಯ ತೋಟಕ್ಕೆ ನುಗ್ಗಿರುವ ಕಾರಣ ಪ್ರಯಾಣಿಕರಿಗೆ ಸಂಣ್ಣ ಪುಟ್ಟ ಗಾಯಗಳಾಗಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾಡುಪ್ರಾಣಿ ಹಾವಳಿ ತಡೆಯಿರಿ, ತಕ್ಷಣ ಬೆಳೆ ಪರಿಹಾರ ಕೊಡಿ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ



ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೋಮವಾರ ಚಾಮರಾಜನಗರದಲ್ಲಿ ಕೆಡಿಪಿ ಸಭೆ ನಡೆಸಿದರು.

ಚಾಮರಾಜನಗರ, ಜು.7– ಜಿಲ್ಲೆಯಲ್ಲಿ ಕಾಡು ಪ್ರಾಣಿಗಳ ಹಾವಳಿ ತಡೆಯುವ ಮೂಲಕ ಜನರಿಂದ ಬರುವ ದೂರುಗಳಿಗೆ ಆದ್ಯತೆ ನೀಡಿ. ಅದೇ ರೀತಿ ತಕ್ಷಣ ಬೆಳೆ ಹಾನಿ ಪರಿಹಾರ ನೀಡುವ ಮೂಲಕ ಸಾರ್ವಜನಿಕರ ಸಮಸ್ಯೆಗಳಿಗೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಬೇಕು ಎಂದು ಪಶುಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅರಣ್ಯ ಇಲಾಖೆ ಸಂಬಂಧ ಸಾರ್ವಜನಿಕರಿಂದ ಹೆಚ್ಚು ದೂರುಗಳು ಬರುತ್ತಿವೆ. ಗ್ರಾಮಗಳಲ್ಲಿ ಚಿರತೆ ಕಾಣಿಸಿಕೊಂಡ ಬಗ್ಗೆ ಗ್ರಾಮಸ್ಥರಿಂದ ಅರಣ್ಯ ಇಲಾಖೆಗೆ ಮಾಹಿತಿ ಬರುತ್ತಿದೆ ಇಂತಹ ಸಂದರ್ಭಗಳಲ್ಲಿ ನಿರ್ಲಕ್ಷ್ಯ ವಹಿಸದೇ ಅರಣ್ಯ ಅಧಿಕಾರಿಗಳು ಕೂಡಲೇ ಧಾವಿಸಬೇಕು. ಕಾಡು ಪ್ರಾಣಿಗಳಿಂದ ನಾಶವಾಗುವ ಬೆಳೆಗೆ ಪರಿಹಾರ ನೀಡಲು ಶೀಘ್ರ ಕ್ರಮ ವಹಿಸಬೇಕು ಎಂದರು.

ರೈತ ಸಂಘಟನೆಗಳು ವಿವಿಧ ಬೇಡಿಕೆಗಳನ್ನು ಈಡೇರಿಸಲು ಹಾಗೂ ಸಮಸ್ಯೆ ಪರಿಹರಿಸುವ ಸಂಬಂಧ ಸಲ್ಲಿಸಲಾಗಿರುವ ಮನವಿ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದ ಸಚಿವರು ಬಾಳೆ ಬೆಳೆಗಾರರಿಗೆ ಯಾವುದೇ ತಾರತಮ್ಯವಾಗದಂತೆ ಉತ್ತಮ ದರ ಸಿಗಬೇಕು. ಈ ನಿಟ್ಟಿನಲ್ಲಿ ಎಪಿಎಂಸಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಭೆ ಕರೆದು ಸಮಸ್ಯೆ ಇತ್ಯರ್ಥ ಮಾಡಬೇಕೆಂದು ನಿರ್ದೇಶನ ನೀಡಿದರು.

ಕೆಎಸ್‌ಆರ್‌ಟಿಸಿ ಬಸ್ಸುಗಳ ಸೇವೆ ಗ್ರಾಮಾಂತರ ಪ್ರದೇಶಗಳಲ್ಲಿ ಸಮರ್ಪಕವಾಗಿ ಇರಬೇಕು. ಶಾಲಾ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಬಸ್ಸುಗಳ ನಿಯೋಜನೆಯಾಗಬೇಕು. ಈ ಸಂಬಂಧ ಸಭೆ ಕರೆದು ಅನುಕೂಲ ಮಾಡಿಕೊಡುವ ದಿಸೆಯಲ್ಲಿ ಮುಂದಾಗುವಂತೆ ಸಚಿವರು ತಿಳಿಸಿದರು.

ಹೋಟೆಲ್, ಬೇಕರಿ, ರೆಸ್ಟೋರೆಂಟ್‌ಗಳಲ್ಲಿ ಶುಚಿತ್ವ ಕಾಪಾಡಿಕೊಳ್ಳದೆ ಇರುವ ಬಗ್ಗೆ ದೂರು ಬಂದಿದೆ. ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಬೇಕು. ಶುದ್ದತೆ, ನೈರ್ಮಲ್ಯ ಇಲ್ಲದಿದ್ದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು ಎಂದರು.

ಆರೋಗ್ಯ ಇಲಾಖೆ ಪರಿಶೀಲನೆ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು ಆರೋಗ್ಯ ಸೇವೆ ಎಲ್ಲ ಜನರಿಗೂ ಉತ್ತಮವಾಗಿ ತಲುಪಬೇಕು. ಹಾಡಿಗಳಿಗೆ ವೈದ್ಯರ ತಂಡವೇ ಭೇಟಿ ನೀಡಿ ಆರೋಗ್ಯ ತಪಾಸಣೆ, ಚಿಕಿತ್ಸೆಯಂತಹ ಔಷದೋಪಚಾರಗಳನ್ನು ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಕೆ. ವೆಂಕಟೇಶ್ ಹೇಳಿದರು. ಶಿಕ್ಷಣ ಇಲಾಖೆ ಪ್ರಗತಿ ಪರಿಶೀಲನಾ ವೇಳೆ ವಿಧಾನಪರಿಷತ್ ಸದಸ್ಯರಾದ ಕೆ. ವಿವೇಕಾನಂದ ಅವರು ಮಾತನಾಡಿ ಶಿಕ್ಷಕರ ಕೊರತೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪೂರ್ಣ ಮಾಹಿತಿ ಒದಗಿಸಬೇಕು. ಈ ಸಂಬಂಧ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಸಹಾಯಕವಾಗುತ್ತದೆ. ಶಾಲಾ ನಿರ್ಮಾಣಕ್ಕೆ ದಾನ ನೀಡಿರುವ ನಿವೇಶನ, ಕಟ್ಟಡ, ಇನ್ನಿತರ ವಿವರಗಳನ್ನು ಒದಗಿಸಬೇಕು ಎಂದರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್ ಮಾತನಾಡಿದರು.

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಎಂ.ವಿ.ವೆಂಕಟೇಶ್ ಮಾತನಾಡಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಬೇಕು. ಅಂತರ್ಜಲ ಹೆಚ್ಚಳ ಮಾಡುವ ಕಾಮಗಾರಿಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಸುದೀರ್ಘವಾಗಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲಿಸಿದರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷರಾದ ಪಿ.ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಅಧಿಕಾರೇತರ ಕೆಡಿಪಿ ಸದಸ್ಯರಾದ ಸಯ್ಯದ್ ಮುಸ್ಸೈಯೀಬ್, ಎಂ.ಶಂಕರಪ್ಪ, ಕ.ರಾ.ಸ.ಕೃ ಮತ್ತು ಗ್ರಾ.ಅ ಬ್ಯಾಂಕ್ ಮೈಸೂರಿನ ನಿರ್ದೇಶಕ ಎಂ. ಮಹದೇವಣ್ಣ ಸಭೆಯಲ್ಲಿ ಉಪಸ್ಥಿತರಿದ್ದರು.

ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್ ಅವರಿಂದ ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಭಗೀರಥ ಮಹರ್ಷಿ, ಶ್ರೀ ಕನಕದಾಸರ ಪುತ್ಥಳಿ ನಿರ್ಮಾಣ

ಜಿಲ್ಲಾ ಉಸ್ತುವಾರಿ ಸಚಿವರಿಂದ ಅರುಣ್ ಯೋಗಿರಾಜ್‌ಗೆ ಸನ್ಮಾನ



ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸುತ್ತಿರುವ ಸಚಿವ ಕೆ. ವೆಂಕಟೇಶ್

ಚಾಮರಾಜನಗರ, ಜು.7– ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಭಗೀರಥ ಮಹರ್ಷಿ ಹಾಗೂ ಶ್ರೀ ಕನಕದಾಸರ ಪುತ್ಥಳಿಗಳನ್ನು ಅಯೋಧ್ಯೆಯ ಶ್ರೀರಾಮಲಲ್ಲಾ ಶಿಲ್ಪದ ನಿರ್ಮಾತೃ ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್ ಅವರು ನಿರ್ಮಿಸಲಿದ್ದು ಇವರನ್ನು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಸನ್ಮಾನಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಸನ್ಮಾನಿಸುವ ಮೂಲಕ ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಭಗೀರಥ ಮಹರ್ಷಿ ಹಾಗೂ ಶ್ರೀ ಕನಕದಾಸರ ಪುತ್ಥಳಿಗಳ ನಿರ್ಮಾಣಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಲಾಯಿತು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ನಂಜುಂಡಯ್ಯ, ಇನ್ನಿತರ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಭಗೀರಥ ಮಹರ್ಷಿ ಹಾಗೂ ಶ್ರೀ ಕನಕದಾಸರ ಪುತ್ಥಳಿಗಳ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಗುದ್ದಲಿ ಪೂಜೆ ನೆರವೇರಿಸಿದ್ದರು.

ಚಾಮರಾಜನಗರದಲ್ಲಿ ದಸರಾ ಆಚರಣೆಗೆ ಒತ್ತಾಯಿಸಿ ಪ್ರತಿಭಟನೆ



ಈ ಬಾರಿ ದಸರಾ ಆಚರಿಸುವಂತೆ ಆಗ್ರಹಿಸಿ ಜಿಲ್ಲಾ ಕಲಾವಿದರ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಜು.7– ಕಳೆದ 13 ವರ್ಷಗಳಿಂದ ವೈಭವಯುತವಾಗಿ ನಡೆಸಲಾಗುತ್ತಿದ್ದ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವವನ್ನು ಈ ಬಾರಿಯೂ ನಡೆಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಜಿಲ್ಲಾ ಕಲಾವಿದರ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಜಾನಪದ ಕಲಾವಿದರು, ಒಕ್ಕೂಟದ ಸದಸ್ಯರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಅಲ್ಲಿಂದ ಮೆರವಣಿಗೆ ಮೂಲಕ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ಬಳಿಕ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಜಿಲ್ಲಾ ದಸರಾ ಮುಂದುವರಿಸಬೇಕು ಎಂದು ಆಗ್ರಹಿಸಿದರು.

2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಸಿದ್ದರಾಮಯ್ಯ ಅವರು ಚಾಮರಾಜನಗರ ದಸರಾ ಆರಂಭಿಸಿದರು. ಆದರೆ, ಈಗ ಇದೇ ಸಿದ್ದರಾಮಯ್ಯ ಅವರು ಚಾಮರಾಜನಗರದಲ್ಲಿ ದಸರಾ ಆಚರಣೆ ಬೇಡ ಎಂದು ಹೇಳುವ ಮೂಲಕ ಜಿಲ್ಲೆಯ ಜನರಿಗೆ, ಕಲಾವಿದರಿಗೆ ನೋವು ಮತ್ತು ಅವಕಾಶ ವಂಚಿತರಾಗುವಂತೆ ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಾನಪದ ಕಲೆಗಳ ತವರೂರಾಗಿರುವ ಜಿಲ್ಲೆಯಲ್ಲಿ ಸಾವಿರಕ್ಕೂ ಹೆಚ್ಚು ಕಲಾವಿದರು ಇರುವುದರಿಂದ ಇಲ್ಲಿ ದಸರಾ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಈ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ದಸರಾ ಆಚರಣೆಗೆ ಕ್ರಮವಹಿಸಲಾಗುವುದು ಎಂದರು. ಬಳಿಕ ಪ್ರತಿಭಟನೆ ಅಂತ್ಯಗೊಂಡಿತು. ಪ್ರತಿಭಟನೆಯಲ್ಲಿ ಕಲಾವಿದರಾದ ಸೋಮಶೇಖರ್ ಬಿಸಲ್ವಾಡಿ, ನರಸಿಂಹಮೂರ್ತಿ, ಮಹೇಶ್, ಕಲೆ ನಟರಾಜ್, ಶಿವಶಂಕರ, ಜಯಕುಮಾರ, ಸಿದ್ದು, ಚಿತ್ರ ಬಿಳಿಗಿರಿ, ವೆಂಕಟರಮಣ ಸ್ವಾಮಿ, ಶಿವಣ್ಣ, ರಾಮಣ್ಣ, ಹೊನ್ನಮ್ಮ, ಚಿನ್ನಮ್ಮ, ತುಳಸಮ್ಮ, ಪ್ರವೀಣ್, ಗಟಂ ಕೃಷ್ಣ, ಗುರುರಾಜು ಸೇರಿದಂತೆ ಇತರರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಬ್ಯಾಗ್, ನೋಟ್‌ಬುಕ್ ವಿತರಣೆ

ಚಾಮರಾಜನಗರ, ಜು.7–ನಗರದ ಯೂತ್ ಫಾರ್ ಸೇವಾ ಮತ್ತು ಬೆಂಗಳೂರಿನ ಟೆಕ್ಸಸ್ ಇನ್‌ಟ್ರುಮೆಂಟ್‌ನಿಂದ ಜಿಲ್ಲೆಯ 10 ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಬ್ಯಾಗ್, ನೋಟ್‌ಬುಕ್ ಮತ್ತು ಶಿಕ್ಷಕರಿಗೆ ನೀರಿನ ಬಾಟಲ್ ವಿತರಿಸಲಾಯಿತು. ಸಂಸ್ಥೆಗಳು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಸಂಸ್ಥೆಗಳ ಸದಸ್ಯರು ಪಣ್ಯದಹುಂಡಿ, ಶಿವಪುರ, ಉತ್ತುವಳ್ಳಿ, ಉಡಿಗಾಲ, ಕೊತ್ತಲವಾಡಿ, ದೊಡ್ಡರಾಯಪೇಟೆ, ನಾಗವಳ್ಳಿ, ಹರದನಹಳ್ಳಿ ಹಾಗೂ ಬಂಡಿಗೆರೆ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸವಲತ್ತು ವಿತರಿಸಿದರು.

ನಮಗೆ ಕುಡಿಯೋಕೆ ನೀರು ಕೊಡಿ: ಮುಖ್ಯಮಂತ್ರಿಗೆ ವಿದ್ಯಾರ್ಥಿನಿ ಪತ್ರ

ಚಾಮರಾಜನಗರ, ಜು.7– ಕುಡಿಯುವ ನೀರಿಗಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ವಿದ್ಯಾರ್ಥಿನಿ ಪತ್ರ ಬರೆದು ನಮ್ಮೂರಲ್ಲಿ ನೀರಿಲ್ಲ, ಮಳೆ ಬಂದು ತುಂಬಾ ದಿನಗಳಾಯ್ತು ಎಂದು ತಮ್ಮ ಸಮಸ್ಯೆ ಹೇಳಿಕೊಂಡಿದ್ದಾಳೆ.



ತಂದೆ–ತಾಯಿ ನೀರಿಲ್ಲದೇ ದೂರದ ಊರಿಗೆ ಹೋಗಿ ಕೆಲಸ ಮಾಡ್ತಾರೆ. ಪ್ರಾಣಿ ಪಕ್ಷಿಗಳಿಗೂ ಕುಡಿಯಲು ನೀರು ಸಿಗ್ತಿಲ್ಲ ಎಂದು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ರಾಮಾಪುರ ಗ್ರಾ.ಪಂ. ವ್ಯಾಪ್ತಿಯ ಕೆಂಪಯ್ಯನಹಟ್ಟಿ ಗ್ರಾಮದ ವಿದ್ಯಾರ್ಥಿನಿ ವರ್ಣಿಕಾ ಪತ್ರ ಬರೆದು ಅಳಲು ತೋಡಿಕೊಂಡಿದ್ದಾರೆ.

ರಾಜ್ಯದಲ್ಲೆಡೆ ಬಹುತೇಕ ಜಲಾಶಯಗಳು ಭರ್ತಿಯಾಗಿವೆ. ಆದರೆ, ಚಾಮರಾಜನಗರ ಜಿಲ್ಲೆಯ ರಾಮಾಪುರ ಹೋಬಳಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಶುರುವಾಗಿದೆ. ಮಳೆ ಕೊರತೆಯಿಂದ ಅಂತರ್ಜಲ ಕುಸಿತವಾಗಿದೆ. ಕೃಷಿ ಬಿಟ್ಟು ವಲಸೆ ಹೋಗಬೇಕಾದ ಪರಿಸ್ಥಿತಿ ಬಂದಿದೆ ಎಂದು ತಂದೆ–ತಾಯಿಗಳ ಪರಿಸ್ಥಿತಿಗೆ ಮನನೊಂದು ಸಿಎಂಗೆ ಈಕೆ ಪತ್ರ ಬರೆದಿದ್ದಾರೆ.

ರಾಜಚಾರಿ ನಿಧನ

ಬೇಗೂರು: ಸಮೀಪದ ಹಾಲಹಳ್ಳಿ ಗ್ರಾಮದ ವಿಶ್ವ ಕರ್ಮ ಸಮಾಜದ ಹಿರಿಯ ಮುಖಂಡ ರಾಜಚಾರಿ ಅಲಿಯಾಸ್ ಸೈಕಲ್ ರಾಜ(73) ನಿಧನರಾದರು.



ಮೃತರು ಪತ್ನಿ ಗ್ರಾಪಂ ಸದಸ್ಯೆ ಗೌರಮ್ಮ, ನಾಲ್ವರು ಸಹೋದರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಜಮೀನಿನಲ್ಲಿ ನಡೆಯಿತು. ರಾಜಚಾರಿ ನಿಧನಕ್ಕೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್.ನಂಜುಂಡಪ್ರಸಾದ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಎಂ.ಮುನಿರಾಜು, ಕರ್ನಾಟಕ ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್.ನಂದಕುಮಾರ್ ಸಂತಾಪ ಸೂಚಿಸಿದ್ದಾರೆ.

ದಾಕ್ಷಾಯಣಮ್ಮ



ಚಾಮರಾಜನಗರ: ತಾಲೂಕಿನ ವಿ.ಸಿ.ಹೊಸೂರು ಗ್ರಾಮದ ಶ್ರೀಮತಿ ದಾಕ್ಷಾಯಣಮ್ಮ (83) ದಿವಂಗತ ಎಚ್.ಎಲ್.ಪುಟ್ಟ ನಂಜಪ್ಪನವರ ಧರ್ಮಪತ್ನಿ ಸೋಮವಾರ ನಿಧನರಾದರು.

ಮೃತರು ಪುತ್ರರಾದ ರೈತ ಸಂಘದ ಎಚ್.ಪಿ. ನಾಗೇಂದ್ರಸ್ವಾಮಿ, ಎಚ್.ಪಿ. ಪ್ರಸಾದ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ವಿ.ಸಿ.ಹೊಸೂರಿನಲ್ಲಿ ನೆರವೇರುವುದು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಐಸಿಸಿ ನೂತನ ಸಿಇಒ ಆಗಿ ಸಂಜೋಗ್ ಗುಪ್ತಾ ನೇಮಕ



ದುಬೈ: ಭಾರತೀಯ ಮಾಧ್ಯಮದ ಅನುಭವಿ ಸಂಜೋಗ್ ಗುಪ್ತಾ ಅವರನ್ನು ಜಯ್ ಶಾ ನೇತೃತ್ವದ ಅಂತರ ರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಹೊಸ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಆಗಿ ನೇಮಿಸಲಾಗಿದೆ. ಆಸ್ಟ್ರೇಲಿಯಾದ ಜೆಫ್ ಅಲಾರ್ಡೈಸ್ ಅವರ ಜಾಗಕ್ಕೆ ಗುಪ್ತಾ ನೇಮಕವಾಗಿದ್ದಾರೆ. ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿ ಚಾಂಪಿಯನ್ಸ್ ಟ್ರೋಫಿಗೆ ಮುಂಚಿತವಾಗಿ ಜೆಫ್ ಅಲಾರ್ಡೈಸ್ ಈ ವರ್ಷದ ಆರಂಭದಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಇದಕ್ಕೂ ಮೊದಲು ಅವರು 4 ವರ್ಷಗಳ ಕಾಲ ಈ ಹುದ್ದೆಯನ್ನು ಅಲಂಕರಿಸಿದ್ದರು.

ಸಂಜೋಗ್ ಗುಪ್ತಾ ಪ್ರಸ್ತುತ ಜಿಯೋ ಸ್ಟಾರ್‌ನಲ್ಲಿ ಸಿಇಒ (ಕ್ರೀಡೆ ಮತ್ತು ನೇರ ಅನುಭವ) ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಎರಡು ದಶಕಗಳಿಗೂ ಹೆಚ್ಚು ಕಾಲ ವಿವಿಧ ಕಾರ್ಯಗಳ ಅನುಭವವಿದೆ. ಸಂಜೋಗ್ ಗುಪ್ತಾ ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮ ಹೊಸ ಪಾತ್ರವನ್ನು ವಹಿಸಿಕೊಳ್ಳಲಿದ್ದಾರೆ. ಸಂಜೋಗ್ ಗುಪ್ತಾ ಪತ್ರಕರ್ತರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ಅವರು 2010ರಲ್ಲಿ ಸ್ಟಾರ್ ಇಂಡಿಯಾ (ಈಗ ಜಿಯೋಸ್ಟಾರ್) ಸೇರಿದರು. 2020ರಲ್ಲಿ ಡಿಸ್ನಿ ಮತ್ತು ಸ್ಟಾರ್ ಇಂಡಿಯಾದಲ್ಲಿ ಕ್ರೀಡಾ ಮುಖ್ಯಸ್ಥರಾಗಿ ನೇಮಕಗೊಂಡರು.

ಸ್ಮಾರ್ಟ್ ಮೀಟರ್ ಪಕ್ಕದ ರಾಜ್ಯದಲ್ಲಿ 900 ರೂ. ಇಲ್ಯಾಕೆ 10 ಸಾವಿರ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಪ್ರಶ್ನೆ

ಬೆಂಗಳೂರು, ಜು. 7– ಬೆಸ್ಕಾಂನ ಸ್ಮಾರ್ಟ್ ಮೀಟರ್ ಕಡ್ಡಾಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್, ಪ್ರತಿಕ್ರಿಯಿಸಲು ಸರ್ಕಾರಕ್ಕೆ ಸೂಚನೆ ನೀಡಿದೆ. ಸ್ಮಾರ್ಟ್ ಮೀಟರ್ ಸಂಬಂಧ ಬೆಸ್ಕಾಂ ಕ್ರಮ ಪ್ರಶ್ನಿಸಿ ಜಯಲಕ್ಷ್ಮೀ ಎಂಬುರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಪಕ್ಕದ ರಾಜ್ಯದಲ್ಲಿ 900 ರೂಪಾಯಿ ಇದೆ. ಆದರೆ ಇಲ್ಯಾಕೆ (ಕರ್ನಾಟಕ) 10 ಸಾವಿರ ರೂಪಾಯಿ ಎಂದು ಪ್ರಶ್ನಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಲು ಸರ್ಕಾರಕ್ಕೆ ಸೂಚಿಸಿರುವ ಹೈಕೋರ್ಟ್, ಮುಂದಿನ ವಿಚಾರಣೆಯನ್ನು ಜುಲೈ 9ಕ್ಕೆ ಮುಂದೂಡಿದೆ.

ರಾಜ್ಯ ಸರ್ಕಾರದ ಪರ ಎಜಿ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದ್ದು, ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್. ಹೊಸ ವಿದ್ಯುತ್ ಸಂಪರ್ಕಕ್ಕೆ ಪೋಸ್ಟ್ ಪೇಯ್ಡ್ ಸ್ಮಾರ್ಟ್ ಮೀಟರ್. ಇನ್ನು ಹೊಸ ಗ್ರಾಹಕರಿಗೆ ಮಾತ್ರ ಈ ಸ್ಮಾರ್ಟ್ ಮೀಟರ್ ಕಡ್ಡಾಯ ಎಂದು ತಿಳಿಸಿದರು.

ಪ್ರತಿವಾದ ಮಂಡಿಸಿದ ಅರ್ಜಿದಾರ ಜಯಲಕ್ಷ್ಮೀ ಪರ ವಕೀಲ ಲಕ್ಷ್ಮೀ ಐಯ್ಯಂಗಾರ್, 3 ಫೇಸ್ ಸ್ಮಾರ್ಟ್ ಮೀಟರ್‌ಗೆ 10 ಸಾವಿರ ವಿಧಿಸಲಾಗುತ್ತಿದೆ. ಪ್ರತಿ ತಿಂಗಳು ಗುತ್ತಿಗೆದಾರ 75 ರೂಪಾಯಿ ರಾಜಶ್ರೀ ಎಲೆಕ್ಟ್ರಿಕಲ್ಸ್‌ಗೆ ನೀಡಬೇಕಾಗಿದೆ ಎಂದರು.

ಈ ವಾದ ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ, ಗ್ರಾಹಕರಿಗೆ ಗೊಂದಲ ಉಂಟುಮಾಡುವ ನೀತಿ ಏಕೆ ರೂಪಿಸಿದ್ದೀರಿ. ನೆರೆ ರಾಜ್ಯಗಳಿಗಿಂತ ನಮ್ಮ ಗ್ರಾಹಕರಿಗೆ ದರ ಏರಿಕೆ ಹೊಡೆತ ಬೀಳಬಾರದು. ಪಕ್ಕದ ರಾಜ್ಯದಲ್ಲಿ 900 ರೂಪಾಯಿ. ಇಲ್ಯಾಕೆ 10 ಸಾವಿರ ರೂಪಾಯಿ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದ್ದು, ಈ ಬಗ್ಗೆ ಜುಲೈ 9ರಂದು ಪ್ರತಿಕ್ರಯಿಸಲು ಸೂಚನೆ ನೀಡಿದೆ.

ಗ್ರಾಹಕರ ನ್ಯಾಯಾಲಯದಿಂದ ತೆಲುಗು ನಟ ಮಹೇಶ್ ಬಾಬುಗೆ ನೋಟಿಸ್



ಹೈದರಾಬಾದ್: ರಿಯಲ್ ಎಸ್ಟೇಟ್ ಕಂಪನಿ ಸಾಯಿ ಸೂರ್ಯ ಡೆವಲಪರ್ಸ್‌ನ ಬ್ರಾಂಡ್ ಅಂಬಾಸಿಡರ್ ಆಗಿರುವ ತೆಲುಗು ನಟ ಮಹೇಶ್ ಬಾಬು ಅವರಿಗೆ ಕಂಪನಿ ವಿರುದ್ಧದ ವಂಚನೆ ಪ್ರಕರಣವೊಂದರಲ್ಲಿ ರಂಗಾರೆಡ್ಡಿ ಜಿಲ್ಲಾ ಗ್ರಾಹಕ ಆಯೋಗವು ನೋಟಿಸ್ ಜಾರಿ ಮಾಡಿದ್ದು, ಅವರನ್ನು ಮೂರನೇ ಪ್ರತಿವಾದಿಯನ್ನಾಗಿ ಹೆಸರಿಸಿದೆ.

ಪ್ರಕರಣದ ಮೂವರು ಪ್ರತಿವಾದಿಗಳಿಗೂ ಲೀಗಲ್ ನೋಟಿಸ್ ನೀಡಲಾಗಿದೆ. ರಿಯಲ್ ಎಸ್ಟೇಟ್ ಕಂಪನಿಯ ಭರವಸೆಗಳನ್ನು ನಂಬಿ ವೈದ್ಯೆ ಮತ್ತು ಇನ್ನೊಬ್ಬ ವ್ಯಕ್ತಿ ಬಾಲಾಪುರದಲ್ಲಿ ಪ್ಲಾಟ್‌ಗಳನ್ನು ಖರೀದಿಸಲು 34.80 ಲಕ್ಷ ಪಾವತಿಸಿದ್ದಾರೆ. ಪ್ರಚಾರದ ಪೋಸ್ಟರ್‌ನಲ್ಲಿ ಮಹೇಶ್ ಬಾಬು ಅವರ ಛಾಯಾಚಿತ್ರ ಕಂಡು ಆಕರ್ಷಿತರಾಗಿ ಪ್ಲಾಟ್ ಖರೀದಿಸಲು ಹಣ ಪಾವತಿಸಿದ್ದೆವು ಎಂದು ಅವರು ಹೇಳಿದ್ದಾರೆ. ಪ್ಲಾಟ್ ನೀಡಲು ಕಂಪನಿ ವಿಫಲವಾದ ಹಿನ್ನೆಲೆ ಖರೀದಿದಾರರು ಮರುಪಾವತಿಗೆ ಒತ್ತಾಯಿಸಿದ್ದಾರೆ. ಎರಡನೇ ಪ್ರತಿವಾದಿಯು ಆರ್ಥಿಕ ತೊಂದರೆಯನ್ನು ಉಲ್ಲೇಖಿಸಿ ಕಂತುಗಳಲ್ಲಿ ಕೇವಲ 15 ಲಕ್ಷ ಹಿಂದಿರುಗಿಸಿದ್ದಾರೆ. ಉಳಿದ ಹಣ ನೀಡದೇ ಇದ್ದ ಕಾರಣ ಖರೀದಿದಾರರು ಗ್ರಾಹಕರ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಇದೇ ಏಪ್ರಿಲ್ ತಿಂಗಳಲ್ಲಿ ಸಾಯಿ ಸೂರ್ಯ ಡೆವಲಪರ್ಸ್ ಮತ್ತು ಸುರಾನ ಗ್ರೂಪ್ ಒಳಗೊಂಡ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ)ಮಹೇಶ್ ಬಾಬು ಅವರನ್ನು ತನಿಖೆಗೆ ಒಳಪಡಿಸಿತ್ತು. ಮಹೇಶ್ ಬಾಬು ಪ್ರಸ್ತುತ ಖ್ಯಾತ ನಿರ್ದೇಶಕ ಎಸ್.ಎಸ್. ರಾಜಮೌಳಿ ನಿರ್ದೇಶನದ ಮುಂಬರುವ ಚಿತ್ರದ ಚಿತ್ರೀಕರಣದಲ್ಲಿ ನಿರತರಾಗಿದ್ದಾರೆ.

ಮನಿ ಲ್ಯಾಂಡ್ರಿಂಗ್ ಆರೋಪಿ ಎಂದು ಹೆದರಿಸಿ ವಯೋವೃದ್ಧರಿಂದ 45.50 ಲಕ್ಷ ಸುಲಿಗೆ

ಮೈಸೂರು, ಜು.7– ನೀವು ಮನಿ ಲ್ಯಾಂಡ್ರಿಂಗ್ ಆರೋಪಿ ಎಂದು ಬೆದರಿಸಿ ಮೈಸೂರಿನ 80 ವರ್ಷದ ವೃದ್ಧರೊಬ್ಬರಿಗೆ ಬರೋಬ್ಬರಿ 45.50 ಲಕ್ಷ ರೂ. ವಂಚಿಸಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವೇಶ್ವರನಗರದ 80 ವರ್ಷದ ವೃದ್ಧರೊಬ್ಬರಿಗೆ ಮೇ 16ರಂದು ಕರೆ ಮಾಡಿದ ಅಪರಿಚಿತ ವ್ಯಕ್ತಿ, ತನ್ನನ್ನು ನ್ಯಾಷನಲ್ ಸೈಬರ್ ಕ್ರೈಂ ಅಧಿಕಾರಿ ಎಂದು ಹೇಳಿಕೊಂಡಿದ್ದಾನೆ. ವಿಷಯ ಕೇಳಿದಾಗ ನೀವು ಮನಿ ಲ್ಯಾಂಡ್ರಿಂಗ್ ಆರೋಪಿಯಾಗಿದ್ದೀರಿ, ಪಬ್ಲಿಕ್ ಪ್ರಾಸಿಕ್ಯೂಟರ್ ನಂಬರ್ ಕಳುಹಿಸುತ್ತೇನೆ ಅವರಿಗೆ ಕರೆ ಮಾಡಿ, ಮಾತನಾಡಿ ಎಂದು ತಿಳಿಸಿದ್ದಾನೆ.

ಏನಾದರೂ ತಮ್ಮ ದಾಖಲೆಗಳನ್ನು ದುರ್ಬಳಕೆ ಮಾಡಿರಬಹುದಾ ಎಂಬ ಅನುಮಾನದಿಂದ ಆತ ನೀಡಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದಾರೆ. ಆಗ ಪಬ್ಲಿಕ್ ಪ್ರಾಸಿಕ್ಯೂಟರ್ ಎಂದು ಮಾತನಾಡಿದ ವ್ಯಕ್ತಿ ನೀವು ಮನಿ ಲ್ಯಾಂಡ್ರಿಂಗ್‌ನಲ್ಲಿ ಸಿಲುಕಿಕೊಂಡಿದ್ದೀರಿ, ಬೇಲ್ ಪಡೆಯದಿದ್ದರೆ ಬಂಧನ ಮಾಡುತ್ತಾರೆ ಎಂದು ಹೆದರಿಸಿದ್ದಾನೆ ಅಲ್ಲದೆ ಬೇಲ್ ಕೊಡಿಸಲು ಹಣ ನೀಡಬೇಕು ಎಂದು ತಿಳಿಸಿದ್ದಾನೆ. ಇದರಿಂದ ಆತಂಕಗೊಂಡ ಅವರು, ವಿವಿಧ ಹಂತಗಳಲ್ಲಿ 45.50 ಲಕ್ಷ ರೂ. ವರ್ಗಾವಣೆ ಮಾಡಿದ್ದಾರೆ. ಸ್ವಲ್ಪ ದಿನ ಯಾರೂ ಕರೆ ಮಾಡಿಲ್ಲ ಏನಾಗಿದೆ ಎಂದು ವಿಚಾರಿಸಲು ಇವರೇ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗದಿದ್ದಾಗ ತಾವು ವಂಚನೆಗೆ ಒಳಗಾಗಿರುವುದು ಅರಿವಿಗೆ ಬಂದು ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಧಾನಮಂತ್ರಿ ಆವಾಸ್ 2.0 ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು, ಜು.7– ಭಾರತದ ಸರ್ಕಾರದ ಪ್ರಧಾನಮಂತ್ರಿ ಆವಾಸ್ (ನಗರ) 2.0 ಯೋಜನೆಯನ್ನು ಸರ್ವರಿಗೂ ಸೂರು ಒದಗಿಸಲು 01.09.2024 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದ್ದು, ಪ್ರಧಾನಮಂತ್ರಿ ಆವಾಸ್ ನಗರ ಯೋಜನೆಯಡಿ ಬೇಡಿಕೆ ಸಮೀಕ್ಷೆಯ ಇವರಗಳನ್ನು ನಮೂದಿಸಲು ಕೇಂದ್ರ ಸರ್ಕಾರವು Unified Web Portel ಆನ್‌ಲೈನ್ ವ್ಯವಸ್ಥೆಯನ್ನು ಮಾಡಿದ್ದು, ಸ್ವತಃ ಫಲಾನುಭವಿಗಳು ಕೂಡ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಫಲಾನುಭವಿಗಳು URL:https://pmay-urban.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿರುವ ಅರ್ಹ ವಸತಿ ರಹಿತ, ನಿವೇಶನ ರಹಿತ ಫಲಾನುಭವಿಗಳು ಪ್ರಧಾನಮಂತ್ರಿ ಆವಾಸ್(ನಗರ)2.0 ಯೋಜನೆಯಡಿ ರೂ. 1.50 ಲಕ್ಷ ಸಹಾಯ ಧನವನ್ನು ಪಡೆದು ವಸತಿ ಸೌಕರ್ಯ ಪಡೆಯಲು ಜುಲೈ 15 ರೊಳಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಅರ್ಜಿದಾರರು ಆಧಾರ್ ಕಾರ್ಡ್, ವಸತಿ ರಹಿತರಾಗಿದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು, ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯ ವಿವರ, ನಿಗದಿತ ನಮೂನೆ (Annexure -2A/2B/2C) ಯಲ್ಲಿ "Self Undertaking" ಸಲ್ಲಿಸುವುದು, ಮೊಬೈಲ್ ಸಂಖ್ಯೆ ಕ್ರಯ ಪರವಾನಗಿ, ಪ್ಯಾನ್ ಕಾರ್ಡ್ ದಾಖಲೆಗಳನ್ನು ಹೊಂದಿರಬೇಕು.

ಹೆಚ್ಚಿನ ಮಾಹಿತಿಗಾಗಿ ಹೂಟಗಳ್ಳಿ ನಗರಸಭಾ ಕಾರ್ಯಾಲಯದ ಕಚೇರಿಯ ದೂ.ಸಂ: 0821–2001737 ನ್ನು ಸಂಪರ್ಕಿಸಬಹುದು ಎಂದು ಹೂಟಗಳ್ಳಿ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಕೆ.ಹರೀಶ್‌ಗೌಡರಿಂದ 4 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ





ಮೈಸೂರಿನ ಪಡುವಾರಹಳ್ಳಿ ಬಳಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡರು ಚಾಲನೆ ನೀಡಿದರು.

ಮೈಸೂರು,ಜು.7(ಎಂಟಿವೈ)– ಚಾಮರಾಜ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಣ ತೊಟ್ಟಿದ್ದು, ಆದ್ಯತೆ ಮೇರೆಗೆ ವಿವಿಧೆಡೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡರು ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 22ರ ವ್ಯಾಪ್ತಿಯ ಮಾತೃಮಂಡಳಿ ಶಾಲೆ ಬಳಿ ಚರಂಡಿ ಮತ್ತು ಪಾದಚಾರಿ ಮಾರ್ಗದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈಗಾಗಲೇ ಚಾಮರಾಜ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯವನ್ನು ನಮ್ಮ ಸರ್ಕಾರ ಬಂದ ಮೇಲೆ ಆರಂಭಿಸಲಾಗಿದೆ. ಆರೋಗ್ಯ, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ ಅಭಿವೃದ್ಧಿ ಕಾರ್ಯ ನಡೆಸಲಾಗುತ್ತಿದೆ. ಇದರೊಂದಿಗೆ ಜನಸಾಮಾನ್ಯರಿಗೂ ಉತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ಕ್ಷೇತ್ರದ ಎಲ್ಲಾ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ, ಪಾದಚಾರಿ ಮಾರ್ಗ, ಉದ್ಯಾನವನದ ಅಭಿವೃದ್ಧಿ ಕಾಮಗಾರಿಯನ್ನು ಹಂತ ಹಂತವಾಗಿ ನಡೆಸಲಾಗುತ್ತಿದೆ ಎಂದರು.

ಶಾಸಕರ ಎಸ್‌ಎಫ್‌ಸಿ ವಿಶೇಷ ಅನುದಾನದಲ್ಲಿ ವಿವಿಧ ವಾರ್ಡ್‌ಗಳಲ್ಲಿ 4 ಕೋಟಿ ರೂ. ವೆಚ್ಚದ ಕಾಮಗಾರಿಗೆ ಇಂದು ಚಾಲನೆ ನೀಡಲಾಗುತ್ತಿದೆ. ವಾರ್ಡ್ ನಂ. 22ರ ವ್ಯಾಪ್ತಿಯ ಮಾತೃಮಂಡಳಿ ಶಾಲೆಯಿಂದ ಮಹದೇಶ್ವರ ದೇವಾಲಯದ ಬಳಿಯಿಂದ ವಾಲ್ಮೀಕಿ ರಸ್ತೆಯವರೆಗೆ ಒಂದು ಕೋಟಿ ರೂ. ವೆಚ್ಚದಲ್ಲಿ ಚರಂಡಿ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ವಾರ್ಡ್ ನಂ.19ರ ವ್ಯಾಪ್ತಿಯ ನಿರ್ಮಲ ಕಾನ್ವೆಂಟ್ ಸಮೀಪ ಚರಂಡಿ ಹಾಗೂ ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿ, ವಿ.ವಿ.ಮೊಹಲ್ಲಾ 13, 14, 12ನೇ ಎ ಹಾಗೂ 8ನೇ ಕ್ರಾಸ್ ರಸ್ತೆ ಅಭಿವೃದ್ಧಿ, ಜಯಲಕ್ಷ್ಮೀಪುರಂನ 7ನೇ ಮೇನ್ ರಸ್ತೆ ಹಾಗು ಇತರ ರಸ್ತೆಗಳ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.24ರ ಶೇಷಾದ್ರಿ ಅಯ್ಯರ್ ರಸ್ತೆ, ವಾರ್ಡ್ ನಂ.23ರ ಜೆ.ಕೆ. ಮೈದಾನದ ವೃತ್ತ, ಬಾಬುಜಗಜೀವನ್ ರಾಂ ವೃತ್ತ ಡಾಂಬರೀಕರಣ, ಫುಟ್ ಪಾತ್ ಕಾಮಗಾರಿ ಮತ್ತು ವಾರ್ಡ್ ನಂ.23ರ ದಿವಾನ್ಸ್ ರಸ್ತೆಯ ಧನ್ವಂತರಿ ರಸ್ತೆಯಿಂದ ವಿನೋಬ ರಸ್ತೆಯವರೆಗೆ ಹಾಗೂ ಫ್ರೀಡಂ ಪಾರ್ಕ್ ಹಿಂಭಾಗದ ದಿವಾನ್ಸ್ ರಸ್ತೆಗೆ ಚರಂಡಿ ಮತ್ತು ಫುಟ್ ಪಾತ್ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಲಾಗಿದೆ ಎಂದರು.

ವಾರ್ಡ್ ನಂ. 40ರ ಹೈದರ್‌ಗುಂಟೆ ಪಾರ್ಕ್ ಮುಂಭಾಗದ ಸಾಯಿಬಾಬಾ ಟೆಂಪಲ್ ಮುಂಭಾಗದಿಂದ ಶಾಂತವೇರಿ ಗೋಪಾಲಗೌಡ ವೃತ್ತದ, ನಜರ್‌ಬಾದ್ ಸರ್ಕಲ್‌ವರೆಗೆ, ಕೂಡುರಸ್ತೆಗಳಲ್ಲಿ ರಸ್ತೆ ಮತ್ತು ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪಾಲಿಕೆ ಅಧಿಕಾರಿಗಳಾದ ಹೇಗಾನಂದ, ವೆಂಕಟೇಶ್, ರಾಮಣ್ಣ, ಮಾಜಿ ಮೇಯರ್ ಎಂ.ಸಿ. ರಾಜೇಶ್ವರಿ ಪುಟ್ಟಸ್ವಾಮಿ, ಕೃಷ್ಣಮೂರ್ತಿ, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾದ ರವಿ, ರಮೇಶ್ ರಾಯಪ್ಪ, ಮುಖಂಡರಾದ ನಾಗರಾಜ್, ಮರಿಸ್ವಾಮಿ, ಕುಮಾರ್, ಯೋಗೇಶ್, ಮಹದೇಶ್, ಕೃಪಾನಂದ, ಗುರುರಾಜ್, ಸೌಭಾಗ್ಯ, ನಿತಿನ್ ಪುಟ್ಟಸ್ವಾಮಿ, ರಾಜಣ್ಣ, ರಮೇಶ್, ರಾಮಕೃಷ್ಣ, ಜಯಪ್ರಕಾಶ್, ಸುಶೀಲ ಮರೀಗೌಡ, ಗಾಯತ್ರಿ ನಾರಾಯಣಗೌಡ, ನಿಶಾಂತ್, ಅರುಣ್‌ಕುಮಾರ್, ಪಾಲಿಕೆ ಮಾಜಿ ಸದಸ್ಯ ಎಂ.ಡಿ.ನಾಗರಾಜ್, ಬಾಲರಾಜ್, ಇಮ್ರಾನ್, ಆನಂದ್, ನಂಜುಂಡಿ, ಮಹದೇವ್, ಅನಂತ್ ನಾರಾಯಣ, ಶಿವಕುಮಾರ್, ಇಬ್ರಾಹಿಂ, ವಿನೋದ್, ಹರೀಶ್ ಗೌಡ, ಚಂದ್ರಶೇಖರ್, ಶಾಂತ, ಮಂಗಳ, ರಾಣಿ, ಹೇಮಾ ಸಿಂಗ್, ಸಮೀನ, ಮಾಜಿ ಪಾಲಿಕೆ ಸದಸ್ಯರಾದ ಕುಶಾಲ್‌ಕುಮಾರ್, ಎಸ್.ಆರ್.ರವಿಕುಮಾರ್, ವರದರಾಜು, ನಿರಂಜನ್, ವರಲಕ್ಷ್ಮಿ, ಕುಮುದ, ದೀಪಕ್ ಪುಟ್ಟಸ್ವಾಮಿ, ಮೋಹನ್, ಸುಹಾಸ್, ರವಿನಾಯಕ್ ಇನ್ನಿತರರು ಪಾಲ್ಗೊಂಡಿದ್ದರು.

'ಆಯುಷ್ಮಾನ್ ವಯೋ ವಂದನಾ' ಯೋಜನೆ

ವೃದ್ಧರಿಗೆ ಕಾರ್ಡ್ ಇದೆ, ವಿಮೆ ಇಲ್ಲ



ಬೆಂಗಳೂರು, ಜು.7– ರಾಜ್ಯದಲ್ಲಿ 'ಆಯುಷ್ಮಾನ್ ವಯೋ ವಂದನಾ' ಯೋಜನೆ ಜಾರಿಯಾಗದಿದ್ದರೂ 70 ವರ್ಷ ಮೇಲ್ಪಟ್ಟವರಿಗೆ ಆರೋಗ್ಯ ವಿಮೆಯ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ಈಗಾಗಲೇ 1.71 ಲಕ್ಷಕ್ಕೂ ಅಧಿಕ ವೃದ್ಧರು ಈ ಕಾರ್ಡ್ ಪಡೆದಿದ್ದಾರೆ. ಆದರೆ, ಆಸ್ಪತ್ರೆಗಳಲ್ಲಿ ಈ ಯೋಜನೆಯಡಿ ಚಿಕಿತ್ಸೆ ಸಿಗದ ಪರಿಣಾಮ ಗೊಂದಲಕ್ಕೆ ಒಳಗಾಗಿದ್ದಾರೆ.

'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯನ್ನು (ಎಬಿ–ಪಿಎಂಜೆಎವೈ) ಕಳೆದ ವರ್ಷ ವಿಸ್ತರಿಸಿದ ಕೇಂದ್ರ ಸರ್ಕಾರ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಅನ್ವಯವಾಗುವಂತೆ ಈ ಯೋಜನೆಯನ್ನು ಜಾರಿ ಮಾಡಿತ್ತು. ಯೋಜನೆಯಡಿ ನಿಗದಿತ ಅನುದಾನದ ಖಚಿತತೆ ಇಲ್ಲದ ಕಾರಣ ರಾಜ್ಯ ಸರ್ಕಾರ ಇನ್ನೂ ಈ ಯೋಜನೆಯನ್ನು ಅನುಷ್ಠಾನ ಮಾಡಿಲ್ಲ. ಆದರೆ, ಯೋಜನೆಯಡಿ ಕಾರ್ಡ್ ವಿತರಿಸುತ್ತಿರುವ ಕಾರಣ, ವೃದ್ಧರು ಉತ್ಸಾಹದಿಂದ ಈ ಕಾರ್ಡ್ ಪಡೆಯುತ್ತಿದ್ದಾರೆ. 5 ಲಕ್ಷದವರೆಗೆ ಆರೋಗ್ಯ ವಿಮೆ ಭರವಸೆ ಒದಗಿಸುವ 'ಆಯುಷ್ಮಾನ್ ವಯೋ ವಂದನಾ' ಕಾರ್ಡ್ ಹೊಂದಿದ್ದರೂ ಚಿಕಿತ್ಸಾ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ.


ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು (ಎನ್‌ಎಚ್‌ಎ) ಈ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿದೆ. ಎನ್‌ಎಚ್‌ಎ ಪೋರ್ಟಲ್ ಮೂಲಕವೇ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಕಾರ್ಡ್ ಪಡೆಯುವ ಅವಕಾಶ ನೀಡಲಾಗಿದೆ. ವಿವಿಧ ಸಂಘ–ಸಂಸ್ಥೆಗಳು ಸಹ ಕಾರ್ಡ್ ವಿತರಣೆಗೆ ಸಂಬಂಧಿಸಿದಂತೆ ಅಭಿಯಾನ ನಡೆಸಿ, ಕಾರ್ಡ್‌ಗೆ ನೋಂದಣಿ ಮಾಡಿಸುತ್ತಿವೆ. ಯೋಜನೆ ಜಾರಿಯಾಗದ ಪರಿಣಾಮ ಈ ಕಾರ್ಡ್‌ಗಳು ನಿರರ್ಥಕವಾಗುತ್ತಿವೆ.

ನಿವಾರಣೆಯಾಗದ ಗೊಂದಲ: 'ಆಯುಷ್ಮಾನ್ ವಯೋ ವಂದನಾ' ಯೋಜನೆಯಡಿ ಚಿಕಿತ್ಸೆಗೆ 70 ವರ್ಷ ಮೇಲ್ಪಟ್ಟವರು ಪಡಿತರ ಚೀಟಿ ನೀಡಬೇಕಾದ ಅಗತ್ಯ ಇರುವುದಿಲ್ಲ. ಇದರಿಂದಾಗಿ ಯೋಜನೆ ಜಾರಿಯಾದಲ್ಲಿ ಎಲ್ಲಾ ವೃದ್ಧರೂ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಪಡೆಯಲು ಸಾಧ್ಯ. ಯೋಜನೆಗೆ ಅಗತ್ಯವಿರುವ ಅನುದಾನದ ಬಗೆಗಿನ ಗೊಂದಲ ನಿವಾರಿಸುವಂತೆ ರಾಜ್ಯ ಆರೋಗ್ಯ ಇಲಾಖೆಯು ಕೇಂದ್ರ ಆರೋಗ್ಯ ಸಚಿವಾಲಯಕ್ಕೂ ಪತ್ರ ಬರೆದಿದೆ. ಆದರೆ ಅನುದಾನದ ಭರವಸೆ ಸಿಗದಿದ್ದರಿಂದ ಯೋಜನೆ ಜಾರಿ ಮಾಡಿಲ್ಲ.

ಈ ಯೋಜನೆಗೆ ಕೇಂದ್ರ ಸರ್ಕಾರ ಶೇ.60ರಷ್ಟು ಹಾಗೂ ರಾಜ್ಯ ಸರ್ಕಾರ ಶೇ.40ರಷ್ಟು ವೆಚ್ಚ ಭರಿಸಬೇಕಾಗುತ್ತದೆ. ರಾಜ್ಯದಲ್ಲಿ ಯೋಜನೆ ಅನುಷ್ಠಾನಕ್ಕೆ ರೂ.68.98 ಕೋಟಿ ಅನುದಾನ ಅಗತ್ಯವಿದೆ. ಇದರಲ್ಲಿ ಶೇ.60ರಷ್ಟನ್ನು ಕೇಂದ್ರ ಸರ್ಕಾರ ನೀಡಬೇಕಾಗಿದೆ. ಅದರಂತೆ ರೂ.36.58 ಕೋಟಿ ಅನುದಾನ ಪಡೆಯಲು ರಾಜ್ಯ ಅರ್ಹವಾಗಿದೆ. ಅನುದಾನದ ಸಮಸ್ಯೆಯಿಂದ ಯೋಜನೆ ಜಾರಿಯಾಗಿಲ್ಲ. ಯೋಜನೆಯಡಿ ಈಗಲೇ ಕಾರ್ಡ್ ಪಡೆಯಬೇಕಾದ ಅಗತ್ಯವಿಲ್ಲ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಪಡಿತರ ಚೀಟಿ ಇದ್ದಲ್ಲಿ ಚಿಕಿತ್ಸೆ: ರಾಜ್ಯದಲ್ಲಿ ಸದ್ಯ ಎಬಿ–ಪಿಎಂಜೆಎವೈ ಆರೋಗ್ಯ ಕರ್ನಾಟಕ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯಡಿ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ 70 ವರ್ಷ ಮೇಲ್ಪಟ್ಟವರು ಸೇರಿ ಎಲ್ಲಾ ವಯೋಮಾನದವರಿಗೆ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಎಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಸದಸ್ಯರಿಗೆ ಯೋಜನೆಯಡಿ ಚಿಕಿತ್ಸಾ ವೆಚ್ಚದ ಶೇ.30ರಷ್ಟು ಪಾವತಿಸಲಾಗುತ್ತಿದೆ. ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್ ನೀಡಬೇಕಿದೆ. ಈ ಯೋಜನೆಯನ್ನು ರಾಜ್ಯದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ನಿರ್ವಹಿಸುತ್ತಿದೆ.

ಭಾರತದಲ್ಲಿ ಡ್ರೋನ್‌ಗಳಿಗೆ ಭಾರಿ ಬೇಡಿಕೆ: 2030ರ ವೇಳೆಗೆ 2 ಲಕ್ಷ ಕೋಟಿ ವಹಿವಾಟು



ನವದೆಹಲಿ: ಭಾರತದಲ್ಲಿ ಕೃಷಿ, ಲಾಜಿಸ್ಟಿಕ್ಸ್, ರಕ್ಷಣೆ ಸೇರಿ ಮುಂತಾದ ಕ್ಷೇತ್ರಗಳಿಂದ ಡ್ರೋನ್‌ಗಳಿಗೆ ಬೇಡಿಕೆ ಗಮನಾರ್ಹವಾಗಿ ಹೆಚ್ಚುತ್ತಿದ್ದು 2030 ರ ವೇಳೆಗೆ ಈ ಉದ್ಯಮದ ಗಾತ್ರ ಸುಮಾರು ರೂ. 2 ಲಕ್ಷ ಕೋಟಿಗೆ ತಲುಪಲಿದೆ. ನೆಕ್ಸ್‌ಜೆನ್ ಎಂಬ ಅಧ್ಯಯನ ವರದಿ ಈ ಮಾಹಿತಿಯನ್ನು ನೀಡಿದೆ.

ಇತ್ತೀಚೆಗೆ ಭಾರತದಲ್ಲಿ ಡ್ರೋನ್‌ಗಳಿಗೆ ಭಾರಿ ಬೇಡಿಕೆ ಬರುತ್ತಿದೆ. ರಕ್ಷಣೆ ಹೊರತುಪಡಿಸಿದರೆ ಕೃಷಿ ಕ್ಷೇತ್ರದಿಂದ ಹೆಚ್ಚು ಬೇಡಿಕೆ ಇದೆ ಎಂದು ವರದಿ ಹೇಳಿದೆ.

15 ನಗರಗಳಲ್ಲಿನ 150 ಡ್ರೋನ್ ಕಂಪನಿಗಳನ್ನು ಸಂದರ್ಶಿಸಿ ವರದಿ ತಯಾರಿಸಲಾಗಿದ್ದು, 2030ರ ವೇಳೆಗೆ ಕೃಷಿ ಕ್ಷೇತ್ರದಲ್ಲಿ ಡ್ರೋನ್‌ಗಳಿಗೆ ಶೇ 40 ರಷ್ಟು ಬೇಡಿಕೆ ಹೆಚ್ಚಾಗಲಿದೆ ಎಂದು ನೆಕ್ಸ್‌ಜೆನ್ ಹೇಳಿದೆ.

ಜಾಗತಿಕವಾಗಿಯೂ ಕೃಷಿ ಕ್ಷೇತ್ರದಲ್ಲಿ ಡ್ರೋನ್‌ಗಳಿಗೆ ಬೇಡಿಕೆ ಹೆಚ್ಚುತ್ತಿದ್ದು ಈ ಒಂದು ಕ್ಷೇತ್ರದಲ್ಲಿಯೇ ಸುಮಾರು 51,000 ಕೋಟಿ ವಹಿವಾಟು 2030ರ ವೇಳೆಗೆ ನಡೆಯಲಿದೆ ಎಂದು ತಿಳಿಸಿದೆ. ಇದೇ ಜುಲೈ 31, ಆಗಸ್ಟ್ 1 ರಂದು ದೆಹಲಿಯಲ್ಲಿ Drone International Expo–2025 ನಡೆಯಲಿದೆ. ಇದಕ್ಕಾಗಿ ಭಾರತದ ಕಂಪನಿಗಳು ಬಹುದೊಡ್ಡ ತಯಾರಿ ಮಾಡಿಕೊಳ್ಳುತ್ತಿವೆ.

ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿನ ಮರಗಳ ಹನನ ಯತ್ನಕ್ಕೆ ಖಂಡನೆ

ಪರಿಸರ ಪ್ರೇಮಿಗಳು ಪ್ರತಿಭಟನೆ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಪರಿಸರ ಪ್ರೇಮಿಗಳು ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಮೈಸೂರು, ಜು.7(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ನೂರು ವರ್ಷದ ಹಳೆಯ ಮರಗಳನ್ನು ಕಡಿಯಲು ಮುಂದಾಗಿರುವ ನಗರ ಪಾಲಿಕೆ ನಡೆ ಖಂಡಿಸಿ ಪರಿಸರ ಪ್ರೇಮಿಗಳು ಹಾಗೂ ಕರ್ನಾಟಕ ಹಿತರಕ್ಷಣಾ ವೇದಿಕೆ ಸದಸ್ಯರು ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದರು.

ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿರುವ ಮರಗಳನ್ನು ಪರಿಶೀಲಿಸಿದ ಪರಿಸರ ಪ್ರೇಮಿಗಳು, ಮರಗಳನ್ನು ಕಡಿಯಲು ಮುಂದಾಗಿರುವುದನ್ನು ತೀವ್ರವಾಗಿ ಖಂಡಿಸಿದರು. ಮೈಸೂರಿನ ನೈಸರ್ಗಿಕ ಪರಿಸರವನ್ನು ಹಾಳು ಮಾಡುವ ಉದ್ದೇಶದಿಂದ ಪಾಲಿಕೆ ಅಧಿಕಾರಿಗಳೇ ಪರಿಸರ ನಾಶಕ್ಕೆ ಮುಂದಾಗಿದ್ದಾರೆ ಎಂದು ಆಕ್ರೋಶ ಹೊರಹಾಕಿದರಲ್ಲದೆ ಇಲ್ಲಿರುವ ಮರಗಳನ್ನು ಕಡಿದರೆ ಉಗ್ರ ಹೋರಾಟ ನಡೆಸುವುದಾಗಿ ಹೆಚ್ಚರಿಕೆ ನೀಡಿದರು.

ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್, ಜೀವಧಾರ ರಕ್ತ ನಿಧಿ ಕೇಂದ್ರದ ಗಿರೀಶ್, ಯುವ ಮುಖಂಡರಾದ ಹರೀಶ್ ಗೌಡ, ಮಂಜುನಾಥ್ ಗೌಡ, ಸಂದೇಶ್, ರವಿಚಂದ್ರ, ಎಸ್.ಎನ್.ರಾಜೇಶ್, ನೀತು, ಸಂತೋಷ್ ಉಪಸ್ಥಿತರಿದ್ದರು.

ಜಗಜೀವನರಾಮ್ ಪುಣ್ಯಸ್ಮರಣೆ



ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನರಾಮ್ ಅವರ 39 ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಮೈಸೂರು ರೈಲ್ವೆ ನಿಲ್ದಾಣ ಮುಂಭಾಗದ ಬಾಬುಜಿ ಪ್ರತಿಮೆಗೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್. ಭಾಸ್ಕರ್ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಈ ವೇಳೆ ವಕೀಲರಾದ ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಎ.ಆರ್. ಕಾಂತರಾಜ್, ಮೈಸೂರು ನಗರ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಜೆ.ಪ್ರಭು ಉಪಸ್ಥಿತರಿದ್ದರು

ಶಿಕ್ಷಕರ ಹೆಚ್ಚುವರಿ ವರ್ಗಾವಣೆಗೆ ಮುನ್ನ ಅವರ ಬೇಡಿಕೆ ಈಡೇರಿಸಲು ಒತ್ತಾಯ

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಮನವಿ

ಮೈಸೂರು, ಜು.7(ಎಸ್‌ಪಿಎನ್)– ಸರ್ಕಾರಿ ಪ್ರಾಥಮಿಕ ಶಾಲೆಗಳ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಲ್ಲಿ ಹೆಚ್ಚುವರಿ ವರ್ಗಾವಣೆಗೂ ಮುನ್ನ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ನಾಗೇಶ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಅವರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ವಿ. ಮಹೇಶ್ ಅವರಲ್ಲಿ ಮನವಿ ಮಾಡಿದ್ದಾರೆ.

ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ವರ್ಗಾವಣೆ ಪ್ರಕ್ರಿಯೆಯಲ್ಲಿ 1–5ನೇ ತರಗತಿ, 6–8ನೇ ತರಗತಿಗಳಿಗೆ ಮಂಜೂರಾದ ಹುದ್ದೆಗಳು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯನ್ನು ಪರಿಗಣಿಸಿ, ಈ ಹುದ್ದೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು ಹೆಚ್ಚಿದ್ದಲ್ಲಿ ಮಾತ್ರ ಹೆಚ್ಚುವರಿ ಎಂದು ಗುರುತಿಸಬೇಕು. ಪರಂತು ವಿಷಯವಾರು ಶಿಕ್ಷಕರನ್ನು, ಹೆಚ್ಚುವರಿಗೆ ಪರಿಗಣಿಸಬಾರದು ಎಂಬ ಅಂಶ ಸೇರಿದಂತೆ ಒಟ್ಟು 17 ಅಂಶಗಳ ಬೇಡಿಕೆಗಳನ್ನು ಪರಿಗಣಿಸುವಂತೆ ಒತ್ತಾಯಿಸಿದ್ದಾರೆ.

2024 ಹಾಗೂ 2025ರಲ್ಲಿ ಯಾವ ವರ್ಷದಲ್ಲಿ ಮಕ್ಕಳ ದಾಖಲಾತಿ ಸಂಖ್ಯೆ ಹೆಚ್ಚಾಗಿದೆಯೋ ಆ ಸಂಖ್ಯೆಯ ಆಧಾರದಲ್ಲಿ ಹೆಚ್ಚುವರಿ ಶಿಕ್ಷಕರೆಂದು ಪರಿಗಣಿಸಬೇಕು. ಶಾಲೆಗಳಲ್ಲಿ ಹೆಚ್ಚುವರಿ ಎಂದು ಗುರುತಿಸಿದ ಶಿಕ್ಷಕರನ್ನು, ಪರಸ್ಪರ ವರ್ಗಾವಣೆಗೆ ಅನುಮತಿ ನೀಡಬೇಕು. ಹೆಚ್ಚುವರಿ ವರ್ಗಾವಣೆ ಕೌನ್ಸಿಲಿಂಗ್ ಜರುಗುವ ದಿನದವರೆಗೆ ಇಲ್ಲವೇ ಯಾವ ತಿಂಗಳಲ್ಲಿ ಹೆಚ್ಚುವರಿ ವರ್ಗಾವಣೆ ಪ್ರಕ್ರಿಯೆ ಆರಂಭವಾಗುವ ತಿಂಗಳ ಅಂತ್ಯದವರೆಗೆ ನಿವೃತ್ತಿಯಾಗುತ್ತಿರುವ ಹುದ್ದೆಗಳನ್ನೂ ಕೂಡ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪರಿಗಣಿಸುವಂತೆ ಒತ್ತಾಯಿಸಿದ್ದಾರೆ.

ನಿಗಧಿತ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರು, ಚಿತ್ರಕಲೆ, ಮರಾಠಿ, ಉರ್ದು, ಹಿಂದಿ ಸೇರಿದಂತೆ ಇತರೆ ಭಾಷೆಗಳ ಶಿಕ್ಷಕರ ಹೆಚ್ಚುವರಿ ಪ್ರಕ್ರಿಯೆಯಿಂದ ಕೈಬಿಡುವಂತೆ ಮನವಿ ಮಾಡಿದ್ದು, ರಾಜ್ಯಾದ್ಯಂತ ಖಾಲಿ ಇರುವ ಜಿಪಿಟಿ ಹುದ್ದೆಗಳನ್ನು ಹೆಚ್ಚುವರಿ ಕೌನ್ಸಿಲಿಂಗ್‌ನಲ್ಲಿ ಪ್ರಕಟಿಸಿದ ಜಿಪಿಟಿ ಹುದ್ದೆಗೆ ಶಿಕ್ಷಕರು ನೇಮಕಾತಿ ಆಗುವವರೆಗೂ ಸದರಿ ಸ್ಥಳದಲ್ಲಿ ಪಿಎಸ್‌ಟಿ ಶಿಕ್ಷಕರು ಸೇವೆ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಒತ್ತಾಯಿಸಿದ್ದಾರೆ.

ಈಗಾಗಲೇ ಮುಖ್ಯ ಶಿಕ್ಷಕರಾಗಿ ಬಡ್ತಿ ಹೊಂದಿ ಸದರಿ ಶಾಲೆಯಲ್ಲಿ 250ಕ್ಕಿಂತ ಹೆಚು ಮಕ್ಕಳಿರುವ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆಯನ್ನು ಹಿರಿಯ ಮುಖ್ಯ ಶಿಕ್ಷಕರ ಹುದ್ದೆಯೆಂದು ಪರಿಗಣಿಸಿ, ಹೆಚ್ಚುವರಿ ಮಾಡುತ್ತಿರುವುದು ನ್ಯಾಯ ಸಮ್ಮತವಲ್ಲ. ಸದರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಬಡ್ತಿ, ನಿವೃತ್ತಿ, ವರ್ಗಾವಣೆಯಾಗುವವರೆಗೂ ಮುಂದುವರೆಸುವಂತೆ ಮನವಿ ಮಾಡಿದ್ದಾರೆ.

2024–25ನೇ ಸಾಲಿನಲ್ಲಿ ಶೂನ್ಯ ದಾಖಲಾತಿಯಾಗಿರುವ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಶಿಕ್ಷಕರನ್ನು ಹೆಚ್ಚುವರಿಯೆಂದು ಗುರುತಿಸಿದ್ದು, ಪ್ರಸ್ತುತ ವರ್ಷ ಸದರಿ ಶಾಲೆಗಳಲ್ಲಿ ಮಕ್ಕಳು ದಾಖಲಾಗಿರುವಂತಹ ಶಾಲೆಗಳಲ್ಲಿ ಹೆಚ್ಚುವರಿ ಗುರುತಿಸಿರುವ ಶಿಕ್ಷಕರನ್ನು ಈ ಪ್ರಕ್ರಿಯೆಯಿಂದ ಕೈಬಿಡಬೇಕು. 2023ರ ವರ್ಗಾವಣೆಯಲ್ಲಿ ಪತಿ–ಪತ್ನಿ ಪ್ರಕರಣ, ಗಂಭೀರ ಕಾಯಿಲೆಗಳ ಪ್ರಕರಣದಲ್ಲಿ ವರ್ಗಾವಣೆ ಪಡೆದಿರುವ ಶಿಕ್ಷಕರನ್ನು ಹೆಚ್ಚುವರಿ ಪ್ರಕ್ರಿಯೆಯಿಂದ ಕೈಬಿಡಬೇಕು. 1–8ನೇ ತರಗತಿ ಶಾಲೆಗಳಲ್ಲಿ 8ನೇ ತರಗತಿ ಬೋಧನೆಗಾಗಿ ನೇಮಕಾತಿಗೊಳಿಸುತ್ತಿರುವುದರಿಂದ ಸದರಿ ಹುದ್ದೆಯನ್ನು ಪರಿಗಣಿಸಿ ಅಲ್ಲಿರುವ ಪಿಎಸ್‌ಟಿ ಶಿಕ್ಷಕರನ್ನು ಹೆಚ್ಚುವರಿ ಮಾಡಬಾರದು ಎಂದು ಒತ್ತಾಯಿಸಿದ್ದಾರೆ.

ಮಲೆನಾಡು ಪ್ರದೇಶಗಳಲ್ಲಿ ನಿಯಮಗಳ ವಿರುದ್ಧವಾಗಿ ಶಿಕ್ಷಕರನ್ನು ಹೆಚ್ಚುವರಿ ಮಾಡುತ್ತಿರುವುದು ತೀವ್ರ ಅವೈಜ್ಞಾನಿಕವಾಗಿದ್ದು, ಹಿಂದಿನ ವರ್ಷದ ನಿಯಮಗಳಂತೆ ಹೆಚ್ಚುವರಿ ಪ್ರಕ್ರಿಯೆನ್ನು ಜಾರಿಗೊಳಿಸುವಂತೆ ಒತ್ತಾಯಿಸಿದ್ದಾರೆ. ಇಂಗ್ಲಿಷ್, ಮರಾಠಿ ಹಾಗೂ ಭಾಷಾ ಅಲ್ಪಸಂಖ್ಯಾತ ಶಾಲೆಗಳಿಗೆ ಒಂದು ಇಂಗ್ಲಿಷ್ ಮತ್ತು ಕನ್ನಡ ಹುದ್ದೆಗಳನ್ನು ಹೆಚ್ಚುವರಿ ಮಾಡುತ್ತಿದ್ದು, ಇದರಲ್ಲಿ ಡೈಸ್‌ಕೋಡ್ ಪ್ರತ್ಯೇಕಿಸಿ ಹೆಚ್ಚುವರಿಯನ್ನು ಪರಿಗಣಿಸುವಂತೆ ಒತ್ತಾಯಿಸಿದ್ದಾರೆ.

ರಾಜ್ಯದ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 50ಕ್ಕಿಂತ ಹೆಚ್ಚು ಮಕ್ಕಳ ದಾಖಲಾತಿ ಇದ್ದರೆ ಅಂತಹ ಶಾಲೆಗಳಲ್ಲಿ ಕನ್ನಡ, ಇಂಗ್ಲಿಷ್, ವಿಜ್ಞಾನ ಶಿಕ್ಷಕರ 3 ಹುದ್ದೆಗಳನ್ನು ಕಡ್ಡಾಯವಾಗಿ ಸೃಜಿಸುವಂತೆ ಒತ್ತಾಯಿಸಿದ್ದಾರೆ. ಒಟ್ಟಾರೆ ಶಾಲಾ ಶೈಕ್ಷಣಿಕ ಹಾಗೂ ಮಕ್ಕಳ ಹಿತದೃಷ್ಟಿಯಿಂದ ಮೇಲಿನ ಅಂಶಗಳನ್ನು ಪರಿಗಣಿಸಿ ಹೆಚ್ಚುವರಿ ಪ್ರಕ್ರಿಯೆಗಳನ್ನು ಆರಂಭಿಸಬೇಕಾಗಿ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮನವಿ ಮಾಡಿದ್ದಾರೆ.

ಹೆಚ್ಚುವರಿ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಮುಂದೂಡಿಕೆ

ಮೈಸೂರು: ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ–2020 ಹಾಗೂ ರಾಜ್ಯ ಸಿವಿಲ್ ಸೇವಾ ನಿಯಮಗಳು –2020 ಹಾಗೂ ವರ್ಗಾವಣಾ ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳು – 2022ರ ಪ್ರಕಾರ ಶಾಲಾ ಶಿಕ್ಷಣ ಇಲಾಖೆಯ ಪ್ರಾಥಮಿಕ ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದ, ತತ್ಸಮಾನ ವೃಂದದ ಶಿಕ್ಷಕರು ಮತ್ತು ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು, ತತ್ಸಮಾನ ವೃಂದದ ಅಧಿಕಾರಿಗಳಿಗೆ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗೆ ವಿಸ್ತೃತವಾದ ಮಾರ್ಗಸೂಚಿಗಳನ್ನೊಳಗೊಂಡಂತೆ 19.06.2025ರಲ್ಲಿ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಆದರೆ, ಕೆಲ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ಸದರಿ ವೇಳಾಪಟ್ಟಿ ಪರಿಷ್ಕರಣೆ ಆಗಬೇಕಾಗಿರುವುದರಿಂದ ಕೌನ್ಸಿಲಿಂಗ್ ಮುಂದೂಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಪ್ರಾಥಮಿಕ, ಪ್ರೌಢ ಹಾಗೂ ಜಂಟಿ ನಿರ್ದೇಶಕರು(ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನರ ಹಿತಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಮೈಸೂರು ಮಹಾರಾಜರು ಸದಾ ಸ್ಮರಣೀಯರು

● ಸುತ್ತೂರು ಶ್ರೀಗಳಿಂದ ಗುಣಗಾನ ● ಸಂಸದ ಯದುವೀರ್, ಸಾಧಕ ವೈದ್ಯ ಡಾ.ಧನುಷ್‌ಗೆ ಪೌರ ಸನ್ಮಾನ

ಕೆ.ಆರ್.ನಗರ, ಜು.7– ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಮೈಸೂರು ರಾಜ್ಯವನ್ನಾಳಿದ ನಾಲ್ಮಡಿ ಕೃಷ್ಣರಾಜ ಒಡೆಯರ್ ಅವರು ಜನರ ಏಳಿಗೆಗಾಗಿ ಮಾಡದ ಅಭಿವೃದ್ಧಿ ಕೆಲಸಗಳಿಲ್ಲ ಎಂದು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಸಮುದಾಯ ಭವನದಲ್ಲಿ ಸೋಮವಾರ ನಡೆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ವೈದ್ಯಕೀಯ ಸ್ನಾತಕೋತ್ತರ ಪದವಿಯಲ್ಲಿ ರಾಜ್ಯಕ್ಕೆ 3ನೇ ರ‍್ಯಾಂಕ್ ಗಳಿಸಿದ ಡಾ.ಸಾ.ರಾ.ಧನುಷ್ ಅವರ ಪೌರಸನ್ಮಾನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಜನರ ಹಿತಕ್ಕಾಗಿ ಸರ್ವಸ್ವವನ್ನು ಧಾರೆ ಎರೆದು ಪ್ರಜಾಪ್ರಭುತ್ವದಲ್ಲಿಯೂ ಕೊಡದ ಸವಲತ್ತು ಮತ್ತು ಅನುಕೂಲಗಳನ್ನು ಕಲ್ಪಿಸಿದ ಮಹಾರಾಜರು ಅಜರಾಮರ. ಅಂತಹ ಮಹಾಪುರುಷ ಕನ್ನಡ ನಾಡಿನಲ್ಲಿ ಜನ್ಮ ತಾಳಿದ್ದು ನಮ್ಮೆಲ್ಲರ ಪುಣ್ಯ ಎಂದರು.

ಸಹಜವಾಗಿ ರಾಜಕಾರಣಿಗಳ ಮಕ್ಕಳು ಉನ್ನತ ಹುದ್ದೆಗೇರುವುದು ಮತ್ತು ಜನ್ಮದಾತರ ಗೌರವ ಕಾಪಾಡುವುದು ತೀರ ವಿರಳ. ಅಂತಹದರಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ ಸಾ.ರಾ.ಧನುಷ್ ವೈದ್ಯಕೀಯ ಕ್ಷೇತ್ರದಲ್ಲಿ ಅಪರೂಪದ ಸಾಧನೆ ಮಾಡಿರುವುದು ಎಲ್ಲರೂ ಮೆಚ್ಚುವಂತಹ ವಿಚಾರ ಎಂದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಾಜಿತರಾದ ನಂತರ ಸಾ.ರಾ.ಮಹೇಶ್ ಸಾರ್ವಜನಿಕ ಜೀವನದಿಂದ ದೂರ ಉಳಿದಿದ್ದರು. ಆ ವೇಳೆ ಅವರೊಂದಿಗೆ ಮಾತನಾಡಿ, ಚುನಾವಣೆಯಲ್ಲಿ ಸೋಲು ಗೆಲುವು ಸಹಜ. ನೀವು ಧೃತಿಗೆಡದೆ ಸಾರ್ವಜನಿಕ ಜೀವನದಲ್ಲಿ ಉಳಿಯಬೇಕೆಂದು ಸಲಹೆ ನೀಡಿದ್ದೆ. ಅದರಂತೆ ಅವರು ಭವಿಷ್ಯದಲ್ಲಿ ಜನಮುಖಿಯಾಗಬೇಕು ಎಂದು ಆಶೀರ್ವದಿಸಿದರು.

ನಾಲ್ವಡಿ ಕೊಡುಗೆ ಅಪಾರ: ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಮಾತನಾಡಿ, ಭರತ ಖಂಡದಲ್ಲಿ ಕರ್ನಾಟಕ ರಾಜ್ಯ ಶಾಶ್ವತ ಹೆಸರು ಗಳಿಸಲು ಮೈಸೂರು ರಾಜ್ಯವನ್ನಾಳಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ. ನಾಡಿಗೆ ಅನ್ನ ಮತ್ತು ಆರೋಗ್ಯ ನೀಡಿದ ನಮ್ಮ ಮಹಾರಾಜರ ಕೊಡುಗೆ ಜಗತ್ತಿಗೆ ಮಾದರಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ದೇಶದ ಜನರು ಸುಭಿಕ್ಷವಾಗಿ ಬದುಕಿ ಜೀವನ ನಡೆಸಲು ಮೈಸೂರು ಮಹಾರಾಜರ ಹಾಗೂ ಮಠಮಾನ್ಯಗಳ ಕೊಡುಗೆ ಅನನ್ಯವಾಗಿದ್ದು, ನಾವು ನಮ್ಮ ಜೀವ ಇರೋವರೆಗೂ ರಾಜರು ಮತ್ತು ಮಠಗಳನ್ನು ಪೂಜಿಸಬೇಕೆಂದರು.

ಇಂದು ರಾಜ್ಯವನ್ನಾಳುತ್ತಿರುವ ಸರ್ಕಾರಕ್ಕೆ ಜನರ ಬಗ್ಗೆ ಕಾಳಜಿ ಇಲ್ಲವಾಗಿದ್ದು, ಬರಿ ಬೊಗಳೆ ಭಾಷಣಕ್ಕೆ ಸೀಮಿತವಾಗಿದೆ. ಹೀಗಾಗಿ ಮತದಾರರು ಕ್ಷಮಿಸುವುದಿಲ್ಲ. ಜನರ ಭವಣೆಗೆ ಸ್ಪಂದಿಸದ ಸರ್ಕಾರ ಹೆಚ್ಚು ದಿನ ಉಳಿಯಲ್ಲ ಎಂದು ಕುಟುಕಿದರು.


ಕಾರ್ಯಕ್ರಮದಲ್ಲಿ ಸಂಸದ ಯದುವೀರ್, ಡಾ.ಸಾ.ರಾ.ಧನುಷ್ ಅವರನ್ನು ಸುತ್ತೂರು ಶ್ರೀಗಳು ಅಭಿನಂದಿಸಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ ವೈದ್ಯಕೀಯ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ್ದು, ಆತ ಮುಂದಿನ ದಿನಗಳಲ್ಲಿ ಜನರ ಆರೋಗ್ಯ ಕಾಪಾಡಲು ಆದ್ಯತೆ ನೀಡುವ ಜೊತೆಗೆ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದ ಹೆಚ್.ವಿಶ್ವನಾಥ್ ಬಡವರು ಮತ್ತು ನೊಂದವರಿಗೆ ಉಚಿತ ಚಿಕಿತ್ಸೆ ನೀಡಬೇಕೆಂದು ಎಂದು ಕಿವಿಮಾತು ಹೇಳಿದರು.

ಉಸಿರಿರುವರೆಗೆ ಜನರ ಸೇವೆ: ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾನು ಖಚಿತವಾಗಿ ಪರಾಭವಗೊಳ್ಳುತ್ತೇನೆ ಎಂದು ಗೊತ್ತಿತ್ತು. ಆದರೆ ಗೆಲುವಿನ ಅಂತರ ಇಷ್ಟೊಂದು ಇರುತ್ತದೆ ಎಂದು ಊಹಿಸಿರಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ನಾನು ಚುನಾವಣೆಯಲ್ಲಿ ಸೋಲು ಅನುಭವಿಸಿದ್ದರೂ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನು ಕಡೆಗಣಿಸಿಲ್ಲ. ಹಾಗಾಗಿ ಉಸಿರು ಇರುವ ತನಕ ಜನಸೇವೆ ಬಿಡುವುದಿಲ್ಲ. ನನ್ನ ರಾಜಕೀಯ ಜೀವನದಲ್ಲಿ ಎಂದು ನಂಬಿದವರ ಕೈ ಬಿಡುವುದಿಲ್ಲ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದೆರಡು ಬಾರಿ ಚುನಾವಣೆಗೆ ನಿಂತು ಸೋಲು ಅನುಭವಿಸಿ ಮತದಾರರ ಕೈಕಾಲು ಹಿಡಿದು ಶಾಸಕರಾಗುವುದು ಸುಲಭ. ಆದರೆ ಸಚಿವ ಮತ್ತು ಶಾಸಕನಾಗಿದ್ದವನ ಮಗ ವೈದ್ಯಕೀಯ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡುವುದು ತೀರ ಅಪರೂಪ ಎಂದು ತಮ್ಮ ಮಗನ ಸಾಧನೆ ಕೊಂಡಾಡಿದರು.

ಜನಪರ ಕೆಲಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ: ಸಂಸದ ಯದುವೀರ್ ಮಾತನಾಡಿ, ಮೈಸೂರು ಸಂಸ್ಥಾನವನ್ನಾಳಿದ ಯದು ವಂಶದ ಮಹಾರಾಜರು ನಾಡಿನ ಜನರ ಏಳಿಗೆಗೆ ಅಪಾರ ಕೊಡುಗೆ ನೀಡಿದ್ದು, ಜನಪರ ಕೆಲಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ಜನರ ಆಶೀರ್ವಾದ ನನ್ನನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದು, ಅವರ ನಂಬಿಕೆಗೆ ಚ್ಯುತಿ ಬಾರದಂತೆ ಕೆಲಸ ಮಾಡುತ್ತೇನೆ ಎಂದ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಮತ್ತು ಜನಸೇವೆ ಜಗತ್ತಿಗೆ ನೀತಿಪಾಠ ಎಂದರು.

ಮೈಸೂರು ಮಹಾರಾಜರಿಗೆ ಮಕ್ಕಳು ಇಲ್ಲದಿದ್ದರೂ ನಾಡಿನ ಜನರನ್ನು ತಮ್ಮ ಮಕ್ಕಳೆಂದು ಭಾವಿಸಿ ಭದ್ರ ಬದುಕು ಕಟ್ಟಿಕೊಡಲು ರಾಜ ನೀತಿಯ ಕೆಲಸ ಮಾಡಿದ ರಾಜರುಗಳ ಸೇವೆಗೆ ಎಲ್ಲರೂ ತಲೆ ಬಾಗಬೇಕು. ರಾಜಧರ್ಮದ ಮೂಲಕ ರಾಜಧರ್ಮ ಕಾಪಾಡಿ ಜನಸೇವೆ ಮಾಡಿದ ಮೈಸೂರು ಸಂಸ್ಥಾನದ ಎಲ್ಲಾ ಮಹಾರಾಜರುಗಳ ಸೇವೆ ಇತಿಹಾಸ ಪುಟಗಳಲ್ಲಿ ಸೇರಿದೆ ಎಂದರು.

ತಂದೆ ರಾಜಕಾರಣದಲ್ಲಿ ಇರುವವರೆಗೂ ನಾನು, ಸಹೋದರ ರಾಜಕಾರಣಕ್ಕೆ ಬರಲ್ಲ!

ಕೆ.ಆರ್.ನಗರ: ನಮ್ಮ ತಂದೆ ಸಾ.ರಾ.ಮಹೇಶ್ ಅವರು ಸಕ್ರೀಯ ರಾಜಕಾರಣದಲ್ಲಿ ಇರುವವರೆಗೂ ನಾನು ಮತ್ತು ನನ್ನ ಸಹೋದರ ಚುನಾವಣಾ ಅಖಾಡಕ್ಕೆ ಧುಮುಕುವುದಿಲ್ಲ ಎಂದು ಡಾ.ಸಾ.ರಾ.ಧನುಷ್ ಸ್ಪಷ್ಟಪಡಿಸಿದರು.

ಸಮಾರಂಭದಲ್ಲಿ ಮಾತನಾಡಿದ ಅವರು, ವೈದ್ಯಕೀಯ ವೃತ್ತಿಯನ್ನೇ ಕಾಯಕವಾಗಿ ಮಾಡುತ್ತೇನೆ. ಪೋಷಕರು ಮತ್ತು ಸುತ್ತೂರು ಶ್ರೀಗಳ ಆಶೀರ್ವಾದದಿಂದ ವೈದ್ಯನಾಗಿದ್ದು, ರೋಗಿಗಳ ಆರೋಗ್ಯ ಕಾಪಾಡಲು ಗಮನ ಹರಿಸುವ ಮೂಲಕ ಪ್ರತಿ ತಿಂಗಳು 2 ದಿನ ಸಾಲಿಗ್ರಾಮ ಮತ್ತು ಕೆ.ಆರ್.ನಗರ ಜನತೆಯ ವೈದ್ಯಕೀಯ ಸೇವೆಗಾಗಿ ಮುಡುಪಾಗಿಡುತ್ತೇನೆ. ನನ್ನ ವೈದ್ಯಕೀಯ ಜೀವನದಲ್ಲಿ ಬಡವರಿಂದ ಹಣ ಪಡೆದು ಚಿಕಿತ್ಸೆ ನೀಡುವುದಿಲ್ಲ ಎಂದು ಸೂತ್ತೂರು ಶ್ರೀಗಳ ಮುಂದೆ ಪ್ರತಿಜ್ಞೆ ಮಾಡಿದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಚನ್ನಬಸಪ್ಪ, ಮಾಜಿ ಸದಸ್ಯ ಎಂ.ಟಿ.ಕುಮಾರ್ ಮಾತನಾಡಿದರು. ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ವಿಜಯ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಅಣ್ಣೇಗೌಡ, ಜಿಪಂ ಮಾಜಿ ಸದಸ್ಯ ಸಿ.ಜೆ.ದ್ವಾರಕೀಶ್, ಕೆ.ಆರ್.ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಅಮ್ಮ ಸಂತೋಷ್, ಜಿಲ್ಲಾ ಪತ್ರ ಬರಹಗಾರ ರಾಜೀವ್, ಜಿಲ್ಲಾ ಬಿಜೆಪಿ ಮಾಜಿ ಉಪಾಧ್ಯಕ್ಷ ವೆಂಕಟೇಶ್, ಕರ್ನಾಟಕ ವಸ್ತು ಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್, ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ರಾಜಣ್ಣ, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಜಿಲ್ಲಾ ಯುವ ಜೆಡಿಎಸ್ ಮುಖಂಡ ಹೆಚ್.ಕೆ.ಮಧುಚಂದ್ರ, ಜಿಲ್ಲಾ ಗ್ರಾಮಂತರ ಯುವ ಜೆಡಿಎಸ್ ಉಪಾಧ್ಯಕ್ಷ ಕುಚೇಲ, ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ.ಪ್ರಕಾಶ್, ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮಿ, ಕಾರ್ಯದರ್ಶಿ ವಿ.ಮೋಹನಕುಮಾರಿ, ರೂಪ, ತಾಪಂ ಮಾಜಿ ಸದಸ್ಯ ತಮ್ಮಣ್ಣ, ಪುರಸಭೆ ಸದಸ್ಯರಾದ ಕೆ.ಎಲ್.ಜಗದೀಶ್, ಉಮೇಶ್, ಸಂತೋಷ್ ಗೌಡ, ಸರೋಜ, ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಮುಖಂಡರಾದ ಬಾಲಾಜಿ ಗಣೇಶ್, ಸಾಗರ್, ಯೋಗೇಶ್, ಅನೀಫ್ ಗೌಡ, ಸುನೀಲ್, ಕಿಶೋರ್, ಶಂಕರ ಇದ್ದರು.

ಸಿಂಧುವಳ್ಳಿ ನೂತನ ಗ್ರಾಪಂ ಕಟ್ಟಡಕ್ಕೆ ಗುದ್ದಲಿ ಪೂಜೆ

ನಂಜನಗೂಡು, ಜು.7– ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ನರೇಗಾ ಯೋಜನೆಯಡಿ 44 ಲಕ್ಷ ರೂ. ವೆಚ್ಚದಲ್ಲಿ ನೂತನ ಗ್ರಾಪಂ ಕಟ್ಟಡ ನಿರ್ಮಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಸಿಂಧುವಳ್ಳಿಯಲ್ಲಿ ನೂತನ ಗ್ರಾಪಂ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಿಂಧುವಳ್ಳಿಯಲ್ಲಿ ಗ್ರಾಪಂ ಕಟ್ಟಡವಿಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಆ ಕೊರತೆ ನೀಗಿಸಲು ನರೇಗಾ ಯೋಜನೆಯಡಿ 44 ಲಕ್ಷ ಅನುದಾನದಲ್ಲಿ ಗ್ರಾಪಂ ಕಟ್ಟಡ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಶೀಘ್ರ ಉತ್ತಮ ಗುಣಮಟ್ಟದ ಗ್ರಾಪಂ ಕಟ್ಟಡ ನಿರ್ಮಾಣವಾಗಲಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.


ನೂತನ ಗ್ರಾಪಂ ಕಟ್ಟಡ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ತಾಲೂಕಿನ ಸಿಂಧುವಳ್ಳಿ ಗ್ರಾಮದ ಸಾಮಾನ್ಯ ಜನರ ಬೀದಿಯಲ್ಲಿ ಚರಂಡಿ ಮತ್ತು ರಸ್ತೆ ಕಾಮಗಾರಿ ಹಾಗೂ ಹೊಸ ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಕಂಬಗಳನ್ನು ವಿತರಿಸುವಂತೆ ಮನವಿ ಮಾಡಲಾಗಿದೆ. 2023–24ನೇ ಸಾಲಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿಶೇಷ ಅನುದಾನದಡಿ ಸಾಮಾನ್ಯ ವರ್ಗದ ಬೀದಿಯ ಕಾಂಕ್ರೀಟ್ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಾಗಿ 20 ಕೋಟಿ ಬಿಡುಗಡೆಗೊಂಡಿತ್ತು ಆ ಅನುದಾನದಲ್ಲಿ 6 ರಿಂದ 7 ಕೋಟಿ ಅನುದಾನ ಉಳಿ ಕೆಂಯಾಗಿದ್ದು, ಅದನ್ನು ಬಳಸಿಕೊಂಡು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಾಮಾನ್ಯ ವರ್ಗದ ಬೀದಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶೀಘ್ರ ಗುದ್ದಲಿ ಪೂಜೆ ನೆರವೇರಿಸಲಾಗುವುದು. ಅಲ್ಲದೇ ಅಗತ್ಯವಿರುವ ಕಡೆ ಮೂಲ ಸೌಕರ್ಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಮಾಜಿ ಶಾಸಕರಾದ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಗ್ರಾಪಂ ಅಧ್ಯಕ್ಷರಾದ ಹೊಣಕಾರನಾಯಕ, ಉಪಾಧ್ಯಕ್ಷೆ ಲತಾ, ಗ್ರಾಪಂ ಸದಸ್ಯರಾದ ಕೃಷ್ಣಕುಮಾರ್, ಮಣಿಕಂಠ, ಶಾಂತಮಲ್ಲು ಮಂಗಳಮ್ಮ, ಗುರುಪ್ರಸಾದ್, ಸ್ವಾಮಿ, ಸಿದ್ದರಾಜು, ಪಿಡಿಓ ಶಬಾನಾ ಭಾನು, ಮುಖಂಡರಾದ ಶಿವಪ್ಪ ದೇವರು, ಗಣೇಶ್ ನಾಯಕ್, ರಂಗಸ್ವಾಮಿ, ಬಸಪ್ಪ ಶಿವಶಂಕರ್, ಅರುಣ್, ಸ್ವಾಮಿ, ಶಾಂತಪ್ಪ ಚಂದನ್ ಗೌಡ ಸೇರಿದಂತೆ ಹಲವರಿದ್ದರು.

ರೈತರ ಅನ್ಯಾಯ ತಡೆಗಟ್ಟಲು ರೈತ ಸಂಘ ಅಗತ್ಯ

ಮಲ್ಕುಂಡಿ, ಜು.7– ಗ್ರಾಮೀಣ ಭಾಗದಲ್ಲಿ ರೈತರಿಗೆ ಅನ್ಯಾಯವಾಗುವುದನ್ನು ತಡೆಗಟ್ಟಲು ರೈತ ಸಂಘ ಅಗತ್ಯ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಕಾರ್ಯದರ್ಶಿ ಮಂಜು ಕಿರಣ್ ತಿಳಿಸಿದರು.

ಇಲ್ಲಿಗೆ ಸಮೀಪದ ತರಗನಹಳ್ಳಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಜೀವದ ಜೊತೆ ಚೆಲ್ಲಾಟವಾಡುತ್ತಿವೆ. ರೈತರು ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ನೀಡದೆ ರೈತರಿಗೆ ಅನ್ಯಾಯ ಮಾಡುತ್ತಿವೆ. ಯಾವುದೇ ಪಕ್ಷದ ರಾಜಕಾರಣಿಗಳನ್ನು ರೈತರು ನಂಬಬಾರದು. ಚುನಾವಣೆ ಸಂದರ್ಭ ನಾನು ರೈತರ ಪರ ಕೆಲಸ ಮಾಡುತ್ತೇನೆಂದು ಸುಳ್ಳು ಭರವಸೆ ನೀಡಿ ಆಡಳಿತಕ್ಕೆ ಬಂದ ಮೇಲೆ ರೈತರ ಬಗ್ಗೆ ಕಾಳಜಿ ತೋರುವುದಿಲ್ಲ. ಗ್ರಾಮೀಣ ಭಾಗದಲ್ಲಿ ರೈತ ಸಂಘಗಳನ್ನು ಸ್ಥಾಪಿಸಿ ರೈತರಿಗೆ ಅನ್ಯಾಯವಾಗುವುದನ್ನು ತಡೆಗಟ್ಟಲು ಒಗ್ಗಟ್ಟಿನಿಂದ ಹೋರಾಡಬೇಕು ಎಂದರು.


ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನಾಮಫಲಕ ಅನಾವರಣಗೊಳಿಸಲಾಯಿತು.

ಈ ವೇಳೆ ಕಂತೆ ಮಹದೇಶ್ವರಬೆಟ್ಟದ ಶಿಲಾ ಮಠಾಧ್ಯಕ್ಷ ಮಹಾಂತ ದೇಶಿಕೇಂದ್ರ ಸ್ವಾಮೀಜಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಪ್ರಕಾಶ್, ಪಾಪಣ್ಣ, ಮಹೇಶ್, ಷಣ್ಮುಖಸ್ವಾಮಿ, ಬಸವಣ್ಣ, ಲೋಕೇಶ್, ಸ್ವಾಮಿ, ರಾಜು, ಉಮೇಶ್, ಶಿವಕುಮಾರ್, ಕರಿಯಪ್ಪ, ಸಿದ್ದಲಿಂಗಸ್ವಾಮಿ ಸೇರಿದಂತೆ ಇದ್ದರು.

ಬೆಟ್ಟದಪುರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಬೆಟ್ಟದಪುರ, ಜು.7– ಗ್ರಾಮದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಕೊಡಗು ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಡೈರೆಕ್ಟರ್ ಡಾ.ಎ.ಜೆ.ಲೋಕೇಶ್ ಮಾತನಾಡಿ, ಗ್ರಾಮೀಣ ಜನತೆ ಇಂತಹ ಆರೋಗ್ಯ ಶಿಬಿರಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.


ಬೆಟ್ಟದಪುರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಡಾ.ನಂಜುಂಡಯ್ಯ ಮಾತನಾಡಿ, ನಮ್ಮಲ್ಲಿ ಎಲ್ಲಾ ರೀತಿಯ ಚಿಕಿತ್ಸೆ ಉಚಿತವಾಗಿ ದೊರೆಯುವುದರಿಂದ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳು ಯಾವುದೇ ಶುಲ್ಕವಿಲ್ಲದೇ ಹಾಗೂ ಎಪಿಎಲ್ ಕಾರ್ಡ್ ಹೊಂದಿರುವವರು ಶೇ.30ರ ರಿಯಾಯಿತಿಯೊಂದಿಗೆ ಆರೋಗ್ಯ ತಪಾಸಣೆ ಮತ್ತು ಮತ್ತಿತರ ಚಿಕಿತ್ಸೆ ಪಡೆಯಬಹುದು ಎಂದರು. ಶಿಬಿರದಲ್ಲಿ 300ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು.

ಬೆಟ್ಟದಪುರ ಆಸ್ಪತ್ರೆ ಡಾ.ಪೂಜಾ, ಡಾ.ರಾಜೇಶ್, ಮಡಿಕೇರಿ ಮೆಡಿಕಲ್ ಕಾಲೇಜು ಪ್ರೊ.ಪ್ರಮೋದ್, ಡಾ.ಮೋನಿಕಾ, ಡಾ.ಚಂದ್ರಶೇಖರ್, ಪಿಡಿಓ ಮಂಜುನಾಥ್, ಆರೋಗ್ಯ ನಿರೀಕ್ಷಣಾಧಿಕಾರಿ ಕುಮಾರ್, ತಾಲೂಕಿನ ವೈದ್ಯರು, ಅಂಗನವಾಡಿ, ಆಶಾ ಕಾರ್ಯ ಕರ್ತೆಯರು, ಆರೋಗ್ಯ ಸಹಾಯಕಿಯರು, ಕಾರ್ಯಕರ್ತೆಯರು ಇತರರಿದ್ದರು.

ಆರ್.ಚೆಲುವರಾಜ್ ಹುಟ್ಟುಹಬ್ಬ ಆಚರಣೆ


ತಿ.ನರಸೀಪುರದಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಅಭಿಮಾನಿ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚೆಲುವರಾಜ್ ಹುಟ್ಟುಹಬ್ಬ ಆಚರಿಸಿಕೊಂಡರು. ಈ ವೇಳೆ ಕೆಂಪಯ್ಯನಹುಂಡಿ ರವಿ, ಶಂಕರ್, ದಾಸ್, ಮಧು, ಶಿವರಾಜ್, ಶಿವು, ಪ್ರವೀಣ, ಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಕೋಟೆಯಲ್ಲಿ ಅಂಗನವಾಡಿ ಹಬ್ಬ ಆಚರಣೆ


ಕಾರ್ಯಕ್ರಮವನ್ನು ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ದೀಪಾ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜು.7– ಅಂಗನವಾಡಿಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಹಾಗೂ ಅಂಗನವಾಡಿಗಳಲ್ಲಿ ಸಿಗುತ್ತಿರುವ ಶಾಲಾ ಪೂರ್ವ ಶಿಕ್ಷಣದ ಪ್ರಾಮುಖ್ಯತೆಯನ್ನು, ಪೋಷಕರಿಗೆ ತಿಳಿಸಲು ಇಂತಹ ಹಬ್ಬಗಳು ಪರಿಣಾಮಕಾರಿಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ದೀಪಾ ತಿಳಿಸಿದರು.

ತಾಲೂಕಿನ ಹೈರಿಗೆ ಗ್ರಾಪಂ ಹಾಗೂ ಹೆಚ್‌ಸಿಎಲ್ ಸಂಸ್ಥೆ ಸಹಯೋಗದಲ್ಲಿ ಮಕ್ಕಳ ಜಾಗೃತಿ ಸಂಸ್ಥೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಅಂಗನವಾಡಿ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಜಾಗೃತಿ ಸಂಸ್ಥೆಯ ಈ ಕಾರ್ಯಕ್ರಮ ಅಂಗನವಾಡಿಗಳಲ್ಲಿ ಶಾಲಾಪೂರ್ವ ಶಿಕ್ಷಣದ ಪ್ರಾಮುಖ್ಯತೆಯನ್ನು ಸಮುದಾಯಕ್ಕೆ ತಿಳಿಸಲು ಹಾಗೂ ಆರಂಭಿಕ ಬಾಲ್ಯ ಶಿಕ್ಷಣದ ಗುಣಮಟ್ಟ ಬಲಪಡಿಸಲು ಸಮುದಾಯದ ಪಾತ್ರ ಬಹುಮುಖ್ಯವಾಗಿದ್ದು, ಜೊತೆಗೆ ಮಾದರಿ ಅಂಗನವಾಡಿ ಹೇಗಿರಬೇಕು ಎಂಬುದನ್ನು ತಿಳಿಸಲು ಮಾದಾಪುರ ವೃತ್ತದ ಅಂಗನವಾಡಿ ಮಕ್ಕಳ ಪೋಷಕರಿಗೆ, ಸಮುದಾಯದ ಮುಖಂಡರಿಗಾಗಿ ಹಮ್ಮಿಕೊಳ್ಳಲಾಗಿದೆ ಎಂದರು.

ಈ ವೇಳೆ ಮಕ್ಕಳಲ್ಲಿ ಪ್ರಮುಖವಾಗಿ ಆಗುವ ದೈಹಿಕ, ಮಾತು ಮತ್ತು ಭಾಷೆ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಬೆಳವಣಿಗೆ, ಪೋಷಣೆ ಸಂಬಂಧಿಸಿದಂತೆ ಪೋಷಕರಿಗೆ ಕ್ರಿಯಾತ್ಮಕ ಆಟದ ಸ್ಟಾಲ್‌ಗಳನ್ನು ಆಯೋಜಿಸಲಾಗಿತ್ತು. ಪ್ರತಿಯೊಂದು ಸ್ಟಾಲ್‌ನಲ್ಲಿ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಪೋಸ್ಟರ್‌ಗಳನ್ನು ಮಾದಾಪುರ ವೃತ್ತದ ಶಿಕ್ಷಕಿಯರು, ಮಕ್ಕಳ ಜಾಗೃತಿ ಸಂಸ್ಥೆ ಸಂಯೋಜಕರೊಡಗೂಡಿ ಪೋಷಕರಿಗೆ ವಿವರಿಸಿದರು. ಅಲ್ಲದೇ ಮಕ್ಕಳಿಗೆ ಚಟುವಟಿಕೆಗಳನ್ನು ಮಾಡಿಸಿದರು.

ಕಾರ್ಯಕ್ರಮದಲ್ಲಿ ಮೇಲ್ವಿಚಾರಕಿಯರಾದ ರಂಜಿತಾ, ಇಂದುಶ್ರೀ, ಗಾಯತ್ರಿ, ಚಿನ್ನಮ್ಮ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಮಸ್ವಾಮಿ, ತಾಪಂ ಮಾಜಿ ಅಧ್ಯಕ್ಷೆ ಚಂದ್ರಮ್ಮ, ಹಲಗೇಗೌಡ, ದಿನೇಶ್, ಜಯಮ್ಮ, ಪುಷ್ಪ, ಅನಿಲ್ ಕುಮಾರ್, ಶಿವಣ್ಣ, ಶ್ರೀಧರ್, ಸಿದ್ದಲಿಂಗೇಗೌಡ, ದೇವರಾಜು, ಅವ್ವಯ್ಯಮ್ಮ, ಮಂಜು, ಉಮೇಶ, ಶಿವರಾಜು, ಹೈರಿಗೆ ಗ್ರಾಮದ ಮುಖಂಡರು, ಸ್ಥಳೀಯ ಸಂಘ ಸಂಸ್ಥೆಗಳು, ಪ್ರತಿಭೆ ಪ್ರತಿನಿಧಿಗಳು, ಪತ್ರಿಕಾ ಮಿತ್ರರಾದ ಸಿದ್ದಲಿಂಗೇಗೌಡರು, ಮಕ್ಕಳ ಜಾಗೃತಿ ಸಂಸ್ಥೆ ವ್ಯವಸ್ಥಾಪಕಿ ದಿವ್ಯ, ನವೀನ್ ಕುಮಾರ ಮತ್ತು ತಂಡದವರಿದ್ದರು. ಅಲ್ಲದೇ 150ಕ್ಕೂ ಹೆಚ್ಚು ಪೋಷಕರು, 25 ಕ್ಕೂ ಹೆಚ್ಚು ವಿವಿಧ ಇಲಾಖೆ ಅಧಿಕಾರಿಗಳು, ಶಿಕ್ಷಕಿಯರು, ಸಹಾಯಕಿಯರು ಇದ್ದರು.

ಬನ್ನೂರಿನ ವಿವಿಧೆಡೆ ಸೇವಾ ಕಾರ್ಯಗಳೊಂದಿಗೆ

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಹುಟ್ಟುಹಬ್ಬ ಆಚರಣೆ



ಯಾಚೇನಹಳ್ಳಿಯ ಮಮತೆಯ ಮಡಿಲು ಆಶ್ರಮದಲ್ಲಿ ಹಾಗೂ ಬನ್ನೂರಿನ ಕಾವೇರಿ ಸರ್ಕಲ್‌ನಲ್ಲಿ ಮೈಮುಲ್ ಅಧ್ಯಕ್ಷ ಚೆಲುವರಾಜು ಹುಟ್ಟುಹಬ್ಬ ಆಚರಿಸಿಕೊಂಡರು.

ತಿ.ನರಸೀಪುರ, ಜು.7– ಬನ್ನೂರು ಹೋಬಳಿಯ ವಿವಿಧೆಡೆ ಸೇವಾ ಕಾರ್ಯಗಳೊಂದಿಗೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ತಾಪಂ ಮಾಜಿ ಅಧ್ಯಕ್ಷರು ಹಾಗೂ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರು 40 ವಸಂತಗಳನ್ನು ಪೂರೈಸಿ 41ನೇ ವರ್ಷಕ್ಕೆ ಕಾಲಿಟ್ಟ ಹಿನ್ನೆಲೆಯಲ್ಲಿ ಅಭಿಮಾನಿಗಳು, ಸ್ನೇಹಿತರು ಬನ್ನೂರು ಪಟ್ಟಣದ ಸಂತೇಮಾಳದ ಎಪಿಎಂಸಿ ಆವರಣದಲ್ಲಿ ವಿಜೃಂಭಣೆಯಿಂದ ಹುಟ್ಟುಹಬ್ಬ ಆಚರಿಸಿ ಅವರಿಗೆ ಶುಭ ಕೋರಿದರು. ಈ ವೇಳೆ ಅಭಿಮಾನಿಗಳು ಚೆಲುವರಾಜು ಅವರಿಗೆ ಚಾಮುಂಡೇಶ್ವರಿಯ ಬೆಳ್ಳಿ ವಿಗ್ರಹ ನೀಡಿ ಸನ್ಮಾನಿಸಿದರು.

ಯಾಚೇನಹಳ್ಳಿಯ ಮಮತೆಯ ಮಡಿಲು ಆಶ್ರಮದಲ್ಲಿ ವೃದ್ಧರಿಗೆ ಬೆಳಗ್ಗಿನ ಉಪಹಾರ, ಹಣ್ಣು–ಬ್ರೆಡ್‌ಗಳನ್ನು ಯಾಚೇನಹಳ್ಳಿ ಅಶೋಕ್ ಮತ್ತು ದೇವರಾಜು ನೇತೃತ್ವದಲ್ಲಿ ಚೆಲುವರಾಜು ವಿತರಿಸಿದರು.

ಬನ್ನೂರಿನ ಕಾವೇರಿ ಸರ್ಕಲ್‌ಗೆ ಆಗಮಿಸಿದ ಚೆಲುವರಾಜು ಅವರನ್ನು ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ್ದ ಅಭಿಮಾನಿಗಳು ಪಟಾಕಿ ಸಿಡಿಸಿ ಸ್ವಾಗತ ಕೋರಿದರು. ಈ ವೇಳೆ ಯುವ ಮುಖಂಡ, ಪುರಸಭೆ ಸದಸ್ಯ ಮೂರ್ತಿ ಚೆಲುವರಾಜು ಅವರಿಗೆ 50 ಕೆಜಿ ತೂಕದ ಸೇಬಿನ ಹಾರ ಹಾಕಿ ಹುಟ್ಟುಹಬ್ಬದ ಶುಭ ಕೋರಿದರು. ಈ ವೇಳೆ ನೂರಾರು ಸ್ನೇಹಿತರು, ಅಭಿಮಾನಿಗಳು ಆಗಮಿಸಿ ಹುಟ್ಟುಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡರು.

ಪುರಸಭೆ ಸದಸ್ಯ ಮೂರ್ತಿ ಮಾತನಾಡಿ, ಚೆಲುವರಾಜು ಅವರು ಕ್ಷೇತ್ರದಲ್ಲಿ ಅಜಾತ ಶತ್ರುವಾಗಿದ್ದು, ಎಲ್ಲಾ ಸಮಾಜದವರನ್ನು ಪ್ರೀತಿಯಿಂದ ಕಾಣುತ್ತಿದ್ದಾರೆ. ತಾಪಂ ಹಾಗೂ ಮೈಮುಲ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಹಾಗೂ ಸಲ್ಲಿಸುತ್ತಿರುವ ಅವರಿಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ರಾಜಕೀಯ ಅಧಿಕಾರ ದೊರಕಿ ಕ್ಷೇತ್ರದ ಜನಸೇವೆಗೆ ತಮ್ಮನ್ನು ತೊಡಗಿಸಿಕೊಳ್ಳುವಂತಾಗಲಿ ಎಂದು ಆಶಿಸಿದರು.

ಕಾವೇರಿ ವೃತ್ತದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 41 ಕೆಜಿ ತೂಕದ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡು ಮಾತನಾಡಿದ ಆರ್.ಚೆಲುವರಾಜು, ಬನ್ನೂರು ಹೋಬಳಿ ನನ್ನ ತವರೂರಾಗಿದ್ದು, ಇಲ್ಲಿನ ಜನತೆ ತಮ್ಮ ಮೇಲೆ ಇಟ್ಟಿರುವ ಅಭಿಮಾನಕ್ಕೆ ಋಣಿಯಾಗಿದ್ದೇನೆ. ಪ್ರೀತಿಯಿಂದ ಕರೆದು ಜನ್ಮದಿನದ ಶುಭ ಕೋರಿದ್ದಾರೆ. ಅವರ ಅಭಿಮಾನಕ್ಕೆ ಬೆಲೆ ಕಟ್ಟಲಾಗದು. ಅಭಿಮಾನಿಗಳು, ಹಿತೈಷಿಗಳು ಹಾಗೂ ಸ್ನೇಹಿತರ ವಿಶ್ವಾಸ ಸದಾ ಕಾಲ ಹೀಗೆ ಮುಂದುವರೆಯಲಿ. ತಾಯಿ ಚಾಮುಂಡೇಶ್ವರಿ, ವಡ್ಗಲ್ ರಂಗನಾಥಸ್ವಾಮಿ ನನ್ನೆಲ್ಲಾ ಸ್ನೇಹ ಬಳಗಕ್ಕೆ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸಿದರು.

> ಚೆಲುವರಾಜು ಅವರು ವೈಯಕ್ತಿಕವಾಗಿ ಶಿಕ್ಷಣ, ಕ್ರೀಡೆ ಸೇರಿದಂತೆ ಸಂಕಷ್ಟದಲ್ಲಿರುವವರಿಗೆ ನೆರವು ನೀಡುವ ಮೂಲಕ ಸೇವಾ ಕಾರ್ಯ ಮಾಡಿಕೊಂಡು ಬರುತ್ತಿದ್ದಾರೆ. ಅಲ್ಲದೇ ಹೋಬಳಿ ಮಟ್ಟದಲ್ಲಿ ತಮ್ಮ ಪ್ರತಿನಿಧಿಗಳನ್ನು ನೇಮಿಸುವ ಮೂಲಕ ಸ್ಥಳೀಯ ಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ರಾಜ್ಯಕ್ಕೆ ಮಾದರಿಯಾಗುವತ್ತ ಸಾಗಿದ್ದಾರೆ. ಹಾಗಾಗಿ ಅವರಿಗೆ ಜನ ಸೇವೆ ಮಾಡಲು ರಾಜಕೀಯ ಶಕ್ತಿ ಹಾಗೂ ಆರೋಗ್ಯ ದೊರಕುವಂತಾಗಲಿ. – **ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ.**

ಈ ವೇಳೆ ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಪಿಎಸಿಎಸ್ ನಿರ್ದೇಶಕ ಹೇಮಂತ್ ಕುಮಾರ್ ರೆಡ್ಡಿ, ಪುರಸಭಾ ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ, ಪೈಲ್ವಾನ್ ರಮೇಶ್, ಚಂದ್ರು, ಕಾರ್ತಿಕ್, ರಾಚಪ್ಪಾಜಿ, ಯಶ್ವಂತ್, ಕಾರ್ ಮಹೇಶ್, ಸಂತೋಷ್, ಬಾಬು, ಶ್ರೀಧರ್, ಪುರಸಭಾ ನಾಮ ನಿರ್ದೇಶಕ ಶಿವಣ್ಣ, ಮಮತೆಯ ಮಡಿಲು ವೃದ್ಧಾಶ್ರಮದ ಸಂಸ್ಥಾಪಕ ಟ್ರಸ್ಟಿ ನಾದಾನಂದ ಸ್ವಾಮೀಜಿ, ಡೈರಿ ಅಧ್ಯಕ್ಷ ಉಮೇಶ್, ಸೊಸೈಟಿ ನಿರ್ದೇಶಕರಾದ ವೈ.ಎಂ.ಚಂದ್ರು ಬೋರೇಗೌಡ, ರೈತ ಮುಖಂಡರಾದ ತಮ್ಮೇಗೌಡ, ಕುರುಬೂರು ಗ್ರಾಪಂ ಉಪಾಧ್ಯಕ್ಷ ದೇವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ದಸಂಸ ತಾಲೂಕು ಸಂಚಾಲಕ ಸೋಮಶೇಖರ್, ಅಶೋಕ್ ಕುಮಾರ್, ಮಂಜು ಸೇರಿದಂತೆ ಇತರರಿದ್ದರು.

ಸಿದ್ದನಾಯಕ ನಿಧನ



ಕೆ.ಆರ್.ನಗರ, ಜು.7– ತಾಲೂಕಿನ ಸಾತಿ ಗ್ರಾಮದ ನಿವಾಸಿ ಸಿದ್ದನಾಯಕ(75) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಶಾಸಕರು, ಮಾಜಿ ಶಾಸಕರ ಗೆಲುವಿಗೆ ಸರ್ಕಾರದ ಅಕ್ರಮವೇ ಕಾರಣ

ಶಾಸಕ ಜಿ.ಡಿ.ಹರೀಶ್‌ಗೌಡ ಆಕ್ರೋಶ

- ಅಕ್ರಮವನ್ನು ಸಚಿವ ರಾಜಣ್ಣರೇ ಒಪ್ಪಿಕೊಂಡಿದ್ದಾರೆ
- ಮರು ಚುನಾವಣೆಗೆ ನ್ಯಾಯಾಲಯದಲ್ಲಿ ಮನವಿ
- ಸಹಕಾರ ಕ್ಷೇತ್ರವನ್ನು ಸರ್ಕಾರವೇ ಹಾಳುಗೆಡುವುತ್ತಿದೆ
- ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ನಿರಂತರ ಹಸ್ತಕ್ಷೇಪ


ಹರೀಶ್‌ಗೌಡ

ಮೈಸೂರು, ಜು.7 (ಬಿಎಲ್‌ಯು)– ಇತ್ತೀಚೆಗೆ ನಡೆದ ಮೈಸೂರು–ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ (ಎಂಸಿಡಿಸಿಸಿ) ಬ್ಯಾಂಕ್ ಚುನಾವಣೆಯಲ್ಲಿ ಸ್ವತಃ ರಾಜ್ಯ ಕಾಂಗ್ರೆಸ್ ಸರ್ಕಾರವೇ ಅಕ್ರಮ ವೆಸಗಿದ್ದರಿಂದ ಹಾಲಿ ಶಾಸಕರು ಹಾಗೂ ಮಾಜಿ ಶಾಸಕರು ಗೆಲುವು ಸಾಧಿಸಿದ್ದಾರೆ ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಆರೋಪಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಅಕ್ರಮ ನಡೆದಿದೆ. ಇದನ್ನು ಸ್ವತಃ ಸಹಕಾರ ಸಚಿವ ರಾಜಣ್ಣ ಅವರೇ ಒಪ್ಪಿಕೊಂಡಿದ್ದಾರೆ. ಚುನಾವಣೆಯಲ್ಲಿ ಅಕ್ರಮ ಎಸಗಲಾಗಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ ಎಂದು ಪ್ರಶ್ನಿಸಿದರು.

ಇಷ್ಟೆಲ್ಲಾ ಅಕ್ರಮ ಎಸಗಿರುವ ರಾಜಣ್ಣ ಅವರಿಗೆ ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ನಾನು ಯಾರ ರಾಜೀನಾಮೆಯನ್ನು ಕೇಳುವುದಿಲ್ಲ. ಅದು ಅವರ ಆತ್ಮಸಾಕ್ಷಿಗೆ ಬಿಟ್ಟ ವಿಚಾರ ಎಂದ ಹರೀಶ್‌ಗೌಡರು, ಸಚಿವ ರಾಜಣ್ಣ ಅವರಿಗೆ ತಿರುಗೇಟು ನೀಡಿದರು.

ಗೆಲುವಿಗಾಗಿ ವಾಮಮಾರ್ಗದ ಮೂಲಕ ಎಲ್ಲೆಲ್ಲಿ ಮತಗಳನ್ನು ಸೇರಿಸಿದ್ದಾರೋ ಆ ಕ್ಷೇತ್ರಗಳಿಗೆ ಮರು ಚುನಾವಣೆ ನಡೆಸುವಂತೆ ನ್ಯಾಯಾಲಯದಲ್ಲಿ ಮನವಿ ಮಾಡುತ್ತೇವೆ. ಜೊತೆಗೆ ಯಾವ ರೀತಿ ಚುನಾವಣಾ ಅಕ್ರಮ ನಡೆಸಿದ್ದೇವೆ ಎಂದು ಸಹಕಾರ ಸಚಿವ ರಾಜಣ್ಣ ನೀಡಿರುವ ಹೇಳಿಕೆಯನ್ನು ಕೂಡ ನ್ಯಾಯಾಲಯದ ಗಮನಕ್ಕೆ ತರುತ್ತೇವೆ. ನ್ಯಾಯಾಲಯದಿಂದ ನಮಗೆ ನ್ಯಾಯ ಸಿಗುತ್ತದೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.

ಸಹಕಾರ ಚುನಾವಣೆಯಲ್ಲಿ ರಾಜ್ಯ ಸರ್ಕಾರ ಸ್ಪಷ್ಟವಾಗಿ ಅಕ್ರಮ ನಡೆಸಿದೆ. ಈ ಮೂಲಕ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕಾದ ಸಹಕಾರ ಕ್ಷೇತ್ರವನ್ನು ಕಾಂಗ್ರೆಸ್ ಸರ್ಕಾರ ಹಾಳು ಮಾಡಲು ಮುಂದಾಗಿದೆ. ಇದಕ್ಕೆಲ್ಲಾ ಸಹಕಾರ ಸಚಿವ ರಾಜಣ್ಣ ಅವರೇ ಮೂಲ ಕಾರಣರಾಗಿದ್ದಾರೆ ಎಂದು ಆಪಾದಿಸಿದರು.

ಚುನಾವಣಾ ಅಕ್ರಮವನ್ನು ಯಾವ ರೀತಿ ನಡೆಸಬಹುದು ಎಂಬುದನ್ನು ರಾಜಣ್ಣ ಎಳೆ ಎಳೆಯಾಗಿ ಬಿಡಿಸಿಟ್ಟಿರುವುದು ಬಹಿರಂಗವಾಗಿದೆ. ಈ ವಿಚಾರವನ್ನು ನಾನು ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ ಎಂದು ಹೇಳಿದರು.

ಒಂದು ವೇಳೆ ಮತಗಳನ್ನು ಸರ್ಕಾರ ಸೇರಿಸದಿದ್ದರೆ ಇಬ್ಬರು ಶಾಸಕರು ಹಾಗೂ ಒಬ್ಬ ಮಾಜಿ ಶಾಸಕ ಸೋಲುವುದು ಖಚಿತವಾಗಿತ್ತು ಅವರೆಲ್ಲಾ ಗೆಲುವು ಸಾಧಿಸಿರುವುದು ಕೇವಲ ಒಂದೊಂದು ಮತಗಳಿಂದ. ಅದು ವಾಮಮಾರ್ಗದಲ್ಲಿ ಅಕ್ರಮದಿಂದ ಪಡೆದಿರುವ ಮತಗಳಾಗಿವೆ ಎಂದು ಹರೀಶ್‌ಗೌಡ ಆಕ್ರೋಶ ವ್ಯಕ್ತಪಡಿಸಿದರು.

ನಿಖಿಲ್ ಕುಮಾರಸ್ವಾಮಿ ಸಿಎಂ ಮಾಡುವುದೂ ನಮ್ಮ ಗುರಿ

ನಿಖಿಲ್ ಕುಮಾರಸ್ವಾಮಿ ಅವರನ್ನು ಸಹ ಮುಖ್ಯಮಂತ್ರಿ ಸ್ಥಾನದಲ್ಲಿ ನೋಡುವುದು ನಮ್ಮ ಕನಸು ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ಜೆಡಿಎಸ್ ಭವಿಷ್ಯದ ದೃಷ್ಟಿಯಿಂದ ನಿಖಿಲ್ ಕುಮಾರಸ್ವಾಮಿ ಪಕ್ಷದ ರಾಜ್ಯಾಧ್ಯಕ್ಷರಾಗಬೇಕು. ಆದರೆ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಈ ಉದ್ದೇಶ ಹೊಂದಿಲ್ಲ ಎಂದು ಸ್ಪಷ್ಟನೆ ನೀಡಿದರು.

ಹೆಚ್.ಡಿ.ದೇವೇಗೌಡರ ನಂತರ ಕುಮಾರಸ್ವಾಮಿ ಅವರು ಹೇಗೆ ಪಕ್ಷವನ್ನು ಮುನ್ನಡೆಸಿದ್ದಾರೋ ಹಾಗೆಯೇ ನಿಖಿಲ್ ಕುಮಾರಸ್ವಾಮಿ ಕೂಡ ಅದೇ ಹಾದಿಯಲ್ಲಿ ಸಾಗಬೇಕು ಎಂಬುದು ಪಕ್ಷದ ಕಾರ್ಯಕರ್ತರ ಅಭಿಲಾಷೆ. ನಿಖಿಲ್ ಅವರಿಗೆ ಆ ಶಕ್ತಿ ಇದೆ. ಆಗಸ್ಟ್ ತಿಂಗಳಲ್ಲಿ ನಿಖಿಲ್, ಮೈಸೂರಿನಲ್ಲಿ ಪ್ರವಾಸ ಮಾಡಲಿದ್ದಾರೆ ಎಂದು ಹೇಳಿದರು.

ಪಕ್ಷದ ವರಿಷ್ಠರು ನಮ್ಮ ತಂದೆಯ ಮನವೊಲಿಸುತ್ತಿದ್ದಾರೆ



ಜೆಡಿಎಸ್‌ನಿಂದ ದೂರವಿರುವ ನಮ್ಮ ತಂದೆ ಜಿ.ಟಿ.ದೇವೇಗೌಡರನ್ನು ಪಕ್ಷದ ವರಿಷ್ಠರು ಮನವೊಲಿಸುತ್ತಿದ್ದಾರೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು. ಜಿ.ಟಿ.ದೇವೇಗೌಡರು ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿರುವ ಬಗ್ಗೆ ಮೊದಲ ಬಾರಿಗೆ ಸ್ಪಷ್ಟನೆ ನೀಡಿದ ಅವರು, ನಮ್ಮ ತಂದೆಗೆ ಪಕ್ಷದ ವಿಚಾರವಾಗಿ ಬೇಸರ ಇರುವುದು ನಿಜ. ಈ ಕಾರಣದಿಂದ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದಾರೆ. ಆದರೆ ಪಕ್ಷದ ವರಿಷ್ಠರು ನಮ್ಮ ತಂದೆಯ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಇದು ನನ್ನ ಮನೆಯ ವೈಯಕ್ತಿಕ ವಿಚಾರವಾಗಿದ್ದು, ಈ ಬಗ್ಗೆ ಹೆಚ್ಚಿನ ಪ್ರತಿಕ್ರಿಯೆ ನೀಡುವುದಿಲ್ಲ. ಇಂತಹ ಬೆಳವಣಿಗೆಗಳ ಮಧ್ಯೆ ನಾನು ಕಾಂಗ್ರೆಸ್ ಸೇರುತ್ತೇನೆ ಎಂಬ ವದಂತಿಗಳು ಹಬ್ಬಿದ್ದು, ಇದು ಶುದ್ಧ ಸುಳ್ಳು ಎಂದು ಸ್ಪಷ್ಟನೆ ನೀಡಿದರು.

ಹುಣಸೂರು ಕ್ಷೇತ್ರದ ಜನರು ನನ್ನನ್ನು ಜೆಡಿಎಸ್ ಪಕ್ಷದಿಂದ ಗೆಲ್ಲಿಸಿದ್ದಾರೆ. ರಾಜಕೀಯ ಬೆಳವಣಿಗೆಗಳನ್ನು ಕ್ಷೇತ್ರದ ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಆದ ಕಾರಣ ಜನರ ನಂಬಿಕೆಗೆ ನಾನು ದ್ರೋಹ ಮಾಡುವುದಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡುವುದು ನಮ್ಮ ಉದ್ದೇಶ ಎಂದು ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫೀನಿಕ್ಸ್ (ತ) + ಮಾರ್ಗನ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸಿತಾರೆ ಜಮೀನ್ ಪರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕುಲದಲ್ಲಿ ಕೀಳ್ಯಾವುದೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಕುಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ) + ನವಗ್ರಹ (ಕ)	1+3 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.


ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಂತೂ ಹಳೆ ಆರ್‌ಎಂಸಿ ಕಸಕ್ಕೆ ಮುಕ್ತಿ!

‘ಮೈಸೂರು ಮಿತ್ರ’ನ ಫಲಶ್ರುತಿ


ಮೈಸೂರು ಬಂಬೂಬಜಾರ್‌ನ ಹಣ್ಣುಗಳ ಸಗಟು ಮಾರುಕಟ್ಟೆಯಲ್ಲಿ ರಾಶಿ ರಾಶಿ ಬಿದ್ದಿದ್ದ ಕಸದ ರಾಶಿಯನ್ನು ವಿಲೇವಾರಿ ಮಾಡಿರುವುದನ್ನು ಕಾಣಬಹುದು

ಮೈಸೂರು, ಜು.7(ಎಂಕೆ)– ಮೈಸೂರು ಬಂಬೂಬಜಾರ್‌ನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಯ ಹಣ್ಣುಗಳ ಸಗಟು ಮಾರುಕಟ್ಟೆಯಲ್ಲಿ ವಿಲೇವಾರಿಯಾಗದೇ ಕಳೆದ ಎರಡು ತಿಂಗಳಿಂದ ಬಿದ್ದಿದ್ದ ಭಾರಿ ಪ್ರಮಾಣದ ಕೊಳೆತ ಕಸವನ್ನು ಕಡೆಗೂ ವಿಲೇವಾರಿ ಮಾಡಲಾಗಿದೆ.

ಜು.4ರ ‘ಮೈಸೂರು ಮಿತ್ರ’ನಲ್ಲಿ ‘ಸ್ವಚ್ಛನಗರಿ ಮೈಸೂರು ಮಧ್ಯೆ ಇದೆ ತಿಪ್ಪೆಗುಂಡಿ; ಕೊಳೆತ ಕಸದಿಂದ ಹೊರ ಸೂಸುವ ದುರ್ವಾಸನೆಗೆ ಜನ ತತ್ತರ’ ಶೀರ್ಷಿಕೆಯಡಿ ಸುದ್ದಿ ಪ್ರಕಟವಾದ ಬಳಿಕ ಎಚ್ಚೆತ್ತ ಮಾರುಕಟ್ಟೆಯ ಗುತ್ತಿಗೆದಾರರು ಕಸ ವಿಲೇವಾರಿ ಮಾಡಿಸಿ, ಕಸ ಸುರಿಯುತ್ತಿದ್ದ ಸ್ಥಳ ಮಾತ್ರವಲ್ಲದೆ ಮಾರುಕಟ್ಟೆಯ ಪ್ರಮುಖ ಸ್ಥಳಗಳನ್ನು ಸ್ವಚ್ಛಗೊಳಿಸಿದ್ದಾರೆ. ಟಿಪ್ಪರ್‌ನಲ್ಲಿ 7 ಲೋಡ್‌ನಷ್ಟಿದ್ದ ಕೊಳೆತ ಕಸವನ್ನು ಜೆಸಿಬಿ ಮೂಲಕ ತುಂಬಿಸಿ ವಿಲೇವಾರಿ ಮಾಡಲಾಯಿತು.

ಈ ಕುರಿತು ‘ಮೈಸೂರು ಮಿತ್ರ’ನಿಗೆ ಪ್ರತಿಕ್ರಿಯೆ ನೀಡಿದ ಗುತ್ತಿಗೆದಾರರು, ಕಸ ಸುರಿಯುತ್ತಿದ್ದ ಜಾಗದಲ್ಲಿ ಚಪ್ಪಡಿ ಕಲ್ಲುಗಳನ್ನು ಹಾಕಿದ್ದರಿಂದ ಕಸ ವಿಲೇವಾರಿ ಮಾಡಲು ತೊಂದರೆಯಾಗಿ, ಸಾಕಷ್ಟು ದಿನದಿಂದ ಕಸವನ್ನು ತೆಗೆಯಲು ಸಾಧ್ಯವಾಗಿರಲಿಲ್ಲ. ಸದ್ಯ ಎಲ್ಲಾ ಕಸವನ್ನು ವಿಲೇವಾರಿ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಮಾರುಕಟ್ಟೆ ಕಸ ವಿಲೇವಾರಿಗೆ ಹೆಚ್ಚಿನ ಗಮನ ಹರಿಸಲಾಗುವುದು ಎಂದು ತಿಳಿಸಿದರು.

ಪೂರ್ಣಗೊಳಿಸಿಲ್ಲ!: ಸಗಟು ಮಾರುಕಟ್ಟೆಯೊಳಗೆ ಹಾದುಹೋಗಿರುವ ದೊಡ್ಡ ಮೋರಿಯ ಮುರಿದಿದ್ದ ಸ್ಲ್ಯಾಬ್ ತೆರವುಗೊಳಿಸಿ, ಹೊಸದಾಗಿ ಸ್ಲ್ಯಾಬ್ ಅಳವಡಿಸುವ ಕಾಮಗಾರಿಯೂ ಅರ್ಧಂಬರ್ಧವಾಗಿದೆ. ಈ ಬಗ್ಗೆ ಅಧಿಕಾರಿಗಳನ್ನು ಎಚ್ಚರಿಸಿದ್ದರೂ ಕಾಮಗಾರಿ ಆರಂಭಿಸಿಲ್ಲ. ತೆರೆದ ಮೋರಿ ಪಕ್ಕದಲ್ಲೇ ವಾಹನಗಳು ಸಂಚರಿಸಲಿದ್ದು, ಕೂಡಲೇ ಎಪಿಎಂಸಿ ಅಧಿಕಾರಿಗಳು ಗಮನಹರಿಸುವಂತೆ ಮಳಿಗೆದಾರರು ಒತ್ತಾಯಿಸಿದ್ದಾರೆ.

ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ

ಮಂಡ್ಯದ ಪ್ರಮೋದ್‌ಗೆ ‘ಮೋದಿ ಕಪ್’


ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 11 ವರ್ಷ ಪೂರೈಸಿದ ಹಿನ್ನೆಲೆ ಆಯೋಜಿಸಿದ್ದ ಅಂತರ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ(ಮೋದಿ ಕಪ್)ಯ ವಿಜೇತರಿಗೆ ಬಹುಮಾನ ವಿತರಿಸಿ, ಅಭಿನಂದಿಸಲಾಯಿತು.

ಮೈಸೂರು, ಜು.7(ಎಂಕೆ)– ಮೈಸೂರಿನ ಹೆಬ್ಬಾಳ್‌ನ ಲಕ್ಷ್ಮಿಕಾಂತನಗರದ ಯಜಮಾನ್ ವೃತ್ತದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 11 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 4ನೇ ವರ್ಷದ ಅಂತರ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ(ಮೋದಿ ಕಪ್) ನಡೆಯಿತು.

ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಎಂ.ಜೆ.ಕಿರಣ್‌ಗೌಡ ನೇತೃತ್ವದಲ್ಲಿ ರಾಕ್ ಜಿಮ್ ಹಾಗೂ ಅರ್ನಾಲ್ಡ್ ಜಿಮ್ ಸಹಯೋಗದೊಂದಿಗೆ ನಡೆದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ, ಹಾಸನ, ಕೊಡಗು ಹಾಗೂ ಚಾ.ನಗರದಿಂದ 50ಕ್ಕೂ ಹೆಚ್ಚು ದೇಹದಾರ್ಢ್ಯ ಸ್ಪರ್ಧಿಗಳು ಭಾಗವಹಿಸಿದ್ದರು.

ತೀವ್ರ ಪೈಪೋಟಿಯಿಂದ ಕೂಡಿದ್ದ ಸ್ಪರ್ಧೆಯಲ್ಲಿ ಮಂಡ್ಯದ ಪ್ರಮೋದ್ ‘ಮೋದಿ ಕಪ್’ ಜಯಿಸಿದರೆ, ಮೈಸೂರಿನ ಚಂದನ್ ‘ಬೆಸ್ಟ್ ಮಸಲರ್’, ಟಿ.ಸತೀಶ್ ‘ಬೆಸ್ಟ್ ಪೋಸರ್’ ಬಹುಮಾನ ಗೆದ್ದು ಸಂಭ್ರಮಿಸಿದರು. ದೇಹದಾರ್ಢ್ಯ ಸ್ಪರ್ಧೆಗೆ ಚಾಲನೆ ನೀಡಿದ ಮಾಜಿ ಶಾಸಕ ಎಲ್.ನಾಗೇಂದ್ರ ವಿಜೇತರಿಗೆ ಆಕರ್ಷಕ ಟ್ರೋಫಿಯೊಂದಿಗೆ ನಗದು ಬಹುಮಾನ ವಿತರಿಸಿ, ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಹಿನ್ನೆಲೆ ಸತತವಾಗಿ 4 ವರ್ಷಗಳಿಂದ ಅಂತರ ಜಿಲ್ಲಾ ಮಟ್ಟದ ಮೋದಿ ಕಪ್ ದೇಹದಾರ್ಢ್ಯ ಸ್ಪರ್ಧೆಯನ್ನು ಆಯೋಜಿಸುತ್ತಾ ಬರಲಾಗುತ್ತಿದ್ದು, ಈ ಭಾಗದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ವೀಕ್ಷಣೆ ಮಾಡುತ್ತಿರುವುದು ಸಂತಸ ತಂದಿದೆ ಎಂದು ಶ್ಲಾಘಿಸಿದರು.

ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಬಿಜೆಪಿ ಮುಖಂಡರಾದ ಕಿರಣ್‌ಗೌಡ ಅವರು, ಅದ್ಭುತವಾಗಿ ದೇಹದಾರ್ಢ್ಯ ಸ್ಪರ್ಧೆಯನ್ನು ಆಯೋಜನೆ ಮಾಡಿದ್ದಾರೆ. ಯುವಕ–ಯುವತಿಯರು ದೈಹಿಕವಾಗಿ ಆರೋಗ್ಯವಾಗಿರಲು ಪ್ರತಿನಿತ್ಯ ದೈಹಿಕ ಕಸರತ್ತು ನಡೆಸುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಈ ಕಾರ್ಯಕ್ರಮ ಯುವ ಸಮೂಹಕ್ಕೆ ಪ್ರೇರಣೆಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ದೇಹದಾರ್ಢ್ಯ ಸ್ಪರ್ಧೆ ವೀಕ್ಷಣೆಗೆ ಇಷ್ಟೊಂದು ಸಂಖ್ಯೆಯಲ್ಲಿ ಜನ ಸೇರಿರುವುದು ವಿಶೇಷ. ಕಿರಣ್‌ಗೌಡ ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಕಾರ್ಯಕ್ರಮ ಮಾಡಲಿ ಎಂದು ಶುಭ ಕೋರಿದರು. ಇದೇ ವೇಳೆ 20 ಕ್ಕೂ ಹೆಚ್ಚು ಮಂದಿ ಆಟೋ ಚಾಲಕರಿಗೆ ಸಮಸ್ತ ವಿತರಣೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 100 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ಮಾಜಿ ಸಂಸದ ಪ್ರತಾಪ್‌ಸಿಂಹ, ಮುಖಂಡ ಮೈ.ವಿ.ರವಿಶಂಕರ್, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಮುಖಂಡರಾದ ಜೈ ಶಂಕರ್, ಪೈಲ್ವಾನ್ ರವಿ, ಸೋಮಶೇಖರ್ ರಾಜು, ನಂಜಪ್ಪ, ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ದಿನೇಶ್ ಗೌಡ, ಆದರ್ಶ, ಹರೀಶ್ ಕುಮಾರ್, ಕೀರ್ತಿ ಕುಮಾರ್, ದೀಪು, ಅರ್ಜುನ್‌ಗೌಡ, ಮನು ಹನುಮಾನ್, ಪ್ರವೀಣ್ ಕುಮಾರ್, ಶ್ರೀಧರ್ ಮಾಯಪ್ಪ, ಸಂತೋಷ್ ಕುಮಾರ್, ಶೈನ್, ಪುನೀತ್ ಕುಮಾರ್, ಕಾರ್ತಿಕ್ ಮರಿಯಪ್ಪ, ಭರತ್ ಕುಮಾರ್ ಮತ್ತಿತರರಿದ್ದರು.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು



ಮೈಸೂರು, ಜು.7– ಬಾಗಿಲು ಮುರಿದು ಚಿನ್ನಾಭರಣ ಹಾಗೂ ನಗದು ದೋಚಿರುವುದಾಗಿ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರು ತಾಲೂಕು, ಹಂಚ್ಯಾ ಗ್ರಾಮದ ಪುಟ್ಟಾಚಾರಿ ಈ ಸಂಬಂಧ ದೂರು ನೀಡಿದ್ದಾರೆ. ಹೆಚ್.ಡಿ.ಕೋಟೆಯ ವರಮಿ ಮಾರಮ್ಮ ದೇವಸ್ಥಾನದಲ್ಲಿ ನಡೆದ ಹಬ್ಬಕ್ಕೆಂದು ಮನೆಯವರೆಲ್ಲರೂ ಜು.1ರಂದು ಹೋಗಿದ್ದೆವು. ಜು.3ರಂದು ಸಂಜೆ ವಾಪಸ್ಸಾದಾಗ ಬಾಗಿಲು ಒಡೆದಿತ್ತು. ಒಳಹೋಗಿ ನೋಡಿದಾಗ ಬೀರುವಿನ ಬಾಗಿಲು ತೆರೆದಿತ್ತು ಪರಿಶೀಲಿಸಿದಾಗ ಅದರಲ್ಲಿದ್ದ ಸುಮಾರು 40 ಗ್ರಾಂ ಚಿನ್ನಾಭರಣ ಹಾಗೂ 2 ಲಕ್ಷ ನಗದು ಕಳುವಾಗಿತ್ತು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಡಿಜಿ ಯಾತ್ರಾ ಆ್ಯಪ್: ಇದೇ ತಿಂಗಳು ಕನ್ನಡ, ಹಿಂದಿ, ಬೆಂಗಾಲಿ, ತಮಿಳು, ಮರಾಠಿ ಭಾಷೆಯಲ್ಲೂ ಲಭ್ಯ

ನವದೆಹಲಿ, ಜು.7– ವಿಮಾನ ನಿಲ್ದಾಣದ ಪ್ರವೇಶ, ಭದ್ರತಾ ತಪಾಸಣೆ ಪ್ರದೇಶಗಳು ಮತ್ತು ವಿಮಾನ ಬೋರ್ಡಿಂಗ್ ಸೇರಿದಂತೆ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಮುಖ ಗುರುತಿಸುವಿಕೆಯ ವ್ಯವಸ್ಥೆಯನ್ನು ಆಧರಿಸಿರುವ ಡಿಜಿ ಯಾತ್ರಾ ಆ್ಯಪ್ ಅನ್ನು 2028 ರ ವೇಳೆಗೆ ಸುಮಾರು ಶೇ. 80 ರಷ್ಟು ದೇಶಿ ವಿಮಾನ ಪ್ರಯಾಣಿಕರು ಬಳಸುವ ನಿರೀಕ್ಷೆಯಿದೆ ಎಂದು ಸಿಇಒ ಸುರೇಶ್ ಖಡಕಭಾವಿ ತಿಳಿಸಿದ್ದಾರೆ.

ಇದರ ದೈನಂದಿನ ಬಳಕೆ ಪ್ರಸ್ತುತ ಶೇಕಡಾ 30 ರಿಂದ 35 ರಷ್ಟಿದೆ. ಬಹುಶಃ, ಭಾಷೆ ಅಡ್ಡಿಯಾಗುವ ಸಾಧ್ಯತೆಯಿಂದ ವಿವಿಧ ಭಾಷೆಗಳಿಗೆ ಹೊಂದಿಕೆಯಾಗುವಂತೆ ಆ್ಯಪ್ ಪರಿಚಯಿಸಲಾಗುತ್ತಿದೆ. ಸದ್ಯ ಇಂಗ್ಲೀಷ್‌ನಲ್ಲಿ ಮಾತ್ರ ಲಭ್ಯವಿದ್ದು, ಇದೇ ತಿಂಗಳಲ್ಲಿ ಹಿಂದಿ, ಬೆಂಗಾಲಿ, ತಮಿಳು, ಮರಾಠಿ ಮತ್ತು ಕನ್ನಡ ಭಾಷೆಯಲ್ಲಿ ಪರಿಚಯಿಸಲಾಗುವುದು ಎಂದು ಹೇಳಿದರು.

ಮೈಸೂರಿನ ವೈದ್ಯೆಗೆ ಐವಿಎಫ್ ಪ್ರಶಸ್ತಿ



ಮೈಸೂರು, ಜು.7–ಇತ್ತೀಚೆಗೆ ದೆಹಲಿಯಲ್ಲಿ ನಡೆದ 8ನೇ ಆವೃತ್ತಿಯ ಟೈಮ್ಸ್ ನೌ ಡಾಕ್ಟರ್‌ಡೇ ಕಾನ್ ಕ್ಲೇವ್ ಕಾರ್ಯಕ್ರಮದಲ್ಲಿ ಮೈಸೂರಿನ ಡಾ. ಜ್ಯೋತಿ ಉಮೇಶ್ ಅವರಿಗೆ ಭಾರತದ ಪ್ರೇರಣಾದಾಯಕ ಗೈನಕಾಲಜಿಸ್ಟ್ (ಐವಿಎಫ್) ಪ್ರಶಸ್ತಿ ನೀಡಲಾಯಿತು. ಈ ಪ್ರಶಸ್ತಿ ಅವರು ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ (ಎಆರ್‌ಟಿ) ಕ್ಷೇತ್ರದಲ್ಲಿ ನೀಡಿದ ಶ್ರೇಷ್ಠ ಸೇವೆ ಮತ್ತು ನೂರಾರು ಕುಟುಂಬಗಳ ಬದುಕಿನಲ್ಲಿ ತಂದಿರುವ ಬೆಳಕಿನ ಪ್ರತಿಬಿಂಬವಾಗಿದೆ. ಐವಿಎಫ್ ಕ್ಷೇತ್ರದಲ್ಲಿ ನೈತಿಕತೆ, ಡಾ. ಜ್ಯೋತಿ ಉಮೇಶ್ ಅವರು ವೈಜ್ಞಾನಿಕವಾದ ಪ್ರಯೋಗಶೀಲತೆ ಮತ್ತು ಮಾನವೀಯ ಸ್ಪರ್ಶದೊಂದಿಗೆ ನೂರಾರು ಕುಟುಂಬಗಳಿಗೆ ಸಂತಾನ ಕನಸನ್ನು ನನಸು ಮಾಡಿದ್ದಾರೆ. ತಮ್ಮ ರೋಗಿಗಳೊಂದಿಗೆ ಸಹಾನುಭೂತಿಯ ದೃಷ್ಟಿಕೋನ ಮತ್ತು ವೈದ್ಯಕೀಯ ಶ್ರೇಷ್ಠತೆಯ ಮೂಲಕ ಅವರು ಈ ಕ್ಷೇತ್ರದಲ್ಲಿ ಅಪಾರ ಗೌರವ ಗಳಿಸಿದ್ದಾರೆ.

ವೈದ್ಯರಿಗೆ ರಕ್ಷಣೆ ನೀಡುವ ಕಾನೂನು ಮತ್ತಷ್ಟು ಬಲಪಡಿಸಬೇಕು

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ॥ ಕೆ.ಎಸ್. ರವೀಂದ್ರನಾಥ್ ಒತ್ತಾಯ


ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ ವಿಶ್ವ ವೈದ್ಯರ ದಿನಾಚರಣೆಯಲ್ಲಿ ಸಾಧಕ ವೈದ್ಯರಿಗೆ ‘ವೈದ್ಯಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಜು.7(ಎಂಟಿವೈ)– ವೈದ್ಯರ ಮೇಲಿನ ಹಲ್ಲೆ, ನಿಂದನೆ, ಆಸ್ಪತ್ರೆಗಳ ಮೇಲೆ ದಾಳಿಗೆ ಕಡಿವಾಣ ಹಾಕುವುದರೊಂದಿಗೆ ವೈದ್ಯರಿಗೆ ರಕ್ಷಣೆ ನೀಡುವ ಕಾನೂನು ಮತ್ತಷ್ಟು ಬಲಪಡಿಸಬೇಕು ಎಂದು ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಕೆ.ಎಸ್.ರವೀಂದ್ರನಾಥ್ ಒತ್ತಾಯಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ ವಿಶ್ವ ವೈದ್ಯರ ದಿನಾಚರಣೆ, ಸಾಧಕ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನರ ಜೀವ ರಕ್ಷಿಸುವ ವೈದ್ಯರು ನಿರ್ಲಕ್ಷ್ಯ ಮಾಡಿದ್ದಾರೆಂಬ ಆರೋಪಕ್ಕೆ ಒಳಗಾಗಿ ರೋಗಿಗಳ ಸಂಬಂಧಿಕರಿಂದ ನಿಂದನೆ, ಹಲ್ಲೆಗೆ ಒಳಗಾಗುತ್ತಿದ್ದಾರೆ. ಅಲ್ಲದೆ, ಆಸ್ಪತ್ರೆಗಳ ಮೇಲೆ ದಾಳಿ ನಡೆಯುತ್ತಿರುವ ಪ್ರಕರಣ ಹೆಚ್ಚಾಗುತ್ತಿದೆ. ಇದಕ್ಕಾಗಿ ರಕ್ಷಣೆ ಕೋರಿ ಹಾಗೂ ಹಲ್ಲೆ, ದಾಳಿಯಂತಹ ಪ್ರಕರಣಕ್ಕೆ ಕಡಿವಾಣ ಹಾಕಲು ಕಠಿಣ ಕಾನೂನು ರೂಪಿಸುವಂತೆ ಆಗ್ರಹಿಸಿ ವೈದ್ಯರು ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ವೈದ್ಯರಿಗೆ ರಕ್ಷಣೆ ಒದಗಿಸುವ ಕಾನೂನು ಇದೆಯಾದರೂ, ಅದನ್ನು ಮತ್ತಷ್ಟು ಬಲಪಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ಸಂದರ್ಭದಲ್ಲಿ ವೈದ್ಯರು ಸಾಕಷ್ಟು ಸವಾಲುಗಳನ್ನು ಎದುರಿಸುವಂತಾಗಿದೆ. 30 ವರ್ಷ ಅಧ್ಯಯನ, ಕಲಿಕೆ, ಸೇವೆಯಲ್ಲಿ ಕಳೆಯಬೇಕು. 10 ವರ್ಷ ಹೆಸರು ಮಾಡಲು ಪ್ರಯತ್ನಿಸುತ್ತೇವೆ. ಹೀಗಾಗಿ, ವೈದ್ಯರಿಗೆ ಕುಟುಂಬದವರೊಂದಿಗೆ ಇರಲು ಸಮಯ ಇಲ್ಲವಾಗಿದೆ. ಆಸ್ಪತ್ರೆಗಳಲ್ಲಿ ಸಿಬ್ಬಂದಿ ಮತ್ತು ಸೌಲಭ್ಯ ಕೊರತೆ ಇದ್ದರೂ ಸಮಸ್ಯೆಗಳ ನಡುವೆಯೇ ವೈದ್ಯರು ಸೇವೆ ಸಲ್ಲಿಸಬೇಕಾದ ಅನಿವಾರ್ಯತೆ ಎಂದರು.

ಹೃದ್ರೋಗಕ್ಕೆ ಕಾರಣ: ಪಿಜ್ಜಾ, ಬರ್ಗರ್, ಸಂಸ್ಕರಿಸದ ಆಹಾರ ಸೇವನೆ ಹಾಗೂ ಅತಿಯಾದ ಬೊಜ್ಜು ಕೂಡ ಹೃದಯ ಘಾತಕ್ಕೆ ಕಾರಣವಾಗುತ್ತಿದೆ. ಹೆಚ್ಚಾಗಿ ಧೂಮಪಾನ, ಗಾಂಜಾ, ಮಾದಕ ದ್ರವ್ಯಗಳ ಸೇವನೆ, ಮಾನಸಿಕ ಒತ್ತಡ, ಪರಿಸರ ಮಾಲಿನ್ಯದಿಂದಲೂ ಹೃದ್ರೋಗಕ್ಕೆ ತುತ್ತಾಗುತ್ತಿದ್ದಾರೆ ಎಂದು ಅವರು ತಿಳಿಸಿದರು.

ವೈದ್ಯಶ್ರೀ ಪ್ರಶಸ್ತಿ ಪ್ರದಾನ: ಆರೋಗ್ಯ ಸಲಹೆಗಾರ ಡಾ. ಜಯಪ್ರಕಾಶ್ ನಾರಾಯಣ್, ರಾಜಶೇಖರ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ರಾಜಶೇಖರ್, ಸಿಗ್ಮಾ ಆಸ್ಪತ್ರೆ ಹಿರಿಯ ಮಹಿಳಾ ವೈದ್ಯಾಧಿಕಾರಿ ಡಾ. ರಾಜೇಶ್ವರಿ, ಯೂರೋಕೇರ್ ಆಸ್ಪತ್ರೆಯ ಕನ್ಸಲ್ಟೆಂಟ್ ಯುರೋಲೋಜಿಸ್ಟ್ ಡಾ.ಎಸ್. ಕುಮಾರ್ ರಾಜ್ ಅರಸ್, ಅಗರವಾಲ್ ಕಣ್ಣಿನ ಆಸ್ಪತ್ರೆ ವೈದ್ಯಕೀಯ ನಿರ್ದೇಶಕಿ ಡಾ. ಕವಿತಾವಾಡಿ ಮತ್ತು ಮೇಘಾ ಪಾಲಿಕ್ಲಿನಿಕ್ ಹಿರಿಯ ನರರೋಗ ತಜ್ಞ ಡಾ.ಪಿ. ಶಾಸ್ತ್ರಾರ ಅವರಿಗೆ ‘ವೈದ್ಯಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸದಾನಂದ, ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಎಸ್. ರಾಧಾಕೃಷ್ಣ ರಾಮರಾವ್, ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಜಿ.ಆರ್. ಅರಸ್, ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥ್ ರಾಜೇ ಅರಸ್, ಉಪಾಧ್ಯಕ್ಷ ಎಚ್.ಎಂ.ಟಿ. ಲಿಂಗರಾಜೇ ಅರಸ್ ಇದ್ದರು.

ಆರ್‌ಎಸ್‌ಎಸ್ ನಿಷೇಧ ಹೇಳಿಕೆ ಅಕ್ಷಮ್ಯವಾದುದು



ಮೈಸೂರು, ಜು.7– ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವು ಭಾರತ ದೇಶದ ಮುಕುಟವಿದ್ದಂತೆ. ಈ ಸಂಘಟನೆಯನ್ನು ಬ್ಯಾನ್ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಉಪಮೇಯರ್ ವಿ.ಶೈಲೇಂದ್ರ ಹೇಳಿದ್ದಾರೆ.

ಆರ್‌ಎಸ್‌ಎಸ್ ಬ್ಯಾನ್ ಮಾಡಬೇಕೆಂದು ಹೇಳಿರುವ ಸಚಿವ ಪ್ರಿಯಾಂಕ್ ಖರ್ಗೆ, ಮೊದಲು ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಲಿ. ಶಿಸ್ತು, ಸಂಯಮ ಹಾಗೂ ಪ್ರಮಾಣಿಕತೆಯ ಪ್ರತಿರೂಪವಾಗಿರುವ ಆರ್‌ಎಸ್‌ಎಸ್ ನಮ್ಮ ದೇಶಕ್ಕೆ ಮುಕುಟವಿದ್ದಂತೆ ದೇಶದ ಉತ್ತಮ ಭವಿಷ್ಯಕ್ಕಾಗಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಶ್ರಮಿಸುತ್ತಿರುವ ದೇಶಭಕ್ತ ಸಂಘಟನೆ ಬಗ್ಗೆ ಸಚಿವರು ಯೋಚಿಸಿ, ಮಾತನಾಡಬೇಕು. ಜವಾಬ್ದಾರಿಯುತ ಸ್ಥಾನದಲ್ಲಿದ್ದು ಆರ್‌ಎಸ್‌ಎಸ್ ಬ್ಯಾನ್ ಮಾಡಬೇಕು ಎಂದಿರುವುದು ಅಕ್ಷಮ್ಯ ಹಾಗೂ ಅದು ಯಾರಿಂದಲೂ ಸಾಧ್ಯವಾಗದು ಎಂದು ಕಿಡಿಕಾರಿದ್ದಾರೆ.

ಆರ್‌ಎಸ್‌ಎಸ್ ಕಾರ್ಯಕರ್ತರು ದೇಶ ರಕ್ಷಣೆಗಾಗಿ ತ್ಯಾಗ–ಬಲಿದಾನದೊಂದಿಗೆ ಹೋರಾಟ ಮಾಡುತ್ತಿದ್ದಾರೆ. ದೇಶದ ಏಕತೆ ಮತ್ತು ಸಮನ್ವಯತೆಗಾಗಿ ಶ್ರಮಿಸುತ್ತಿದ್ದಾರೆ. ಯಾವುದೇ ದೇಶದ್ರೋಹಿ ಚಟುವಟಿಕೆಗಳಲ್ಲಿ ಸಂಘದ ಯಾರೊಬ್ಬ ಸದಸ್ಯರು ಭಾಗಿಯಾಗಿಲ್ಲ. ಹೀಗಿರುವಾಗ ಪ್ರಿಯಾಂಕ್ ಖರ್ಗೆ ಇಂತಹ ಹೇಳಿಕೆ ನೀಡಿರುವುದು ಸಮಂಜಸವಲ್ಲ. ಆರ್‌ಎಸ್‌ಎಸ್ ಬಗ್ಗೆ ಆರೋಪಿಸುವ ಬದಲು ಇಲ್ಲೇ ಇದ್ದು ದೇಶದ ವಿರುದ್ಧ ಮಸಲತ್ತು ನಡೆಸುವವರನ್ನು ಮೊದಲು ಆಚೆ ಕಳುಹಿಸಲಿ. ಭಾರತ ಮಾತೆಗೆ ಅವಮಾನ ಮಾಡಿ, ಭಯೋತ್ಪಾದನೆ ಕೃತ್ಯಗಳಲ್ಲಿ ಭಾಗಿಯಾಗಿ ಸಾಕ್ಷಿ ಸಮೇತ ಸಿಕ್ಕಿಬಿದ್ದವರನ್ನು ಗಡಿಪಾರು ಮಾಡಲಿ ಎಂದು ಪತ್ರಿಕಾ ಹೇಳಿಕೆಯಲ್ಲಿ ಶೈಲೇಂದ್ರ ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಮೊಬೈಲ್ ಫೋಟೋಗ್ರಫಿ ಕಾರ್ಯಾಗಾರ



ಮೈಸೂರಿನ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಸಭಾಂಗಣದಲ್ಲಿ ಮೊಬೈಲ್ ಫೋಟೋಗ್ರಫಿ ಕಾರ್ಯಾಗಾರ ನಡೆಯಿತು.

ಮೈಸೂರು,ಜು.7–ಮೈಸೂರಿನ ಸರಸ್ವತಿ ಪುರಂನಲ್ಲಿರುವ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಸಭಾಂಗಣದಲ್ಲಿ ಮೊಬೈಲ್ ಫೋಟೋಗ್ರಫಿ, ವಿಡಿಯೋಗ್ರಫಿಯ ಒಂದು ದಿನದ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಬೆಂಗಳೂರು, ತುಮಕೂರು, ಶಿರಾ, ಚಾಮರಾಜನಗರ ಸೇರಿದಂತೆ ವಿವಿಧೆಡೆಗಳಿಂದ ಬಂದಿದ್ದ 40ಕ್ಕೂ ಹೆಚ್ಚು ಆಸಕ್ತರು ಕಾರ್ಯಾಗಾರದಲ್ಲಿ ತರಬೇತಿ ಪಡೆದರು. ವೈದ್ಯರು, ಸಾಫ್ಟ್‌ವೇರ್ ಇಂಜಿನಿಯರ್ಸ್, ಬ್ಯಾಂಕ್ ಮ್ಯಾನೇಜರ್‌ಗಳು, ಶಿಕ್ಷಕರು, ಉದ್ಯಮಿಗಳು, ಕಾಲೇಜು ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದುದು ವಿಶೇಷವಾಗಿತ್ತು. ಅನುಭವಿ ಛಾಯಾಗ್ರಾಹಕರಾದ ಬಿ.ಎಸ್.ರಾಜಾರಾಂ ಹಾಗೂ ಜಿ.ಎಲ್.ತ್ರಿಪುರಾಂತಕ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಿದರು. ಮೊಬೈಲ್ ಕ್ಯಾಮೆರಾದಲ್ಲಿ ಉತ್ತಮ ಚಿತ್ರ ಹಾಗೂ ವಿಡೀಯೋಗಳನ್ನು ಸೆರೆಹಿಡಿಯುವ ಕೌಶಲ. ಅಷ್ಟೇ ಅಲ್ಲದೆ ಸುಲಭವಾಗಿ ಎಡಿಟ್ ಮಾಡಬಹುದಾದ ತಂತ್ರಜ್ಞಾನವನ್ನು ಕಾರ್ಯಾಗಾರದಲ್ಲಿ ಪ್ರಾತ್ಯಕ್ಷಿಕೆ ಸಹಿತ ತರಬೇತಿ ನೀಡಲಾಯಿತು.

ಸಾಮಾಜಿಕ ಜಾಲತಾಣಗಳಿಗೆ ಉಪಯುಕ್ತವಾದ ಫೋಟೋ ಹಾಗೂ ವಿಡೀಯೋಗಳನ್ನು ಅಪ್‌ಲೋಡ್ ಮಾಡುವ ಕುರಿತು ಅಗತ್ಯ ಮಾಹಿತಿ ನೀಡಲಾಯಿತು. ಸ್ಥಳದಲ್ಲಿಯೇ ಒಂದು ಛಾಯಾಚಿತ್ರ ಸ್ಪರ್ಧೆ ಏರ್ಪಡಿಸಿ, ಉತ್ತಮ ಚಿತ್ರ ಸೆರೆಹಿಡಿದ ಡಾ.ಜಗನ್ನಾಥ ಬಿ.ಸಿ. ಹಾಗೂ ಅಶ್ವಿನ್ ಅವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಸದಸ್ಯರಿಗೂ ಸರ್ಟಿಫಿಕೇಟ್ ನೀಡಲಾಯಿತು. ಈ ಕಾರ್ಯಾಗಾರದಲ್ಲಿ ಮೊಬೈಲ್ ಫೋನ್‌ನಲ್ಲಿ ಸೆರೆಹಿಡಿದಿದ್ದ 60ಕ್ಕೂ ಹೆಚ್ಚು ಅತ್ಯುತ್ತಮ ಚಿತ್ರಗಳ ಪ್ರದರ್ಶನವನ್ನು ಸಹ ಏರ್ಪಡಿಸಿದ್ದುದು ವಿಶೇಷವಾಗಿತ್ತು.

ಸರ್ಕಾರಿ ಆಸ್ಪತ್ರೆಗಳಲ್ಲಿ ಶವಪರೀಕ್ಷೆ ವರದಿ ಸೇರಿದಂತೆ ಹಲವು ಆರೋಗ್ಯ ದಾಖಲಾತಿ ಡಿಜಿಟಲೀಕರಣ



ಬೆಂಗಳೂರು, ಜು.7– ಆರೋಗ್ಯ ಇಲಾಖೆಯು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ವೈದ್ಯಕೀಯ–ಕಾನೂನು ಪ್ರಮಾಣಪತ್ರಗಳು (MLC) ಮತ್ತು ಮರಣೋತ್ತರ ವರದಿಗಳನ್ನು ನೀಡಲು ರಾಷ್ಟ್ರೀಯ ಮಾಹಿತಿ ಕೇಂದ್ರ ಅಭಿವೃದ್ಧಿಪಡಿಸಿದ ಡಿಜಿಟಲ್ ವೇದಿಕೆಯಾದ MedLEaPR (ವೈದ್ಯಕೀಯ ಕಾನೂನು ಪರೀಕ್ಷೆ ಮತ್ತು ಮರಣೋತ್ತರ ವರದಿಗಳು) ಪೋರ್ಟಲ್ ಅನ್ನು ಕಾರ್ಯಗತಗೊಳಿಸಲು ಕಡ್ಡಾಯಗೊಳಿಸಿದೆ.

ಜುಲೈ 5ರಂದು ಹೊರಡಿಸಿದ ಆದೇಶದಲ್ಲಿ, MedLEaPR ಈಗ ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ MLCಗಳು ಮತ್ತು PMRಗಳನ್ನು ತಯಾರಿಸಲು ಹಾಗೂ ಸಲ್ಲಿಸಲು ಪ್ರತ್ಯೇಕವಾಗಿ ಬಳಸಬೇಕು ಎಂದು ಇಲಾಖೆ ಹೇಳಿದೆ. ಕೈಬರಹದ ವರದಿಗಳನ್ನು ಇನ್ನು ಮುಂದೆ ಸ್ವೀಕರಿಸಲಾಗುವುದಿಲ್ಲ ಎಂದು ತಿಳಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಡಿಯಲ್ಲಿ MLCಗಳು ಮತ್ತು PMRಗಳನ್ನು ನೀಡುವಲ್ಲಿ ತೊಡಗಿರುವ ಎಲ್ಲಾ ವೈದ್ಯರು ಮತ್ತು ವೈದ್ಯಕೀಯ ಅಧಿಕಾರಿಗಳು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಅವರ ನೋಂದಣಿಗಳನ್ನು ಸಲ್ಲಿಸಿದ ಎರಡು ದಿನಗಳಲ್ಲಿ ಗೊತ್ತುಪಡಿಸಿದ ನೋಡಲ್ ಅಧಿಕಾರಿಯು ಅವರ ಅಧಿಕೃತ ಆಸ್ಪತ್ರೆ IDಯ ಆಧಾರದ ಮೇಲೆ ಪರಿಶೀಲಿಸಬೇಕು ಮತ್ತು ಅನುಮೋದಿಸಬೇಕು.

ಪೋರ್ಟಲ್ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸದಿದ್ದರೆ, ವೈದ್ಯರು ತಕ್ಷಣವೇ ನಿಗದಿತ ಸ್ವರೂಪದಲ್ಲಿ ಕಂಪ್ಯೂಟರ್–ಟೈಪ್ ಮಾಡಿದ ವರದಿ ನೀಡಬೇಕು. ಅದನ್ನು 24 ಗಂಟೆಗಳ ಒಳಗೆ ಪೋರ್ಟಲ್‌ಗೆ ಅಪ್‌ಲೋಡ್ ಮಾಡಬೇಕು. ವರದಿಗಳನ್ನು ಸಿದ್ಧಪಡಿಸಿದ ಏಳು ದಿನಗಳಲ್ಲಿ ಅಂತಿಮಗೊಳಿಸಬೇಕು. ಈ ಸಮಯ ಮಿತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶಿಸಲಾಗಿದೆ ಮತ್ತು ಯಾವುದೇ ಉಲ್ಲಂಘನೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮಾಜಿ ಗೆಳತಿಗೆ ಅಶ್ಲೀಲ ಸಂದೇಶ ಕಳಿಸಿದ ವ್ಯಕ್ತಿ ಅಪಹರಣ, ಹಲ್ಲೆ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಪ್ರಿಯತಮೆಗೆ ಅಶ್ಲೀಲ ಸಂದೇಶ ರವಾನಿಸಿದ ಎಂಬ ಕಾರಣಕ್ಕೆ ವ್ಯಕ್ತಿಯೊಬ್ಬನ ಅಪಹರಣ ಮಾಡಿ, ಬೆತ್ತಲೆಗೊಳಿಸಿ, ಭೀಕರವಾಗಿ ಹಲ್ಲೆ ಮಾಡಲಾಗಿದೆ. 8 ರಿಂದ 10 ಜನರ ಪುಂಡರ ಗ್ಯಾಂಗ್ ವ್ಯಕ್ತಿಯೊಬ್ಬನನ್ನು ಅಪಹರಿಸಿ ಹಲ್ಲೆ ಮಾಡಿದೆ.

ಅಲ್ಲದೆ, ಆರೋಪಿಗಳಲ್ಲಿ ಒಬ್ಬರು ಈ ಘಟನೆಯ ವಿಡಿಯೋ ಮಾಡಿದ್ದು, ಈ ದೃಶ್ಯದಲ್ಲಿ ದಾಳಿಕೋರರು ಕುಶಾಲ್ ಅವರನ್ನು ಥಳಿಸಿ, ವಿವಸ್ತ್ರಗೊಳಿಸಿ, ಅವರ ಖಾಸಗಿ ಭಾಗಗಳಿಗೆ ಹೊಡೆಯುವುದನ್ನು ತೋರಿಸಲಾಗಿದೆ. ಹೆಸರುಘಟ್ಟದಲ್ಲಿ ಈ ಘಟನೆ ನಡೆದಿದೆ ಎಂದು ರಾಷ್ಟ್ರೀಯ ಮಾಧ್ಯಮವೊಂದು ವರದಿ ಮಾಡಿದೆ.

ಆಗಿದ್ದೇನು: ಕುಶಾಲ್ ಎರಡು ವರ್ಷಗಳ ಕಾಲ ಕಾಲೇಜು ವಿದ್ಯಾರ್ಥಿನಿಯೊಬ್ಬಳೊಂದಿಗೆ ಸ್ನೇಹ ಸಂಬಂಧ ಹೊಂದಿದ್ದ. ಆದರೆ, ಕೆಲವು ತಿಂಗಳ ಹಿಂದೆ ಈ ಜೋಡಿ ಕಾರಣಾಂತರಗಳಿಂದ ಬೇರ್ಪಟ್ಟರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ ಹುಡುಗಿ ಇನ್ನೊಬ್ಬ ವ್ಯಕ್ತಿಯೊಂದಿಗೆ ಸಂಬಂಧ ಬೆಳೆಸಿಕೊಂಡಳು. ಇದರಿಂದ ಕೋಪಗೊಂಡ ಕುಶಾಲ್ ಹುಡುಗಿಗೆ ಕೆಲವು ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದಾನೆ. ಈ ವೇಳೆ ಯುವತಿ ತನ್ನ ಗೆಳೆಯನಿಗೆ ಮಾಹಿತಿ ನೀಡಿದ್ದಾಳೆ. ಈ ವೇಳೆ ಕುಶಾಲ್ ಬಗ್ಗೆ ಆಕ್ರೋಶಗೊಂಡ ಆಕೆಯ ಗೆಳೆಯ ತನ್ನ ಸ್ನೇಹಿತರೊಂದಿಗೆ ಸೇರಿ ದಾಳಿಗೆ ಯೋಜನೆ ರೂಪಿಸಿದ್ದ. ಅದರಂತೆ ಇವರು ಸಮಸ್ಯೆ ಪರಿಹರಿಸುವ ನೆಪದಲ್ಲಿ ಆತನನ್ನು ಕಾರಿನಲ್ಲಿ ಕರೆದುಕೊಂಡು ಹೋದರು.

ಆರೋಪಿಗಳು ಅವನನ್ನು ಕಾರಿನಲ್ಲಿ ಅಪಹರಿಸಿ, ಕೆರೆಯ ಬಳಿಯ ನಿರ್ಜನ ಸ್ಥಳಕ್ಕೆ ಕರೆದೊಯ್ದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಬಳಿಕ ಆತನನ್ನು ಬೆತ್ತಲೆ ಮೇಲೆ ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿ, ಸ್ಥಳದಿಂದ ಓಡಿಸಲಾಗಿದೆ. ಸಂತ್ರಸ್ಥ ವ್ಯಕ್ತಿ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇಲ್ಲಿಯವರೆಗೆ 8 ಜನರನ್ನು ಬಂಧಿಸಿದ್ದಾರೆ.

2027ರ ಜನಗಣತಿಯಲ್ಲಿ ನಿಮ್ಮ ದತ್ತಾಂಶವನ್ನು ನೀವೇ ದಾಖಲಿಸಬಹುದು

ನವದೆಹಲಿ, ಜು.7– 2027ರ ಮಾ. 1ರಿಂದ ರಾಷ್ಟ್ರಾದ್ಯಂತ ಜನಗಣತಿ ಆರಂಭವಾಗಲಿದೆ. ಹಿಮಾಚಲಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಲಡಾಖ್‌ನಲ್ಲಿ 2026ರ ಅಕ್ಟೋಬರ್‌ನಿಂದಲೇ ಜನಗಣತಿ ಆರಂಭವಾಗಲಿದೆ. ಮುಂದಿನ ಜನಗಣತಿಯಲ್ಲಿ ಸರ್ಕಾರದ ಪ್ರತಿನಿಧಿಗಳು ನಿಮ್ಮ ಮನೆ ಬಾಗಿಲಿಗೆ ಬಂದು ಮನೆಯವರ ದತ್ತಾಂಶ ಸಂಗ್ರಹಿಸುತ್ತಾರೆ. ಇದೇ ಮೊಟ್ಟಮೊದಲ ಬಾರಿಗೆ ಈ ಬಾರಿಯ ಜನಗಣತಿಯು ಡಿಜಿಟಲ್ ಸ್ವರೂಪದಲ್ಲಿ ನಡೆಯಲಿದೆ. ಅಂದರೆ, ನಿಮ್ಮ ಮನೆಗೆ ದತ್ತಾಂಶ ಸಂಗ್ರಹಿಸಲು ಬರುವ ಪ್ರತಿನಿಧಿಗಳು, ತಮ್ಮಲ್ಲಿರುವ ವಿದ್ಯುನ್ಮಾನ ಪರಿಕರಗಳ ಮೂಲಕ ಈ ಬಾರಿಯ ಜನಗಣತಿಗಾಗಿಯೇ ರೂಪಿಸಲಾಗುವ ವಿಶೇಷ ವೆಬ್‌ಸೈಟ್‌ನಲ್ಲಿ ದತ್ತಾಂಶಗಳನ್ನು ದಾಖಲಿಸಲಿದ್ದಾರೆ.

ಕೇವಲ ಪ್ರತಿನಿಧಿಗಳಷ್ಟೇ ಅಲ್ಲ. ಖುದ್ದು ನೀವು ಸಹ ನಿಮ್ಮ ಹಾಗೂ ನಿಮ್ಮ ಮನೆಯವರ ದತ್ತಾಂಶವನ್ನು, ಅದೇ ನಿಗದಿತ ವೆಬ್‌ಸೈಟ್‌ಗೆ ಭೇಟಿ ನೀಡಿ, ದತ್ತಾಂಶವನ್ನು ದಾಖಲಿಸಬಹುದು. ಇದಕ್ಕಾಗಿ ಪ್ರತ್ಯೇಕ ವಿದ್ಯುನ್ಮಾನ ಉಪಕರಣ ಬೇಕಾಗಿಲ್ಲ. ಬದಲಿಗೆ ನಿಮ್ಮ ಕೈಯ್ಯಲ್ಲಿರುವ ಆಂಡ್ರಾಯ್ಡ್ ಫೋನ್ ಅಥವಾ ಐಫೋನ್‌ಗಳ ಮೂಲಕವೇ ವೆಬ್‌ಸೈಟಿನಲ್ಲಿ ಡೇಟಾ ದಾಖಲಿಸಬಹುದು. ಈ ಎಲ್ಲಾ ಮಾಹಿತಿಗಳನ್ನು ಟ್ಯಾಂಪರ್ ಪ್ರೂಫ್ ಮಾದರಿಯಲ್ಲಿ ಸರ್ವರ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ.

ಈ ಬಾರಿಯ ಸೆನ್ಸಸ್‌ನಲ್ಲಿ ಮೊದಲು ಮನೆಗಳ ಸಂಖ್ಯೆಯನ್ನು ಪಟ್ಟಿ ಮಾಡಲಾಗುತ್ತದೆ. ಆನಂತರ ಜನಸಂಖ್ಯೆಯನ್ನು (ಎಚ್‌ಎಲ್‌ಒ) ದಾಖಲಿಸಲಾಗುತ್ತದೆ. ಅಷ್ಟೇ ಅಲ್ಲದೆ ಈ ಬಾರಿ, ಜಾತಿ ಗಣತಿಯನ್ನು ನಡೆಸಲಾಗುತ್ತದೆ ಎಂದು ಖುದ್ದು ಕೇಂದ್ರ ಸರ್ಕಾರವೇ ತಿಳಿಸಿದೆ. ಹಾಗಾಗಿ ಈ ಬಾರಿಯ ಜನಸಂಖ್ಯೆಯು ಅತ್ಯಂತ ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಪ್ರಧಾನ ಮಾಹಿತಿ ಮತ್ತು ಜನಗಣತಿ ಆಯುಕ್ತರಾದ ಮೃತ್ಯುಂಜಯ ಕುಮಾರ್ ನಾರಾಯಣ್ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದ್ದು, ಜನಗಣತಿಗಾಗಿ, ಎಲ್ಲಾ ಹಳ್ಳಿಗಳು ಮತ್ತು ಪಟ್ಟಣಗಳನ್ನು ಏಕರೂಪದ ಎಣಿಕೆ ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ ಮತ್ತು ಜನಸಂಖ್ಯೆ ಎಣಿಕೆಯ ಸಮಯದಲ್ಲಿ ಯಾವುದೇ ಲೋಪ ಅಥವಾ ಪುನರಾವರ್ತನೆಯನ್ನು ತಪ್ಪಿಸಲು ಪ್ರತಿ ಬ್ಲಾಕ್‌ಗೆ ಒಬ್ಬ ಪ್ರತಿನಿಧಿಯನ್ನು ಅಥವಾ ಜನಗಣತಿದಾರರನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ.

ಭಾರತದ ಅಧ್ಯಕ್ಷತೆಯಲ್ಲಿ ಬ್ರಿಕ್ಸ್‌ಗೆ ಹೊಸ ರೂಪ

ರಿಯೊ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭರವಸೆ



ರಿಯೋ: ಭಾರತ ಬ್ರಿಕ್ಸ್ ಅನ್ನು ಸಹಕಾರ ಮತ್ತು ಸುಸ್ಥಿರತೆಯೆಡೆಗೆ ಹೊಸ ರೂಪದಲ್ಲಿ ವ್ಯಾಖ್ಯಾನಿಸಲು ಕೆಲಸ ಮಾಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ರಿಯೊ ಶೃಂಗಸಭೆಯಲ್ಲಿ ಹೇಳಿದ್ದಾರೆ.

ಮುಂದಿನ ವರ್ಷ ಭಾರತ ಬ್ರಿಕ್ಸ್ ಅಧ್ಯಕ್ಷತೆಯನ್ನು ವಹಿಸಲಿದೆ. ಪರಿಸರ ಮತ್ತು ಜಾಗತಿಕ ಆರೋಗ್ಯದ ಕುರಿತಾದ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಭೂಮಿಯ ಆರೋಗ್ಯ ಮತ್ತು ಜನರ ಆರೋಗ್ಯ ಪರಸ್ಪರ ಸಂಬಂಧ ಹೊಂದಿದೆ ಎಂದು ಹೇಳಿದ್ದಾರೆ. ಭಾರತಕ್ಕೆ ಕ್ಲೈಮೆಟ್ ಜಸ್ಟಿಸ್ ಪರ್ಯಾಯವಲ್ಲ, ಅದು ನೈತಿಕ ಕರ್ತವ್ಯ. ಕೆಲವರು ಇದನ್ನು ಸಂಖ್ಯೆಯಲ್ಲಿ ಅಳೆದರೆ, ಭಾರತ ಮೌಲ್ಯಗಳಲ್ಲಿ ಬದುಕುತ್ತದೆ ಎಂದು ಮೋದಿ ಹೇಳಿದ್ದಾರೆ. ಬ್ರಿಕ್ಸ್ ಗುಂಪಿನ ಅಧ್ಯಕ್ಷತೆಯಲ್ಲಿ ಭಾರತದ ಸಂಭಾವ್ಯ ಆದ್ಯತೆಗಳನ್ನು ಪ್ರಧಾನಿ ಮೋದಿ ಇದೇ ವೇಳೆ ಸೂಚಿಸಿದ್ದಾರೆ.

ಭಾರತದ ಬ್ರಿಕ್ಸ್ ಅಧ್ಯಕ್ಷತೆಯಲ್ಲಿ, ನಾವು ಬ್ರಿಕ್ಸ್ ಅನ್ನು ಹೊಸ ರೂಪದಲ್ಲಿ ವ್ಯಾಖ್ಯಾನಿಸಲು ಕೆಲಸ ಮಾಡುತ್ತೇವೆ. ಬ್ರಿಕ್ಸ್ ಎಂದರೆ ಸಹಕಾರ ಮತ್ತು ಸುಸ್ಥಿರತೆಗಾಗಿ ಸ್ಥಿತಿಸ್ಥಾಪಕತ್ವ ಮತ್ತು ನಾವೀನ್ಯತೆಯನ್ನು ನಿರ್ಮಿಸುವುದು ಎಂದು ಮೋದಿ ಹೇಳಿದ್ದಾರೆ. ಯಾವುದೇ ಘಟನೆಗಳಿಗೆ ಸಿದ್ಧರಾಗಿರಬೇಕಾದ ಅಗತ್ಯವನ್ನು ಮೋದಿ ಒತ್ತಿ ಹೇಳಿದರು.

ವೈರಸ್‌ಗಳು ವೀಸಾ ತೆಗೆದುಕೊಂಡು ಬರುವುದಿಲ್ಲ ಮತ್ತು ಪರಿಹಾರಗಳನ್ನು ಸಹ ಪಾಸ್‌ಪೋರ್ಟ್‌ಗಳನ್ನು ನೋಡಿ ಆಯ್ಕೆ ಮಾಡುವುದಿಲ್ಲ ಎಂದು ಕೋವಿಡ್ ಸಾಂಕ್ರಾಮಿಕ ರೋಗವು ನಮಗೆ ಕಲಿಸಿದೆ ಎಂದು ಮೋದಿ ಹೇಳಿದರು. ಅಭಿವೃದ್ಧಿಶೀಲ ರಾಷ್ಟ್ರಗಳು ಭವಿಷ್ಯದ ಬಗ್ಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಂತೆ ಅದೇ ವಿಶ್ವಾಸವನ್ನು ಹೊಂದಿರಬೇಕು ಎಂದರು.

ನಿರ್ಣಾಯಕ ಖನಿಜಗಳು ಮತ್ತು ತಂತ್ರಜ್ಞಾನಕ್ಕಾಗಿ ಪೂರೈಕೆ ಸರಪಳಿಗಳನ್ನು ಸುರಕ್ಷಿತಗೊಳಿಸಲು ಬ್ರಿಕ್ಸ್ ರಾಷ್ಟ್ರಗಳು ಒಟ್ಟಾಗಿ ಕೆಲಸ ಮಾಡಬೇಕು ಮತ್ತು ಯಾವುದೇ ದೇಶವು ಈ ಸಂಪನ್ಮೂಲಗಳನ್ನು ತನ್ನ ಸ್ವಂತ ಸ್ವಾರ್ಥ ಲಾಭಕ್ಕಾಗಿ ಅಥವಾ ಇತರರ ವಿರುದ್ಧ ಆಯುಧವಾಗಿ ಬಳಸದಂತೆ ನೋಡಿಕೊಳ್ಳಬೇಕು ಎಂದು ಪ್ರಧಾನಿ ಮೋದಿ ಇದೇ ವೇಳೆ ಕರೆ ನೀಡಿದರು.

ಬಹುಪಕ್ಷೀಯತೆ, ಹಣಕಾಸು ವಿಷಯಗಳು ಮತ್ತು ಕೃತಕ ಬುದ್ಧಿಮತ್ತೆಯ ಕುರಿತಾದ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಮತ್ತು ದುರುಪಯೋಗವನ್ನು ತಡೆಗಟ್ಟಲು AI ಬಳಕೆಗೆ ಜಾಗತಿಕ ಮಾನದಂಡಗಳನ್ನು ರಚಿಸುವಂತೆಯೂ ಕರೆ ನೀಡಿದ್ದಾರೆ.

ನಿರ್ಣಾಯಕ ಖನಿಜಗಳ ಕುರಿತು ಪ್ರಧಾನಿಯವರ ಹೇಳಿಕೆಗಳು ಚೀನಾ ಪ್ರಮುಖ ಸಂಪನ್ಮೂಲಗಳ ರಫ್ತಿನ ಮೇಲಿನ ನಿರ್ಬಂಧಗಳು ಮತ್ತು ಈ ವಲಯದಲ್ಲಿ ಅದರ ಪಾರದರ್ಶಕವಲ್ಲದ ನೀತಿ ವಿಧಾನದ ಬಗ್ಗೆ ಕಳವಳ ವ್ಯಕ್ತವಾಗುತ್ತಿರುವಾಗ ಬಂದಿವೆ.

ಅಧ್ಯಕ್ಷರಾಗಿ ಆಯ್ಕೆ



ಮೈಸೂರು, ಜು. 7– ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಘಟಕ, ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರನ್ನಾಗಿ ಶ್ರೀಮತಿ ಚೋಂದಮ್ಮ ಪೂಣಚ್ಚ ಅವರನ್ನು ನೇಮಕ ಮಾಡಲಾಗಿದೆ.

ಹೊಸ ಬಗೆಯ ಸೈಬರ್ ಅಪರಾಧಗಳನ್ನು ತಡೆಗಟ್ಟಲು ಪೊಲೀಸ್ ಅಧಿಕಾರಿಗಳು ಸನ್ನದ್ಧರಾಗಬೇಕು

ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಕರೆ



ಕಾರ್ಯಾಗಾರದಲ್ಲಿ ಪೊಲೀಸ್ ಅಕಾಡೆಮಿ ನಿರ್ದೇಶಕ ಚೆನ್ನಬಸವಣ್ಣ ಮಾತನಾಡಿದರು.

ಮೈಸೂರು,ಜು.7– ಕರ್ತವ್ಯನಿರತ ಪೊಲೀಸ್ ಅಧಿಕಾರಿಗಳಿಗೆ ಸೈಬರ್ ಅಪರಾಧಗಳು ಮತ್ತು ಅವುಗಳ ಹೊಸ ಮಾದರಿಗಳು ಹಾಗೂ ಪರಿಣಾಮಕಾರಿ ತನಿಖೆ ಕುರಿತು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಯ ವತಿಯಿಂದ ಹಮ್ಮಿಕೊಂಡಿದ್ದ ಮೂರು ದಿನಗಳ ಕಾರ್ಯಾಗಾರಕ್ಕೆ ಅಕಾಡೆಮಿ ನಿರ್ದೇಶಕ ಎಸ್.ಎಲ್. ಚೆನ್ನಬಸವಣ್ಣ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದು ಪೊಲೀಸ್ ವ್ಯವಸ್ಥೆಗೆ ಹಾಗೂ ಸಮಾಜಕ್ಕೆ ಬಹಳ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸೈಬರ್ ಅಪರಾಧಗಳಿಗೆ ಮುಗ್ಧ ಜನರು ಬಲಿಪಶುಗಳಾಗುತ್ತಿದ್ದು, ನವೀನ ತಂತ್ರಜ್ಞಾನ ಬಳಸಿ ಅಪರಾಧಗಳಲ್ಲಿ ತೊಡಗುತ್ತಿರುವುದರಿಂದ, ಅವುಗಳ ತನಿಖೆ ಪೊಲೀಸ್ ವ್ಯವಸ್ಥೆಗೆ ಬಹಳ ದೊಡ್ಡ ಸವಾಲಾಗಿದೆ. ಈ ಹೊಸ ಬಗೆಯ ಸೈಬರ್ ಅಪರಾಧಗಳು ಮತ್ತು ಅವುಗಳ ಕಾರ್ಯ ವಿಧಾನಗಳ ಬಗ್ಗೆ ಪೊಲೀಸ್ ಅಧಿಕಾರಿಗಳು ಸಂವೇದನಾಶೀಲರಾಗಿ, ಸೈಬರ್ ಅಪರಾಧಗಳನ್ನು ತಡೆಗಟ್ಟಲು ಹಾಗೂ ಘಟಿಸಿರುವ ಅಪರಾಧಗಳನ್ನು ಪರಿಣಾಮಕಾರಿಯಾಗಿ ತನಿಖೆ ನಡೆಸಿ, ಸಂತ್ರಸ್ತರಿಗೆ ನ್ಯಾಯ ಒದಗಿಸುವುದು ಇಂದಿನ ಜರೂರಾಗಿದೆ ಎಂದರು.

ಈ ನಿಟ್ಟಿನಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿ ಸೇವಾನಿರತ ಪೊಲೀಸ್ ಅಧಿಕಾರಿಗಳಿಗೆ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಾಗಾರದಲ್ಲಿ ಸೈಬರ್ ಅಪರಾಧಗಳ ತನಿಖೆ ಕುರಿತು ಅಪಾರ ಜ್ಞಾನ ಹೊಂದಿರುವ ಹಿರಿಯ ಪೊಲೀಸ್ ಅಧಿಕಾರಿಗಳು, ಸೈಬರ್ ವಿಷಯದ ತಜ್ಞರು ಹಾಗೂ ಸೈಬರ್ ಶಿಕ್ಷಣ ಕ್ಷೇತ್ರದ ತಜ್ಞರಿಂದ ಪೊಲೀಸ್ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದೆ. ಅದರ ಉಪಯೋಗವನ್ನು ಪಡೆದುಕೊಂಡು, ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ತನಿಖೆ ನಡೆಸುವುದೂ ಅಲ್ಲದೇ, ಸೈಬರ್ ಅಪರಾಧಗಳು ಘಟಿಸುವ ಮೊದಲೇ ಕಾರ್ಯಪ್ರವೃತ್ತರಾಗಿ ಅವುಗಳನ್ನು ತಡೆಗಟ್ಟಿ, ಸಂತ್ರಸ್ತರಿಗೆ ಹಾಗೂ ಸಾಮಾಜಿಕ ವ್ಯವಸ್ಥೆಗೆ ನ್ಯಾಯ ಒದಗಿಸಲು ಪೊಲೀಸ್ ಅಧಿಕಾರಿಗಳು ಸನ್ನದ್ಧರಾಗಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಇಬ್ಬರು ಡಿವೈಎಸ್ಪಿ, 9 ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ 38 ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗಳು ಸೇರಿದಂತೆ ರಾಜ್ಯದ ವಿವಿಧ ಪೊಲೀಸ್ ಘಟಕಗಳ 49 ಪೊಲೀಸ್ ಅಧಿಕಾರಿಗಳು ಪಾಲ್ಗೊಂಡಿದ್ದರು. ಅಕಾಡೆಮಿ ಸಹಾಯಕ ನಿರ್ದೇಶಕ ಹಾಗೂ ಕಾರ್ಯಾಗಾರದ ಸಂಯೋಜಕ ಎಂ.ಎಚ್.ಖಾನ್ ಮತ್ತಿತರರು ಹಾಜರಿದ್ದರು.